ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 7 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 171 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಹುಲ್‌ಗೆ ತಾಯಿ ಬಲ

ಮಂಡ್ಯ ಜಿಲ್ಲೆಯ ಯಾತ್ರೆಯಲ್ಲಿ ಕೆಲ ದೂರ ಸಾಗಿದ ಸೋನಿಯಾಗಾಂಧಿ



ಇಂದಿನ ಪಾದಯಾತ್ರೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ರಾಹುಲ್ ಗಾಂಧಿ ವೇಗಕ್ಕೆ ಹೆಜ್ಜೆ ಹಾಕಲಾಗದೇ, ಸೋನಿಯಾ ಗಾಂಧಿ ಅವರೊಂದಿಗೆ ನಿಧಾನವಾಗಿ ಹೆಜ್ಜೆ ಹಾಕಲಾರಂಭಿಸಿದರು. ಕೆಲ ವೇಳೆ ನಡೆಯಲಾಗದೇ ಕಾರಿನಲ್ಲಿ ಹಿಂಬಾಲಿಸಿದರು. ಆದರೆ ಒಂದು ಹಂತದಲ್ಲಿ ರಾಹುಲ್ ಗಾಂಧಿಯವರು ಸಿದ್ದರಾಮಯ್ಯನವರ ಕೈಹಿಡಿದು ಓಡಲಾರಂಭಿಸಿದರು. ವಿಧಿ ಇಲ್ಲದೆ ಸಿದ್ದರಾಮಯ್ಯನವರೂ ಕೂಡ ನಗುತ್ತಲೇ ರಾಹುಲ್ ಗಾಂಧಿಯವರ ವೇಗಕ್ಕೆ ಸರಿಸಮವಾಗಿ ತಾವೂ ಓಡುವ ಮೂಲಕ ಗಮನ ಸೆಳೆದರು. ಮಧ್ಯಾಹ್ನ ಸೋನಿಯಾಗಾಂಧಿ ದೆಹಲಿಗೆ ವಾಪಸ್ಸಾಗುವಾಗ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸೋನಿಯಾ ಜೊತೆ ತೆರಳಿದರು.


ಎಂ.ಕೆ.ಮೋಹನ್‌ರಾಜ್

ಪಾಂಡವಪುರ/ನಾಗಮಂಗಲ, ಅ.6–ಆಯುಧ ಪೂಜೆ ಮತ್ತು ವಿಜಯ ದಶಮಿ ಹಿನ್ನೆಲೆಯಲ್ಲಿ ಎರಡು ದಿನಗಳ ವಿರಾಮದ ನಂತರ ಗುರುವಾರ ಪಾಂಡವಪುರ ತಾಲೂಕಿನಲ್ಲಿ ಆರಂಭವಾದ ಭಾರತ ಐಕ್ಯತಾ ಯಾತ್ರೆಯಲ್ಲಿ ಎಐಸಿಸಿ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ, ಪುತ್ರ ರಾಹುಲ್ ಗಾಂಧಿ ಹಾಗೂ ರಾಜ್ಯ ಕಾಂಗ್ರೆಸ್ ಪ್ರಮುಖ ಮುಖಂಡರು, ಅಪಾರ ಕಾರ್ಯಕರ್ತರೊಂದಿಗೆ ಸುಮಾರು 3 ಕಿಲೋಮೀಟರ್ ಹೆಜ್ಜೆ ಹಾಕುವ ಮೂಲಕ ಪುತ್ರನ ಮಹತ್ವದ ಯಾತ್ರೆಗೆ ಶಕ್ತಿ ತುಂಬಿದರು.

ಸೋನಿಯಾ ಗಾಂಧಿಯವರು ಯಾತ್ರೆಯಲ್ಲಿ ಪಾಲ್ಗೊಂಡ ಹಿನ್ನೆಲೆ ಇಂದು ಯಾತ್ರೆಯನ್ನು ಕೇವಲ 10 ಕಿ.ಮೀ.ಗೆ ಸೀಮಿತಗೊಳಿಸಲಾಗಿತ್ತು. ಇಂದು ಬೆಳಗ್ಗೆ ರಾಹುಲ್ ಗಾಂಧಿಯವರು ಬೆಳ್ಳಾಳೆ ಗೇಟ್‌ನಿಂದ ಐಕ್ಯತಾ ಯಾತ್ರೆ ಆರಂಭಿಸಿದರು. ಮೇಲುಕೋಟೆ ದೇವಸ್ಥಾನಕ್ಕೆ ಹೋಗಿದ್ದ ಸೋನಿಯಾ ಗಾಂಧಿ ಮಾಣಿಕ್ಯನಹಳ್ಳಿ ಗ್ರಾಮದಲ್ಲಿ ರಾಹುಲ್ ಜೊತೆಗೆ ಪಾದಯಾತ್ರೆಯಲ್ಲಿ ▶ 7ನೇ ಪುಟಕ್ಕೆ



ಅದ್ಧೂರಿ ಮೈಸೂರು ದಸರಾ; ಪ್ರಧಾನಿ ಮೋದಿ ಪ್ರಶಂಸೆ



ಮೈಸೂರು, ಅ.6(ಆರ್‌ಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಪ್ರಶಂಸೆ ವ್ಯಕ್ತಪಡಿಸಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಗುರುವಾರ ಟ್ವೀಟ್ ಮಾಡಿದ್ದಾರೆ.

'ಮೈಸೂರು ದಸರಾ ಮಹೋತ್ಸವ ನಯನ ಮನೋಹರ. ಮೈಸೂರಿನ ಜನರು ತಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಈ ಮೂಲಕ ಸಂರಕ್ಷಿಸುತ್ತಿರುವುದು ಶ್ಲಾಘನೀಯ. ನನ್ನ ಮೈಸೂರು ಭೇಟಿಯ ದಿನಗಳು ಸ್ಮರಣೀಯ. ಅವುಗಳಲ್ಲಿ 2022ರ ಅಂತರಾಷ್ಟ್ರೀಯ ಯೋಗ ದಿನಾಚರಣೆಯೂ ಒಂದು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಜೆಡಿಎಸ್ ಅಧಿಕಾರಕ್ಕೆ ಬಂದರೆ ತೆಲಂಗಾಣ ಮಾದರಿ ಕೃಷಿ ಪಂಪ್‌ಸೆಟ್‌ಗೆ

24x7 ಗುಣಮಟ್ಟದ ವಿದ್ಯುತ್ ಪೂರೈಕೆ



ಬೆಂಗಳೂರು, ಅ.6(ಕೆಎಂಶಿ)–ತೆಲಂಗಾಣದ ಮಾದರಿಯಲ್ಲಿಯೇ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ಕೃಷಿ ಪಂಪ್‌ಸೆಟ್ಟುಗಳಿಗೆ 24X7 ಗುಣಮಟ್ಟದ ಉಚಿತ ವಿದ್ಯುತ್ ಪೂರೈಸಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಘೋಷಣೆ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅಂಶವನ್ನು ಚುನಾವಣಾ ಪ್ರಣಾಳಿಕೆಯಲ್ಲಿಯೂ ಸೇರಿಸಲಾಗುವುದು ಎಂದರಲ್ಲದೇ ಜೆಡಿಎಸ್ ಪಕ್ಷದ ಮಹತ್ವಾಕಾಂಕ್ಷೆಯ 'ಜನತಾ ಪಂಚರತ್ನ ರಥಯಾತ್ರೆ'ಗೆ ನವೆಂಬರ್ 1ರ ಕನ್ನಡ ರಾಜ್ಯೋತ್ಸವ ದಿನದಂದು ಚಾಲನೆ ನೀಡುವುದಾಗಿ ಘೋಷಿಸಿದರು.

ಕರ್ನಾಟಕದ ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಆಸಕ್ತಿ ಕೆ.ಚಂದ್ರಶೇಖರ್ ರಾವ್ ಅವರ ನೇತೃತ್ವದ ಬಿಆರ್‌ಎಸ್ ಪಕ್ಷಕ್ಕೆ ಇಲ್ಲ. ಆದರೆ, ಜೆಡಿಎಸ್ ಅಭ್ಯರ್ಥಿಗಳನ್ನೇ ಬೆಂಬಲಿಸುವ ನಿರ್ಧಾರಕ್ಕೆ ತೆಲಂಗಾಣ ಮುಖ್ಯಮಂತ್ರಿಗಳು ಬಂದಿದ್ದಾರೆ ಎಂದು ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು. 2024ರ ಲೋಕಸಭೆ ಚುನಾವಣೆಯಲ್ಲಿ 150ಕ್ಕೂ ಹೆಚ್ಚು ಕ್ಷೇತ್ರಗಳಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಕೆಸಿಆರ್ ಅವರು ಚಿಂತನೆ ನಡೆಸಿದ್ದಾರೆ. ಅದರಂತೆ ರಾಜ್ಯದ ಗಡಿ ಭಾಗದಲ್ಲಿ ಕೆಲ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಹಾಕಲಿದ್ದಾರೆ ಎಂದು ಅವರು ಹೇಳಿದರು.

ನಮ್ಮ ಪಕ್ಷದ ಶಾಸಕರ ಜತೆ ಸೇರಿ ತೆಲಂಗಾಣ ಮುಖ್ಯಮಂತ್ರಿ ಚಂದ್ರಶೇಖರ ರಾವ್ ಅವರೊಂದಿಗೆ ಹಲವಾರು ವಿಷಯಗಳ ಕುರಿತು ಚರ್ಚೆ ನಡೆಸಿದ್ದೇನೆ. ಎಲ್ಲವನ್ನೂ ಬಹಿರಂಗವಾಗಿ ಹೇಳಲು ಆಗುವುದಿಲ್ಲ. 2006ರ 20 ತಿಂಗಳ ನಿಮ್ಮ ಆಡಳಿತ ನೋಡಿದ್ದೇನೆ. ಯಾವುದೇ ಕಪ್ಪುಚುಕ್ಕೆ ಇಲ್ಲದ ರೀತಿ ಆಡಳಿತ ನಡೆಸಿದ್ದೀರಿ. ಅದೇ ರೀತಿ ಮುಂದುವರೆಯಿರಿ ಎಂದು ಅವರು ನನಗೆ ಸಲಹೆ ನೀಡಿದರು ಎಂದು ಮಾಜಿ ಮುಖ್ಯಮಂತ್ರಿಗಳು ಮಾಹಿತಿ ನೀಡಿದರು.

ದಲಿತರ ಮೇಲಿನ ದೌರ್ಜನ್ಯ, ರೈತರ ನೆರವಿಗೆ ಧಾವಿಸುವ ಸಲುವಾಗಿ ನಾವು ಒಗ್ಗೂಡುತ್ತಿದ್ದೇವೆ. ಅದನ್ನೇ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಮಾಡಿಕೊಂಡು ಮುಂದುವರಿಯುತ್ತೇವೆ ಎಂದು ಅವರು ▶ 9ನೇ ಪುಟಕ್ಕೆ

ನ.1ರಿಂದ ಜೆಡಿಎಸ್ ಜನತಾ ಪಂಚರತ್ನ ಯಾತ್ರೆ: ಹೆಚ್‌ಡಿಕೆ



ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಡಿಎಂಕೆ, ಬಿಆರ್‌ಎಸ್, ಆರ್‌ಜೆಡಿ ಬೆಂಬಲ

- ತೆಲಂಗಾಣ ಸಿಎಂ, ಬಿಆರ್‌ಎಸ್ ಪಕ್ಷದ ಸಂಸ್ಥಾಪಕ ಚಂದ್ರಶೇಖರ ರಾವ್ ಅಭಯ
- ಬಿಜೆಪಿ, ಕಾಂಗ್ರೆಸ್ ಅಧಿಕಾರದಿಂದ ದೂರವಿಡಲು ರಣತಂತ್ರ
- ಪ್ರಾದೇಶಿಕ ಪಕ್ಷಗಳ ಬಲವರ್ಧನೆಗೆ ಸಂಘಟನೆ

ಬೆಂಗಳೂರು, ಅ.6(ಕೆಎಂಶಿ)– ಕರ್ನಾಟಕದಲ್ಲಿ ಬಿಜೆಪಿ–ಕಾಂಗ್ರೆಸ್ ಅನ್ನು ಅಧಿಕಾರದಿಂದ ದೂರವಿಡಲು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸಲು ಡಿಎಂಕೆ, ಬಿಆರ್‌ಎಸ್ ಹಾಗೂ ಆರ್‌ಜೆಡಿ ಮುಂದಾಗಿವೆ.

ರಾಜ್ಯ ವಿಧಾನಸಭೆಗೆ 2023ರ ಏಪ್ರಿಲ್–ಮೇ ತಿಂಗಳಲ್ಲಿ ಚುನಾವಣೆ ನಡೆಯಲಿದ್ದು, ಈ ಚುನಾವಣೆಯನ್ನು ಪ್ರಾದೇಶಿಕ ಪಕ್ಷಗಳು ಪ್ರತಿಷ್ಠೆಯಾಗಿ ತೆಗೆದುಕೊಂಡು ಜೆಡಿಎಸ್ ಬೆಂಬಲಕ್ಕೆ ನಿಂತಿವೆ. ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್‌ನ ಮುಖಂಡ ಹೆಚ್.ಡಿ.ಕುಮಾರಸ್ವಾಮಿ ಮತ್ತು ಆ ಪಕ್ಷದ ಶಾಸಕರನ್ನು ಹೈದರಾಬಾದ್‌ಗೆ ಕರೆಸಿಕೊಂಡಿದ್ದ ತೆಲಂಗಾಣ ಮುಖ್ಯಮಂತ್ರಿ ಬಿಆರ್‌ಎಸ್‌ನ ಚಂದ್ರಶೇಖರ್ ರಾವ್ ರಾಷ್ಟ್ರೀಯ ಪಕ್ಷಗಳ ಬಲವರ್ಧನೆಯನ್ನು ಕರ್ನಾಟಕದಲ್ಲಿ ಕುಂದಿಸಲು ತಮಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಭರವಸೆ ನೀಡಿದ್ದಾರೆ.


ಅಷ್ಟೇ ಅಲ್ಲ ಚುನಾವಣೆ ಸಂದರ್ಭದಲ್ಲಿ ತಮಿಳುನಾಡು ಮುಖ್ಯಮಂತ್ರಿ ಡಿಎಂಕೆಯ ಸ್ಟ್ಯಾಲಿನ್, ಬಿಹಾರ ಸರ್ಕಾರದಲ್ಲಿ ಅಧಿಕಾರದಲ್ಲಿ ಪಾಲುದಾರವಾಗಿರುವ ಆರ್‌ಜೆಡಿಯ ತೇಜಸ್ವಿ ಯಾದವ್ ಜೆಡಿಎಸ್‌ಗೆ ಬೆಂಬಲ ನೀಡಲಿದ್ದಾರೆ ಎಂಬ ಅಂಶವನ್ನು ತಿಳಿಸಿದ್ದಾರೆ. ದಕ್ಷಿಣ ಭಾರತದಲ್ಲಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಹಾಗೂ ಬಿಜೆಪಿ ಅಧಿಕಾರಕ್ಕೆ ಬರಲು ಅವಕಾಶ ನೀಡಬಾರದು.

ಈ ಪಕ್ಷಗಳು ಪ್ರಾದೇಶಿಕ ಪಕ್ಷಗಳ ಮೇಲೆ ದಬ್ಬಾಳಿಕೆ ಮಾಡುತ್ತವೆ. ಈಗಾಗಲೇ ದಕ್ಷಿಣದ ಮೂರು ರಾಜ್ಯಗಳಲ್ಲಿ ರಾಷ್ಟ್ರೀಯೇತರ ▶ 9ನೇ ಪುಟಕ್ಕೆ

ಈ ಸಲದ ಅದ್ಧೂರಿ ಜಂಬೂಸವಾರಿಯನ್ನು

ಪ್ರತ್ಯಕ್ಷವಾಗಿ 15 ಲಕ್ಷ ಜನ ವೀಕ್ಷಿಸಿದ್ದಾರೆ

ದಸರಾ ಯಶಸ್ಸಿಗೆ ಕಾರಣರಾದ ಸರ್ವರಿಗೂ ಧನ್ಯವಾದ: ಸಚಿವ ಎಸ್.ಟಿ.ಸೋಮಶೇಖರ್





ಮೈಸೂರು, ಅ.6(ಆರ್‌ಕೆ)– ಈ ಬಾರಿಯ ವಿಶ್ವಪ್ರಸಿದ್ಧ ದಸರಾ ಮಹೋತ್ಸವದ ಅಭೂತಪೂರ್ವ ಯಶಸ್ಸಿಗೆ ಶ್ರಮಿಸಿದ ಮೈಸೂರಿನ ಸರ್ವರಿಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಧನ್ಯವಾದ ಅರ್ಪಿಸಿದ್ದಾರೆ. ಮೈಸೂರಿನ ಜೆ.ಪಿ.ನಗರದಲ್ಲಿರುವ ಸಿಂಧೂರ ಕನ್ವೆನ್ಷನ್ ಹಾಲ್‌ನಲ್ಲಿ ಇಂದು ಮಧ್ಯಾಹ್ನ ಸುದ್ದಿಗೋಷ್ಠಿ ನಡೆಸಿದ ಅವರು, ನಾಡಹಬ್ಬ ಮೈಸೂರು ದಸರಾ ಉತ್ಸವವು ಯಾವುದೇ ವಿಘ್ನಗಳಿಲ್ಲದೆ ಯಶಸ್ವಿಯಾಗಿದೆ. 15 ಲಕ್ಷಕ್ಕೂ ಅಧಿಕ ಜನರು ವಿಜಯದಶಮಿ ಮೆರವಣಿಗೆಯನ್ನು ಪ್ರತ್ಯಕ್ಷವಾಗಿ ನೋಡಿ ಆನಂದಿಸಿದ್ದಾರೆ ಎಂದರು. ▶ 9ನೇ ಪುಟಕ್ಕೆ



ಅ.10ರವರೆಗೆ ದಸರಾ ದೀಪಾಲಂಕಾರ ವಿಸ್ತರಣೆ

ಅ.15ರವರೆಗೆ ವಿಸ್ತರಿಸುವ ಚಿಂತನೆ ಇದೆ: ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್

ಮೈಸೂರು, ಅ.6(ಆರ್‌ಕೆ)–ಮೈಸೂರಲ್ಲಿ ದಸರಾ ವಿದ್ಯುದ್ದೀಪಾಲಂಕಾರವನ್ನು ಅಕ್ಟೋಬರ್ 10ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 10 ದಿನಗಳ ಕಾಲ ದೀಪಾಲಂಕಾರ ವಿಸ್ತರಿಸುವಂತೆ ಕೋರಲಾಗಿತ್ತು. ಆದರೆ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು 5 ದಿನ ವಿಸ್ತರಿಸುತ್ತೇವೆಂದು ತಿಳಿಸಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು, ಇಂಧನ ಸಚಿವರೊಂದಿಗೆ ಮಾತನಾಡಿ, ಅಕ್ಟೋಬರ್ 15ರವರೆಗೆ ವಿಸ್ತರಿಸುವ ಬಗ್ಗೆ ನಿರ್ಧರಿಸಲಾಗುವುದು ಎಂದರು. ಈ ಬಾರಿ 124 ಕಿ.ಮೀ.ವರೆಗೆ ವಿಶೇಷ ರೀತಿಯಲ್ಲಿ ವಿದ್ಯುದ್ದೀಪಾಲಂಕಾರ ಮಾಡಲಾಗಿದ್ದು, ಜನರು ನೋಡಿ ಆನಂದಿಸುತ್ತಿದ್ದಾರೆ. ಸಾರ್ವಜನಿಕರು, ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದರಿಂದ 10 ದಿನಗಳವರೆಗೆ ವಿಸ್ತರಿಸಲು ಚಿಂತನೆ ನಡೆಸಲಾಗಿದೆ ಎಂದು ಸಚಿವರು ತಿಳಿಸಿದರು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ, 10 ದಿನ ದೀಪಾಲಂಕಾರ ವಿಸ್ತರಿಸುವಂತೆ ತಿಳಿಸಿದ್ದಾರೆ. ಆದರೆ ಪ್ರತೀ ದಿನ 30 ಲಕ್ಷ ರೂ. ಹೆಚ್ಚುವರಿ ಖರ್ಚು ಭರಿಸ ಬೇಕಾಗುತ್ತದೆ. ಆರ್ಥಿಕ ಸಂಪನ್ಮೂಲ ಖಚಿತಪಡಿಸಿಕೊಳ್ಳಬೇಕು. ನಂತರವಷ್ಟೇ ಸರ್ಕಾರ ಆದೇಶ ನೀಡಿದರೆ ವಿಸ್ತರಿಸಬೇಕಾಗುತ್ತದೆ. ಸದ್ಯಕ್ಕೆ ಅ.10ರವರೆಗೆ 5 ದಿನಗಳ ಕಾಲ ವಿಸ್ತರಿಸಿದ್ದೇವೆ ಎಂದರು.

ದಸರಾ ಸಂದರ್ಭದಲ್ಲಿ ದಾಖಲೆ ಪ್ರಮಾಣದಲ್ಲಿ ಅರಮನೆ ವೀಕ್ಷಣೆ



ಮೈಸೂರು, ಅ.6(ಎಸ್‌ಬಿಡಿ)– ನಾಡಹಬ್ಬ ದಸರಾ ಸಂದರ್ಭದಲ್ಲಿ ವಿಶ್ವ ಪ್ರಸಿದ್ಧ ಅಂಬಾವಿಲಾಸ ಅರಮನೆಗೆ ಲಕ್ಷ ಮಂದಿ ಭೇಟಿ ನೀಡಿದ್ದಾರೆ. ಅದರಲ್ಲೂ ಕಳೆದ ನಾಲ್ಕು ದಿನಗಳಲ್ಲಿ ಅತೀ ಹೆಚ್ಚು ಮಂದಿ ಅರಮನೆ ಸೌಂದರ್ಯ ಆಸ್ವಾದಿಸಿದ್ದಾರೆ. ದಸರಾ ಮಹೋತ್ಸವಕ್ಕೆ ಸೆ.26ರಂದು ಚಾಲನೆ ದೊರಕಿತು. ಅಂದು 4099, ಸೆ.27ರಂದು 5799, ಸೆ.28ರಂದು 5798, ಸೆ.29ರಂದು 7,600, ಸೆ.30ರಂದು 7,547, ಅ.1ರಂದು 15,242, ಅ.2ರಂದು 21,062, ಅ.3ರಂದು 18,119, ▶ 9ನೇ ಪುಟಕ್ಕೆ

ಇಂದು ತವರೂರಿಗೆ ಗಜಪಡೆ



ದಸರಾಕ್ಕೆ ವಿವಿಧ ಆನೆ ಶಿಬಿರಗಳಿಂದ ಕರೆತರಲಾಗಿದ್ದ 14 ಆನೆಗಳು ನಾಳೆ (ಶುಕ್ರವಾರ) ತಮ್ಮ ತಮ್ಮ ಸ್ವಸ್ಥಾನಕ್ಕೆ ಮರಳಲಿವೆ. ಆ.7ರಂದು ಮೊದಲ ತಂಡದಲ್ಲಿ 9 ಹಾಗೂ ಸೆ.7ರಂದು ಎರಡನೇ ತಂಡದಲ್ಲಿ 5 ಆನೆಗಳನ್ನು ಕರೆತರಲಾಗಿತ್ತು. ಸುಮಾರು 60 ದಿನಗಳಿಂದ ಮೈಸೂರು ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದ ದಸರಾ ಗಜಪಡೆ, ಜಂಬೂಸವಾರಿ ಮೆರವಣಿಗೆಯಲ್ಲಿ ಯಶಸ್ವಿಯಾಗಿ ತಮ್ಮ ಜವಾಬ್ದಾರಿ ನಿರ್ವಹಿಸಿ, ಶಹಬಾಸ್‌ಗಿರಿ ಗಿಟ್ಟಿಸಿಕೊಂಡಿವೆ. ನಾಳೆ(ಅ.7) ಬೆಳಗ್ಗೆ 10 ಗಂಟೆಗೆ ಪೂಜೆ ಸಲ್ಲಿಸುವ ಮೂಲಕ ಇವುಗಳನ್ನು ಬೀಳ್ಕೊಡಲಾಗುತ್ತದೆ.

ಮುಂಜಾನೆಯೇ ಲಕ್ಷ್ಮೀ, ಶ್ರೀದತ್ತಾತ್ರೇಯ ಮರಳಿ ಮನೆಗೆ



ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೊದಲ ತಂಡದಲ್ಲೇ ಮೈಸೂರಿಗೆ ಆಗಮಿಸಿದ್ದ ಲಕ್ಷ್ಮೀ(22), ಸೆ.13ರಂದು ಗಂಡು ಮರಿಗೆ ಜನ್ಮ ನೀಡಿತ್ತು. ಈ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ತಾಯಿ ಹಾಗೂ ಮರಿ ಆನೆಯನ್ನು ಇರಿಸಲಾಗಿದ್ದು, ತಜ್ಞರು ಹಾಗೂ ಪಶು ವೈದ್ಯರ ಸಲಹೆ ಪಡೆದು ಅರಣ್ಯ ಇಲಾಖೆ, ರ್‍ಯಾಂಪ್ ಇರುವ ▶ 9ನೇ ಪುಟಕ್ಕೆ

ಶಾಸಕ ತನ್ವೀರ್ ಸೇಠ್‌ಗೆ ಹುಟ್ಟುಹಬ್ಬದ ಶುಭಾಶಯಗಳು



ಅಕ್ಟೋಬರ್ 3ರಂದು ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರಿಗೆ ಉದಯಗಿರಿಯ ಇರ್ಫಾನ್ ಪಾಷಾ, ಕೆಸರೆಯ ಇರ್ಫಾನ್ ಪಾಷಾ ಮತ್ತಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ರಾಜ್ಯದ 78 ಲಕ್ಷ ರೈತರ ಆಸ್ತಿಯ ಸರ್ವೆ ನಂಬರ್, ಆಧಾರ್ ಜೋಡಣೆ

● ಕೃಷಿ ಕ್ಷೇತ್ರದಲ್ಲಿ ತ್ವರಿತ ಡಿಜಿಟಲೀಕರಣ ● ಮುಖ್ಯಮಂತ್ರಿ ಬೊಮ್ಮಾಯಿ ಮಾಹಿತಿ

ಬೆಂಗಳೂರು, ಅ.6(ಕೆಎಂಶಿ)–ಕರ್ನಾಟಕ ಕೃಷಿ ಕ್ಷೇತ್ರದ ಡಿಜಿಟಲೀಕರಣದಲ್ಲಿ ಮುಂಚೂಣಿ ಯಲ್ಲಿರುವ ರಾಜ್ಯ, ಈವರೆಗೆ ರೈತರು, ಸರ್ವೆ ನಂಬರ್ ಹಾಗೂ ಆಧಾರ್‌ಗಳನ್ನು ಜೋಡಿಸಲಾಗಿದ್ದು, 78 ಲಕ್ಷ ರೈತರನ್ನು ಈ ವ್ಯಾಪಿಗೆ ತರ ಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ ನೈಸರ್ಗಿಕ ಕೃಷಿ ಮತ್ತು ಡಿಜಿಟಲ್ ಕೃಷಿ ಕುರಿತು ನಡೆದ ವಿಡಿಯೊ ಸಂವಾದದಲ್ಲಿ ಗೃಹ ಕಚೇರಿ ಕೃಷ್ಣಾದಿಂದ ಪಾಲ್ಗೊಂಡು ಮಾತನಾಡಿದರು.

ಕೇಂದ್ರ ಕೃಷಿ ಪ್ರಧಾನ ಕಾರ್ಯದರ್ಶಿಗಳು ಕೃಷಿ ಡಿಜಿಟಲೀಕರಣದಲ್ಲಿ ಕರ್ನಾಟಕ ಮುಂದಿರುವ ಬಗ್ಗೆ ಪ್ರಸ್ತಾಪಿಸಿದ್ದನ್ನು ಉಲ್ಲೇಖಿಸಿದ ಮುಖ್ಯಮಂತ್ರಿಗಳು, ಭೂಮಿ ತಂತ್ರಜ್ಞಾನದಡಿ ಈ ಹಿಂದೆಯೇ ಡಿಜಿಟಲೀಕರಣವಾಗಿದೆ. 62 ಲಕ್ಷ ಭೂಮಿ ಯುಳ್ಳ ಹಾಗೂ 16 ಲಕ್ಷ ಭೂ ರಹಿತರನ್ನೂ ತಂತ್ರಾಂಶದಲ್ಲಿ ಸೇರಿಸಲಾಗಿದೆ. ಫ್ರೂಟ್ಸ್ ಯೋಜನೆಯನ್ನು ಎಲ್ಲಾ ರಾಜ್ಯಗಳೂ ಅಳವಡಿಸಿಕೊಳ್ಳುತ್ತಿವೆ ಎಂದರು. ಈ ತಂತ್ರಾಂಶವನ್ನು ನಿರಂತರವಾಗಿ ಸುಧಾರಣೆ ಮಾಡಲಾಗುತ್ತಿದೆ. ಇದರ ಉಪಯೋಗಪಡೆದು ರೈತರನ್ನು ಜೋಡಿಸಲಾಗಿದೆ. ಕೇಂದ್ರ ಸರ್ಕಾರದ ಸ್ವಾಮಿತ್ವ ಯೋಜನೆಯನ್ನು ಕರ್ನಾಟಕದಲ್ಲಿ ಅಭಿಯಾನದ ರೀತಿಯಲ್ಲಿ ಕೈಗೊಂಡಿದೆ ಎಂದರು.

ಕ್ರಾಂತಿಕಾರಿ ನ್ಯಾನೋ ಯೂರಿಯಾ, ಕೃಷಿ ಕ್ಷೇತ್ರದಲ್ಲಿ ನ್ಯಾನೋ ಯೂರಿಯಾ ಕ್ರಾಂತಿಯನ್ನು ಉಂಟು ಮಾಡಿದ್ದು, ಮೊದಲ ನ್ಯಾನೋ ಯೂರಿಯಾ ಘಟಕ ಬೆಂಗಳೂರಿನಲ್ಲಿದೆ. ಅಧ್ಯಯನ ಮಾಡಿ, ರೈತರಿಗೂ ಪರಿಚಯಿಸಲಾಗಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದಲ್ಲಿ ಉತ್ತಮ ಪ್ರತಿಕ್ರಿಯೆ ಹಾಗೂ ಬೆಂಬಲವಿದೆ ಎಂದರು.

ಡಿಜಿಟಲ್ ತಂತ್ರಜ್ಞಾನದ ಮೂಲಕ ರೈತರೇ ತಮ್ಮ ಭೂಮಿಯ ಸಮೀಕ್ಷೆ ಮಾಡುತ್ತಿದ್ದಾರೆ. ಈವರೆಗೆ 212 ಕೋಟಿ ಭೂ ಪ್ರದೇಶವನ್ನು ಡಿಜಿಟಲೀಕರಣಗೊಳಿಸಲಾಗಿದೆ. ಬೆಳೆ ಸಮೀಕ್ಷೆಯನ್ನು ರೈತರೇ ಮಾಡುತ್ತಿದ್ದಾರೆ. 212 ಕೋಟಿ ಪೈಕಿ 16,584 ಬೆಳೆಗಳನ್ನು ರೈತರೇ ಸಮೀಕ್ಷೆ ಮಾಡಿದ್ದಾರೆ.1.61ಕೋಟಿ ಪ್ರದೇಶವನ್ನು ಇಲಾಖೆ ಮಾಡಿದೆ. ಯಾವುದೇ ವ್ಯಾಜ್ಯಕ್ಕೆ ಎಡೆ ಮಾಡಿಕೊಡದಿರಲು ಶೇ.100 ರಷ್ಟು ರೈತರೇ ಸಮೀಕ್ಷೆ ಮಾಡಲು ಕ್ರಮ ವಹಿಸಲಾಗುತ್ತಿದೆ ಎಂದರು. ರೈತರು ಅತ್ಯಂತ ಪ್ರಾಮಾಣಿಕವಾಗಿ ಇದನ್ನು ನಡೆಸಿದ್ದಾರೆ ಎಂದರು.



ನೈಸರ್ಗಿಕ ಕೃಷಿ ದೀರ್ಘಕಾಲಿಕ ಯೋಜನೆಯಾಗಿದ್ದು ಈ ಕುರಿತು ಸಂಶೋಧನೆ ಹಾಗೂ ಪ್ರಮಾಣೀಕರಣ ಅತ್ಯಂತ ಪ್ರಮುಖ ಅಂಶಗಳು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿಯವರ ರೈತರ ಆದಾಯ ದ್ವಿಗುಣಗೊಳಿಸುವ ಆಶಯದಂತೆ ಕರ್ನಾಟಕ ರಾಜ್ಯ ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳೊಂದಿಗೆ ನೈಸರ್ಗಿಕ ಕೃಷಿಯನ್ನು ಸಕ್ರಿಯವಾಗಿ ಕೈಗೊಂಡಿದೆ. ರಾಜ್ಯದಲ್ಲಿ 5 ಕೃಷಿ ಹಾಗೂ ತೋಟಗಾರಿಕಾ ವಿಶ್ವ ವಿದ್ಯಾಲಯಗಳಿದ್ದು, ವಿಶ್ವವಿದ್ಯಾಲಯಗಳ ನಿರಂತರ ಮೇಲ್ವಿಚಾರಣೆಯಲ್ಲಿ ನೈಸರ್ಗಿಕ ಕೃಷಿಯನ್ನು ತಲಾ ಒಂದು ಸಾವಿರ ಎಕರೆ ಪ್ರದೇಶದಲ್ಲಿ ಕೈಗೊಳ್ಳಲಾಗಿದೆ ಬೆಳೆಗಳ ಗುಣಮಟ್ಟದಿಂದ ಹಿಡಿದು, ಉತ್ಪನ್ನ, ಪರೀಕ್ಷೆಗಳನ್ನು ಕೃಷಿ ಪ್ರಯೋಗಾಲಯದಲ್ಲಿ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ನೈಸರ್ಗಿಕ ಕೃಷಿಯಲ್ಲಿ ವೈಜ್ಞಾನಿಕ ಅಂಶಗಳನ್ನು ಕೂಡ ಗಮನದಲ್ಲಿಟ್ಟುಕೊಂಡು ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳಲು ಒತ್ತು ನೀಡಲಾಗಿದೆ. ಮಣ್ಣಿನಲ್ಲಿ ಸಾರಜನಕ ಹಾಗೂ ಕಾರ್ಬನ್ ಪ್ರಮಾಣ ಸೇರಿದಂತೆ ನೈಸರ್ಗಿಕ ಗೊಬ್ಬರ ಬಳಕೆಗೂ ಮಹತ್ವ ನೀಡಲಾಗಿದೆ. ಪೈಟೋಸೈನಾಸಿಸ್ ಪರಿಣಾಮದ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ ಎಂದರಲ್ಲದೆ ಈ ಕುರಿತಂತೆ ಅಧ್ಯಯನಗಳು ಉತ್ತಮ ಇಳುವರಿ ಹಾಗೂ ಉತ್ಪಾದನೆಗೆ ಎಡೆ ಮಾಡಿಕೊಡುತ್ತದೆ. ರೈತರು ಕೂಡ ಸಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಿದ್ದಾರೆ ಎಂದು ತಿಳಿಸಿದರು.

ರಾಜ್ಯಾದ್ಯಂತ ಐದು ರ‍್ಯಾಲಿ ನಡೆಸಲು ಬಿಜೆಪಿ ನಿರ್ಧಾರ

● ರ‍್ಯಾಲಿಗಳಲ್ಲಿ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಷಾ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಉತ್ತರಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಭಾಗಿ ● ಮೈಸೂರಲ್ಲಿ ದಲಿತರ, ಬಳ್ಳಾರಿಯಲ್ಲಿ ಪರಿಶಿಷ್ಟ ವರ್ಗ, ಗುಲ್ಬರ್ಗಾದಲ್ಲಿ ಹಿಂದುಳಿದ ವರ್ಗ, ಬೆಂಗಳೂರಲ್ಲಿ ಮಹಿಳಾ, ಮಂಗಳೂರಲ್ಲಿ ಯುವಕರ ಸಮಾವೇಶ

ಬೆಂಗಳೂರು, ಅ.6(ಕೆಎಂಶಿ)–ಮುಂಬರುವ ವಿಧಾನಸಭಾ ಚುನಾವಣೆಗೂ ಮುನ್ನವೇ ರಾಜ್ಯಾದ್ಯಂತ ಐದು ಬೃಹತ್ ರ‍್ಯಾಲಿಗಳನ್ನು ಹಮ್ಮಿಕೊಳ್ಳಲು ರಾಜ್ಯ ಬಿಜೆಪಿ ನಿರ್ಧರಿಸಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ ರಾಷ್ಟ್ರೀಯ ಮುಖಂಡರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಮೈಸೂರಿನಲ್ಲಿ ದಲಿತರ ಸಮಾವೇಶ, ಬಳ್ಳಾರಿಯಲ್ಲಿ ಪರಿಶಿಷ್ಟ ವರ್ಗ, ಗುಲ್ಬರ್ಗಾದಲ್ಲಿ ಹಿಂದುಳಿದ ವರ್ಗಗಳ ಸಮಾವೇಶ ನಡೆಯಲಿದ್ದು, ಈ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಉಪಸ್ಥಿತರಿರಲಿದ್ದಾರೆ.



ಇನ್ನೂ ಬೆಂಗಳೂರಿನಲ್ಲಿ ಮಹಿಳೆಯರ ಬೃಹತ್ ಸಮಾವೇಶ ನಡೆಸಿದರೆ, ಮಂಗಳೂರಿನಲ್ಲಿ ಯುವಕರ ಸಮಾವೇಶ ನಡೆಸಲು ರಾಜ್ಯ ಬಿಜೆಪಿ ತೀರ್ಮಾನಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ವಿರುದ್ಧ 40 ಪರ್ಸೆಂಟ್ ಭ್ರಷ್ಟಾಚಾರ ಆರೋಪ ಹೊರಿಸುತ್ತಿರುವ ಕಾಂಗ್ರೆಸ್ ಇಡೀ ರಾಜ್ಯಾದ್ಯಂತ ಇದನ್ನೇ ಬಂಡವಾಳ ಮಾಡಿಕೊಂಡು ಮತದಾರರ ಮನ ಗೆಲ್ಲಲು ಹೊರಟಿದೆ.

ಕಾಂಗ್ರೆಸ್‌ನ ಅಧಿನಾಯಕ ರಾಹುಲ್‌ಗಾಂಧಿ ಹಮ್ಮಿಕೊಂಡಿರುವ ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲೂ ರಾಹುಲ್ ಇದೇ ಆರೋಪವನ್ನು ಮೇಲಿಂದ ಮೇಲೆ ಮಾಡುತ್ತಲೇ ಬಂದಿದ್ದಾರೆ. ಕಾಂಗ್ರೆಸ್‌ನ ಆರೋಪಗಳಿಗೆ ಉತ್ತರ ನೀಡುವುದು ಮತ್ತು ಪಕ್ಷ ಸಂಘಟನೆ ಮಾಡುವ ಉದ್ದೇಶದಿಂದ ವಿವಿಧ ವರ್ಗ ಮತ್ತು ಸಮಾಜದ ಸಮಾವೇಶಗಳನ್ನು ನಡೆಸಲು ಬಿಜೆಪಿ ನಿರ್ಧರಿಸಿದೆ.

ಈ ಸಮಾವೇಶದ ದಿನಾಂಕ ಮತ್ತು ಯಾವ ಸಮಾವೇಶಕ್ಕೆ ಒಬ್ಬೊಬ್ಬ ರಾಷ್ಟ್ರೀಯ ನಾಯಕರನ್ನು ಆಹ್ವಾನಿಸುವ ಸಂಬಂಧ ನಾಳೆ ನಡೆಯಲಿರುವ ಬಿಜೆಪಿ ರಾಜ್ಯ ಸಮಿತಿಯಲ್ಲಿ ತೀರ್ಮಾನ ತೆಗೆದುಕೊಳ್ಳಲಿದೆ. ಭಾರತ್ ಜೋಡೋ ಯಾತ್ರೆಗೆ ಉತ್ತರ ನೀಡಲು ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜಂಟಿಯಾಗಿ ಅ.11ರಿಂದ ಯಾತ್ರೆ ಆರಂಭಿಸಲಿದ್ದಾರೆ. ಯಾತ್ರೆಯ ರೂಪರೇಷೆಗಳು ನಾಳಿನ ಸಭೆಯಲ್ಲಿ ನಿರ್ಧಾರವಾಗಲಿದೆ, ಅಷ್ಟೇ ಅಲ್ಲ ಮುಂದಿನ ಚುನಾವಣೆಗೆ ಸಂಬಂಧಿಸಿದಂತೆ ಆ ಸಭೆಯಲ್ಲೇ ಕೆಲವು ಮಹತ್ವದ ತೀರ್ಮಾನಗಳನ್ನು ರಾಜ್ಯ ಬಿಜೆಪಿ ಕೈಗೊಳ್ಳಲಿದೆ ಎಂದು ಉನ್ನತ ಮೂಲಗಳು ತಿಳಿಸಲಿವೆ.

ನಾಳೆ ಯುವ ವಿಕಲಚೇತನರಿಗಾಗಿ ಉದ್ಯೋಗ ಮೇಳ

ಮೈಸೂರು, ಅ.6–ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಕಾಲೇಜು ಮತ್ತು ಸಮರ್ಥನಂ ಅಂಗವಿಕಲರ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಯುವ ವಿಕಲಚೇತನರಿಗಾಗಿ ಉದ್ಯೋಗ ಮೇಳವನ್ನು ಅ.8ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ಮೈಸೂರು ನಗರದ ಮಾನಸಗಂಗೋತ್ರಿಯ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಕಾಲೇಜು (ಜೆ.ಸಿ.ಕಾಲೇಜು) ಆವರಣದಲ್ಲಿ ಆಯೋಜಿಸಲಾಗಿದೆ. 18 ವರ್ಷದಿಂದ 35 ವರ್ಷದ ಒಳಗಿನ ವಿಕಲಚೇತನರು ಸದರಿ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣ, ಪಿಯುಸಿ, ಡಿಪ್ಲೊಮಾ ಮತ್ತು ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ವಿಕಲಚೇತನರು ಭಾಗವಹಿಸಬಹುದು.

ಮೇಳದಲ್ಲಿ ಭಾಗವಹಿಸುವವರು ಬಯೋ ಡೇಟಾದ ಕನಿಷ್ಠ 3 ಪ್ರತಿಗಳು, ಕನಿಷ್ಠ 3 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು, ಶೈಕ್ಷಣಿಕ ಅರ್ಹತೆಯ ನಕಲು ಪ್ರತಿಗಳು, ಅಂಗವಿಕಲರ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ತರಬೇಕು. ವಿಕಲಚೇತನರು https://www.samarthanam.org/job-fair/ ಈ ಲಿಂಕ್‌ನಲ್ಲೂ ನೊಂದಣಿ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮರ್ಥನಂ ಸಹಾಯವಾಣಿ 080 68333999 ಅಥವಾ ಸಂಪರ್ಕಿಸಿ–8050709919, 6364867795, 9380224233, 6364867818, 9449864693 ಸಂಪರ್ಕಿಸಬಹುದು ಎಂದು ಜೆ.ಎಸ್.ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಬಿ.ಇಳಂಗೊವನ್ ಹಾಗೂ ಸಮರ್ಥನಂ ಸಂಸ್ಥೆಯ ಮೈಸೂರು ವಿಭಾಗದ ಸಂಯೋಜಕ ಶಿವರಾಜು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ.9ರಂದು ಶತಚಂಡೀ ಹೋಮ ಪೂರ್ಣಾಹುತಿ


ಮೈಸೂರು, ಅ.6– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ಭಾನುವಾರ (ಅ.9)ಹುಣ್ಣಿಮೆಯಂದು ಬೆಳಗ್ಗೆ 9.30ಕ್ಕೆ ಶತಚಂಡೀಹೋಮ ಪ್ರಾರಂಭ ಮತ್ತು ಮಿಥುನ, ಕನ್ಯಾ, ಧನಸ್ಸು, ಮಕರ, ಕುಂಭ ರಾಶಿಯವರಿಗೆ ಶನಿ ಮಹಾ ಶಾಂತಿ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೈ.ಕುಮಾರ್ ಜಾತಕ ವಿಮರ್ಶಕರನ್ನು ಮೊ.ಸಂಖ್ಯೆ 9845183392, 9342183392 ಮೂಲಕ ಸಂಪರ್ಕಿಸಬಹುದು. ಭಾನುವಾರ ಮಧ್ಯಾಹ್ನ ಡಾ.ಭಾನುಪ್ರಕಾಶ ಶರ್ಮ ಮತ್ತು ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅವರನ್ನು ಸನ್ಮಾನಿಸಲಾಗುವುದು. ನಂತರ ಪೂರ್ಣಾಹುತಿ, ಮಹಾ ಮಂಗಳಾರತಿ ನೆರವೇರಲಿದೆ.

ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಮೈಸೂರು,ಅ.6–ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಸಂಶೋಧನೆಯಲ್ಲಿ ಆಸಕ್ತಿ ಮೂಡಿಸಲು ಪ್ರಶಸ್ತಿಯನ್ನು ನೀಡಲಾಗುತ್ತಿದೆ. ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ಡಾ.ಎಸ್.ಕೆ.ಶಿವಕುಮಾರ್ ಪ್ರಶಸ್ತಿ, ವಿಜ್ಞಾನ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪ್ರೊ.ಯು.ಆರ್.ರಾವ್ ಪ್ರಶಸ್ತಿ, ಜನಸಾಮಾನ್ಯರಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅ.31ರಂದು ಅರ್ಜಿ ಸಲ್ಲಿಸಲು ಕೊನೇ ದಿನ. ಭರ್ತಿ ಮಾಡಿದ ಅರ್ಜಿಯನ್ನು ಇ–ಮೇಲ್ award. ksta@ gmail.comಗೆ ಮತ್ತು ಪ್ರತಿಗಳನ್ನು ಪ್ರೊ.ಯು.ಆರ್.ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಜಿ.ಕೆ.ವಿ.ಕೆ. ಆವರಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯ ಮರ ಪೋಸ್ಟ್, ಬೆಂಗಳೂರು–560097 ಕಳುಹಿಸತಕ್ಕದ್ದು ಎಂದು ತಿಳಿಸಿದ್ದಾರೆ.

ಶಾಖಾ ಗ್ರಂಥಾಲಯಗಳಲ್ಲಿ ಹೆಚ್ಚುವರಿ ಸೇವೆ

ಮೈಸೂರು, ಅ.6– ಮೈಸೂರು ನಗರ ಕೇಂದ್ರ ಗ್ರಂಥಾಲಯ ಕಚೇರಿ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕುವೆಂಪುನಗರ ಶಾಖೆ, ಸರಸ್ವತಿಪುರಂ ಶಾಖೆ, ವಿವೇಕಾನಂದನಗರ ಶಾಖೆ, ರಾಮಕೃಷ್ಣನಗರ ಶಾಖೆ, ಚಾಮುಂಡಿಪುರಂ ಶಾಖೆ, ಸಿದ್ದಾರ್ಥನಗರ ಶಾಖೆ, ಉದಯಗಿರಿ ಶಾಖೆ, ಜೆ.ಪಿ.ನಗರ ಶಾಖೆಗಳಲ್ಲಿ ಓದುಗರು ಹಾಗೂ ವಿದ್ಯಾರ್ಥಿಗಳ ಕೋರಿಕೆ ಮೇರೆಗೆ ಹೆಚ್ಚುವರಿಯಾಗಿ ಅ.12 ರಿಂದ ಬೆಳಗ್ಗೆ 8ರಿಂದ ರಾತ್ರಿ 8:00 ವರೆಗೆ ಈ ಶಾಖಾ ಗ್ರಂಥಾಲಯಗಳಲ್ಲೂ ಸಹ ಗ್ರಂಥಾಲಯ ಸೇವೆಯನ್ನು ಒದಗಿಸಲಾಗುತ್ತಿದೆ ಎಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ತಿಳಿಸಿದ್ದಾರೆ.



ಕಾರು ಡಿಕ್ಕಿ: ಪಾದಚಾರಿ ಸಾವು

ಮೈಸೂರು, ಅ.6–ಕಾರು ಡಿಕ್ಕಿ ಹೊಡೆದು ಪಾದಚಾರಿ ಸಾವನ್ನಪ್ಪಿದ ಘಟನೆ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆ.ಆರ್.ಮಿಲ್ ಬಳಿ ಸಂಭವಿಸಿದೆ.

ಮೈಸೂರಿನ ಜ್ಯೋತಿನಗರದ ನಿವಾಸಿ ಹೆಚ್.ಚಂದ್ರ(41) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಅ.4ರಂದು ರಾತ್ರಿ 8.30ರ ಸುಮಾರಿನಲ್ಲಿ ಕೆ.ಆರ್.ಮಿಲ್ ಬಳಿ ರಸ್ತೆ ದಾಟುತ್ತಿದ್ದ ವೇಳೆ ಶ್ರೀರಂಗಪಟ್ಟಣ ಕಡೆಯಿಂದ ಬಂದ ಇನ್ನೋವಾ ಕಾರು (ಕೆಎ 01–ಎಂಕೆ 1238) ಇವರಿಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಚಂದ್ರ ಅವರನ್ನು ಕೆ.ಆರ್.ಆಸ್ಪತ್ರೆಗೆ ಸಾಗಿಸಿದ್ದು, ಮಾರ್ಗ ಮಧ್ಯೆ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ. ಎನ್.ಆರ್.ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು,ಅ.6–ಡಾ.ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಇಎಸ್‌ಐ ಕಾರ್ಡುದಾರರಿಗೆ ಮತ್ತು ಕುಟುಂಬ ವರ್ಗದವರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಅ.15ರವರೆಗೆ ಹಮ್ಮಿಕೊಳ್ಳಲಾಗಿದೆ. ಕುವೆಂಪುನಗರ ಮತ್ತು ಸಯ್ಯಾಜಿರಾವ್ ರಸ್ತೆಯ ಆಸ್ಪತ್ರೆಯ ಶಾಖೆಗಳಿಗೆ ಭೇಟಿ ನೀಡಬಹುದು. ಮಾಹಿತಿಗೆ ಮೊ. 8884477956 ಸಂಪರ್ಕಿಸಿ.

ನಿಧನ

ಎಸ್.ನರೇಂದ್ರಕುಮಾರ್



ಮೈಸೂರು, ಅ. 6– ನಿವೃತ್ತ ತಹಸೀಲ್ದಾರರು ಮತ್ತು ಮೈಸೂರಿನ ಸರಸ್ವತಿಪುರಂ ನಿವಾಸಿ ಎಸ್.ನರೇಂದ್ರಕುಮಾರ್ (87) ಬುಧವಾರ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪುತ್ರ ದೀಪಕ್ ಕುಮಾರ್, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಟಿ.ಗಂಗಪ್ಪ



ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕ, ಶಾಸನಶಾಸ್ತ್ರದ ವಿದ್ವಾಂಸರಾದ ಡಾ.ಎಂ.ಜಿ.ಮಂಜುನಾಥ ಅವರ ತಂದೆ ನಿವೃತ್ತ ಮುಖ್ಯೋಪಾಧ್ಯಾಯ ಗಂಗಪ್ಪ ಗುರುವಾರ ಮಧ್ಯಾಹ್ನ ಮೂರು ಗಂಟೆಯಲ್ಲಿ ವಿಧಿವಶರಾದರು. ಇವರ ಅಂತ್ಯಕ್ರಿಯೆ ನಾಳೆ(ಶುಕ್ರವಾರ) ಸ್ವಗ್ರಾಮ ಮಾಗಡಿ ತಾಲೂಕಿನ ಕಂಬೇಗೌಡನಪಾಳ್ಯದಲ್ಲಿ ಬೆಳಿಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಮಗ, ಮಗಳು, ಮೊಮ್ಮಕ್ಕಳು, ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.


ಸಿ.ವಿ.ಮಂಜುನಾಥ್



ಮೈಸೂರು ಸರಸ್ವತಿಪುರಂ ನಿವಾಸಿ ಸಿ.ವಿ.ಮಂಜುನಾಥ್ ಅವರು ಗುರುವಾರ ನಿಧನರಾದರು. ಮೃತರಿಗೆ 47 ವರ್ಷ ವಯಸ್ಸಾಗಿತ್ತು. ಮೃತರು ಅವಿವಾಹಿತರಾಗಿದ್ದು, ತಂದೆ, ಸಹೋದರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅ.9, ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ

ಮೈಸೂರು,ಅ.6–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮೈಸೂರು ನಗರ ಮತ್ತು ತಾಲೂಕು ನಾಯಕ ಜನಾಂಗದ ಸಂಘಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅ.9ರಂದು ಬೆಳಗ್ಗೆ 10 ಗಂಟೆಗೆ ನಗರದ ಕರ್ನಾಟಕ ಕಲಾಮಂದಿರದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಎಲ್.ನಾಗೇಂದ್ರ, ಮೇಯರ್ ಎಂ.ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್ ಹಾಗೂ ವಿಧಾನಸಭೆ, ವಿಧಾನಪರಿಷತ್ ಸದಸ್ಯರು, ವಿವಿಧ ನಿಗಮ ಮಂಡಳಿ ಅಧ್ಯಕ್ಷರು ಹಾಗೂ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.



ಅವಿರೋಧ ಆಯ್ಕೆ



ಮೈಸೂರು,ಅ.6–ಇತ್ತೀಚೆಗೆ ನಡೆದ ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಬ್ಯಾಂಕಿನ ಉಳಿದ ಸಹಕಾರಿ ಅವಧಿಗೆ ಕೆ. ಪ್ರೇಮಕುಮಾರ್ ಅವರನ್ನು ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಪ್ರಧಾನ ವ್ಯವಸ್ಥಾಪಕ ಶ್ರೀಧರ್ ಬಿ.ಕುಲಕರ್ಣಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಂಗಳೂರಿನ ದಿಶಾ ಭಾರತ್ ಹಾಗೂ ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಗಳು ಆಯೋಜಿಸಿದ್ದ ರಾಜ್ಯ ಮಟ್ಟದ ಸ್ವರಾಜ್ಯ ಆಂದೋಲನ ರಾಷ್ಟ್ರಭಾವ ಜಾಗರಣ ಪ್ರಬಂಧ ಸ್ಪರ್ಧೆಯಲ್ಲಿ ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಕೆ.ಎನ್. ಕಾವೇರಿ ತೃತೀಯ ನಗದು ಬಹುಮಾನ ಪಡೆದುಕೊಂಡಿದ್ದಾರೆ.



ಯೋಗ ದಸರಾ ಉಪಸಮಿತಿ ಆಯೋಜಿಸಿದ್ದ ರಾಜ್ಯ ಮಟ್ಟದ ದಸರಾ ಯೋಗಾಸನ ಸ್ಪರ್ಧೆಯಲ್ಲಿ ಬ್ರಹ್ಮಶ್ರೀ ನಾರಾಯಣಗುರು ಯೋಗ ಮಂದಿರದ ಯೋಗ ಪಟುಗಳು ಬಹುಮಾನ ಪಡೆದಿದ್ದಾರೆ. ಎಂ.ಎಸ್.ಸ್ನೇಹ (18–21 ವಯೋಮಿತಿ)–ದ್ವಿತೀಯ ಬಹುಮಾನ, ವಿ.ಲಕ್ಷ್ಮೀ (34–45 ವಯೋಮಿತಿ)–ತೃತೀಯ, ಎಂ.ಜಿ. ರವಿಕುಮಾರ್ (14–18 ಬಾಲಕರ ವಿಭಾಗ)–5ನೇ ಬಹುಮಾನ, ಸುನಿಲ್ ಮತ್ತು ಅವಿನಾಶ್ (25–35 ಯುವಕರ ವಿಭಾಗ)–6ನೇ ಬಹುಮಾನ, ಎಂ.ಮಧುಸೂದನ್ (21–25 ಯುವಕರ ವಿಭಾಗ)–4ನೇ ಬಹುಮಾನ ಪಡೆದಿದ್ದಾರೆ.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು,ಅ.6–ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಅ.8ರಂದು ಸಂಜೆ 6.30ಕ್ಕೆ ಸಿದ್ಧ ಸಮಾಧಿ ಯೋಗ ಕುರಿತು ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. 14 ದಿನಗಳ ಸಿದ್ಧ ಸಮಾಧಿ ಯೋಗ ಶಿಬಿರವು ಅ. 10 ರಿಂದ ಪ್ರಾರಂಭವಾಗಲಿದೆ. ಶಿಬಿರದಲ್ಲಿ ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮ ಮತ್ತು ವ್ಯಕ್ತಿತ್ವ ವಿಕಾಸದ ಬಗ್ಗೆ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಹೆಚ್.ಎಸ್. ರಮೇಶ್‌ಚಂದ್ರ, ಮೊ. 94484 58050, ಪಿ.ಎ. ಮನೋಹರ್‌ರಾವ್, ಮೊ. 86187 62110 ಅವರನ್ನು ಸಂಪರ್ಕಿಸಬಹುದು.

ಸುಮಿತ್ರಾಗೆ ಪಿಹೆಚ್.ಡಿ

ಮೈಸೂರು, ಅ.6–ಡಾ.ಡಿ.ಎಸ್.ಗುರು ಅವರ ಮಾರ್ಗದರ್ಶನದಲ್ಲಿ ಆರ್.ಸುಮಿತ್ರ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ರಾಜಯೋಗ ರಿಟ್ರೀಟ್ ಸೆಂಟರ್‌ನಲ್ಲಿ ನೂತನ ಸಭಾಭವನಕ್ಕೆ ಅಡಿಗಲ್ಲು

ಮೈಸೂರು(ಲಿಂಗದೇವರ ಕೊಪ್ಪಲು), ಅ.6– ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗ ರಿಟ್ರೀಟ್ ಸೆಂಟರ್ ನ ಆವರಣದಲ್ಲಿ 2000 ಜನ ಕುಳಿತು ಧ್ಯಾನ ಮಾಡುವ ನೂತನ ಸಭಾಂಗಣಕ್ಕೆ ಮಾಜಿ ಸಚಿವ ಸಿ.ಎಚ್.ವಿಜಯಶಂಕರ್ ಅಡಿಗಲ್ಲು ಹಾಕಿದರು.

ನಂತರ ಮಾತನಾಡಿದ ಅವರು ಈ ದಿನ ಇಡೀ ಭರತ ಭೂಮಿಯಲ್ಲಿ ವಿಜಯದಶಮಿಯನ್ನು ಆಚರಿಸಲಾಗುತ್ತಿದೆ. ವಿಜಯದಶಮಿ ಎಂದರೆ ದುಷ್ಟ ಶಕ್ತಿಯ ಮೇಲೆ ದೈವೀ ಶಕ್ತಿಯ ವಿಜಯ. ಅನಿಷ್ಟ ಶಕ್ತಿಗಳು ಅಮಂಗಳಗಳು ನಾಶವಾಗುವುದರ ಸಂಕೇತ. ದೈವೀಶಕ್ತಿಗಳು ಜಾಗೃತಗೊಂಡು ಇಡೀ ಮನುಕುಲಕ್ಕೆ ಮಂಗಳಕರ ವಾತಾವರಣ ನಿರ್ಮಾಣ ಮಾಡಿದ ಘಳಿಗೆ ವಿಜಯದಶಮಿ. ಪಾಂಡವರು ಕೌರವರ ಮೇಲೆ ವಿಜಯವನ್ನು ಸಾಧಿಸಿದರು. ಬನ್ನಿ ಪತ್ರೆ ಕಾಳಿಸ್ವರೂಪ. ಪಾಂಡವರು ವನವಾಸಕ್ಕೆ ಹೋಗುವಂತಹ ಕಾಲಘಟ್ಟದಲ್ಲಿ ತಮ್ಮಲ್ಲಿದ್ದ ಆಯುಧಗಳನ್ನು ತಾಯಿ ಬನ್ನಿಗೆ ಅರ್ಪಣೆ ಮಾಡಿ ಅವುಗಳನ್ನು ಕಾಯ್ದುಕೊಳ್ಳುವಂತಹದ್ದು. ವನವಾಸದ ನಂತರ ಮತ್ತೆ ವಾಪಸ್ಸು ಪಡೆದು ಧರ್ಮಸ್ಥಾಪನೆಗಾಗಿ ಹೋರಾಟ ಮಾಡುವಂತಹದ್ದು. ಅಸತ್ಯದ ಮೇಲೆ ಸತ್ಯ, ಅನ್ಯಾಯದ ಮೇಲೆ ನ್ಯಾಯ ಅಧರ್ಮದ ಮೇಲೆ ಧರ್ಮಸ್ಥಾಪನೆಯ ವಿಜಯದಗಳಿಗೆಯೇ ವಿಜಯದಶಮಿಯಾಗಿದೆ ಎಂದರು.



ಇಂತಹ ವಿಜಯದಶಮಿಯ ಸುಸಂದರ್ಭದಲ್ಲಿ ಈ ಸಭಾಭವನಕ್ಕೆ ಅಡಿಗಲ್ಲು ಹಾಕುತ್ತಿರುವ ಬ್ರಹ್ಮಾಕುಮಾರಿಯರ ಕಾರ್ಯ ಶ್ಲಾಘನೀಯ. ಈ ಭವನವು ಅತೀ ಶೀಘ್ರಗತಿಯಲ್ಲಿ ನಿರ್ಮಾಣವಾಗಿ ಸಾರ್ವಜನಿಕರ ಸೇವೆಗಾಗಿ ಸಮರ್ಪಣೆಯಾಗಲಿ ಎಂದು ಆಶಿಸಿದರು. ಮೈಸೂರು ಉಪವಿಭಾಗದ ಈಶ್ವರೀಯ ವಿಶ್ವವಿದ್ಯಾಲಯಗಳ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಇಂಜಿನಿಯರ್ ಶ್ರೀನಿವಾಸ್ ಎಸ್‌ಬಿಐನ ನಿವೃತ್ತ ವ್ಯವಸ್ಥಾಪಕ ರಂಗನಾಥ ಶಾಸ್ತ್ರಿ, ಡಾ.ವಸಂತ ಕುಮಾರ ಜಯಸಿಂಹ ಜಿಲ್ಲಾ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಪ್ರಭಾಣೀಜಿ, ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ರಾಜಯೋಗಿನಿ ಬ್ರಹ್ಮಾಕುಮಾರಿ ಶಾರದಾಜಿ ಓಂಶಾಂತಿ ನ್ಯೂಸ್ ಸರ್ವೀಸ್‌ನ ಬಿ.ಕೆ.ಆರಾಧ್ಯ ಸೇರಿದಂತೆ ನಾಲ್ಕು ಜಿಲ್ಲೆಯ ಈಶ್ವರೀಯ ವಿವಿ ಸಂಚಾಲಕಿಯರು, ರಾಜಯೋಗ ವಿದ್ಯಾರ್ಥಿಗಳು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.10.2022 ಶುಕ್ರವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ : ಶತಭಿಷ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ. ಎನ್. ವೆಂಕೋಬರಾವ್, 6.40 ಅರಿವಿನ ಶಿಖರ, ಗಾಯನ–ಕೆ.ಟಿ.ಉದಯಕಿರಣ್ ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 7.15 ಪ್ರಾಯೋಜಿತ ಕಾರ್ಯಕ್ರಮ 'ಸರ್ವ ಶಿಕ್ಷಣ ಸಂಚಲನ', 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಪಿ. ರಾಜಗೋಪಾಲ್ ಮತ್ತು ಎಂ.ಎನ್. ಗಣೇಶ್–ನಾಗಸ್ವರ ವಾದನ 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಮಧು ಬಾಲಕೃಷ್ಣ, 12.45ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ–ಪಿ. ಕಾಳಿಂಗ ರಾವ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 4.00 ಮಹಿಳಾರಂಗ, ಪ್ರಸ್ತುತಿ– ಎಂ.ಎಸ್. ಭಾರತಿ, ಕೈಗನ್ನಡಿ, ಪ್ರಸ್ತುತಿ–ನಿಶಿತಾ ಕೃಷ್ಣಮೂರ್ತಿ, 4.30 ವೃತ್ತಿ ಮಾರ್ಗದರ್ಶನ– ಯೋಗ ಮತ್ತು ಪ್ರಕೃತಿ ಚಿಕಿತ್ಸೆಯಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು, 6.50 ಕೃಷಿರಂಗ–ಕಿಸಾನ್‌ವಾಣಿ, ಕಬ್ಬಿನ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ ಕುರಿತು ಜೆ.ಜಿ. ರಾಜಣ್ಣ ಅವರೊಂದಿಗೆ ಸಂದರ್ಶನ, 10.00 ರಂಗಗೀತೆಗಳು, 10.30 ಸವಿನೆನಪು

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಇವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ವೆಂಕಟಗಿರಿ ಪ್ರಕಾಶನ:** ಮಾಲತಿ ಮೇಲುಕೋಟೆ ಅವರ ಕವನ ಸಂಕಲನ 'ಹರಿವನದಿ' ಕೃತಿ ಬಿಡುಗಡೆ ಸಮಾರಂಭ, ಉದ್ಘಾಟನೆ : ಪ್ರೊ. ಭಾಷ್ಯಂ ಸ್ವಾಮೀಜಿ, ಅಧ್ಯಕ್ಷತೆ : ಮಾಜಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ನೀ. ಗಿರಿಗೌಡ, ಪುಸ್ತಕ ಬಿಡುಗಡೆ : ಮಹಾಕವಯಿತ್ರಿ ಡಾ. ಲತಾರಾಜಶೇಖರ್, ಪುಸ್ತಕ ಕುರಿತು ಮಾತನಾಡುವವರು : ಸಾಹಿತಿ ಕೆ.ಎಸ್. ಮಹಾಬಲ, ಅತಿಥಿಗಳು : ಸಾರ್ವಜನಿಕ ಗ್ರಂಥಲಯ ಇಲಾಖೆ ನಿರ್ದೇಶಕ ಡಾ. ಸತೀಶ್ ಕುಮಾರ್ ಹೊಸಮನಿ, ಸಾಹಿತಿ ಡಾ. ಸಿಪಿಕೆ, ಕಾಡೇನಹಳ್ಳಿ ವೀರಣ್ಣಗೌಡ, ನಾಗರತ್ನ ಹೆಮ್ಮಿಗೆ, ಎಂ.ಬಿ. ಶಾಂತಗಿರಿಗೌಡ, ಸ್ಥಳ: ಮೇಲುಕೋಟೆ ಅಹೋಬಲ ಮಠದ ಸಭಾಂಗಣ, ಬೆಳಗ್ಗೆ 10 ರಿಂದ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಗ್ರೂಪ್ ಡಿ ಅಡುಗೆಯವರು, ಅಡುಗೆ ಸಹಾಯಕರ ನೌಕರರ ಕೇಂದ್ರ ಸಂಘ:** ಸಭೆ, ಸ್ಥಳ: ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ನಜರ್‌ಬಾದ್, ಬೆಳಗ್ಗೆ 11.30ಕ್ಕೆ.

■ **ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** 48ನೇ ಬ್ರಹ್ಮೋತ್ಸವ, ಬೆಳಗ್ಗೆ ಮಂಟಪೋತ್ಸವ, ಲಕ್ಷ್ಮೀ ಪ್ರಣಯ ಕಲಹ, ಸಂಧಾನ ಸೇವೆ, ವಸಂತೋತ್ಸವ, ರಾಮಕೃಷ್ಣಾಶ್ರಮದ ಕೊಳದಲ್ಲಿ ಮಧ್ಯಾಹ್ನ 12 ಗಂಟೆಗೆ ಅವಭೃತ ಸ್ನಾನ, ಮಹಾನಿವೇದನ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ ಉತ್ಸವ, ಪೂರ್ಣಾಹುತಿ, ಧ್ವಜ ಅವರೋಹಣ, ವೇದಪ್ರಬಂಧಾದಿ ಪೆರಿಯ ಶಾತ್ತುಮೊರೈ, ಗೋಷ್ಠಿ ಸಂಭಾವನಾ. ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಗಾನಭಾರತೀ:** ವಿದುಷಿ ಸ್ಮಿತಾ ಶ್ರೀಕಿರಣ್ ಅವರಿಂದ ಕೊಳಲು, ವಿದುಷಿ ಸಿ.ವಿ. ಶೃತಿ–ಪಿಟೀಲು, ವಿದ್ವಾನ್ ಅನೂರ್ ವಿನೋದ್ ಶ್ಯಾಮ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

ಜಂಬೂಸವಾರಿ ಮೆರವಣಿಗೆಯಲ್ಲಿ ಮೇಳೈಸಿದ ಸ್ತಬ್ಧಚಿತ್ರಗಳಿಗೆ ಬಹುಮಾನ: ಕೊಡಗು ಪ್ರಥಮ, ಮೈಸೂರು ದ್ವಿತೀಯ, ಚಿತ್ರದುರ್ಗಕ್ಕೆ ತೃತೀಯ ಸ್ಥಾನ







ಮೈಸೂರು, ಅ.6(ಎಂಟಿವೈ)– ಜಂಬೂಸವಾರಿ ಮೆರವಣಿಗೆಯಲ್ಲಿ ಈ ಬಾರಿ 48 ಸ್ತಬ್ಧಚಿತ್ರಗಳು ಸಾಗಿ ನೋಡುಗರ ಕಣ್ಮನ ಸೆಳೆದಿದ್ದವು. ಅವುಗಳಲ್ಲಿ ಕೊಡಗು ಜಿಲ್ಲೆಯ ಸ್ತಬ್ಧಚಿತ್ರಕ್ಕೆ ಪ್ರಥಮ, ಮೈಸೂರು ದ್ವಿತೀಯ ಹಾಗೂ ಚಿತ್ರದುರ್ಗಕ್ಕೆ ಮೂರನೇ ಬಹುಮಾನ ಲಭಿಸಿದೆ.

ಪ್ರತಿವರ್ಷವೂ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವ ಸ್ತಬ್ಧಚಿತ್ರಗಳ ಮೌಲ್ಯಮಾಪನ ಮಾಡಿ ಅತ್ಯುತ್ತಮ ಸ್ತಬ್ಧಚಿತ್ರಗಳಿಗೆ ಬಹುಮಾನ ವಿತರಿಸುವ ಪದ್ಧತಿ ಅನುಸರಿಸುತ್ತಿದ್ದು, ಈ ಬಾರಿಯೂ ಮೆರವಣಿಗೆ ಸಾಗಿದ ಎಲ್ಲಾ ಸ್ತಬ್ಧಚಿತ್ರಗಳನ್ನು ಪರಿಶೀಲಿಸಲು ತೀರ್ಪುಗಾರರನ್ನು ನಿಯೋಜಿಸಲಾಗಿತ್ತು. ತೀರ್ಪುಗಾರರ ಸಮಿತಿ ಶಿಫಾರಸ್ಸಿನ ಮೇರೆಗೆ ಅತ್ಯುತ್ತಮವಾದ ಸ್ತಬ್ಧಚಿತ್ರಗಳಿಗೆ ಬಹುಮಾನ ಘೋಷಿಸಲಾಗಿದೆ. ಪ್ರಥಮ ಬಹುಮಾನ, ಕೊಡಗು ಜಿಲ್ಲೆಯ ಬ್ರಹ್ಮಗಿರಿ ಬೆಟ್ಟ, ಭಗಂಡೇಶ್ವರ ದೇವಾಲಯ, ತಲಕಾವೇರಿ ತೀರ್ಥೋದ್ಭವ ಕುರಿತ ಸ್ತಬ್ಧಚಿತ್ರಕ್ಕೆ ಲಭಿಸಿದೆ. ಎರಡನೇ ಬಹುಮಾನ, ಮೈಸೂರಿನ 18 ಬಗೆಯ ವಿಶೇಷತೆ ಬಗ್ಗೆ ಬಿಂಬಿಸುವ ಮೈಸೂರು ಜಿಲ್ಲೆ ನಿರ್ಮಿಸಿದ್ದ ಸ್ತಬ್ಧಚಿತ್ರಕ್ಕೆ ದೊರೆತಿದೆ. ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಜಲಾಶಯ, ಒನಕೆ ಓಬವ್ವ, ಕುದುರೆ ಮೇಲೆ ಆಸೀನರಾಗಿರುವ ಮದಕರಿ ನಾಯಕ ಪ್ರತಿಮೆ ಹಾಗೂ ದೀಪಸ್ತಂಭ ಸ್ತಬ್ಧಚಿತ್ರಕ್ಕೆ ಮೂರನೇ ಬಹುಮಾನ ನೀಡಲಾಗಿದೆ.

ಸಪ್ತನದಿಗಳ ಪರಿಚಯ, ಅವುಗಳಿಂದಾಗುವ ಪ್ರಯೋಜನಗಳ ಬಗ್ಗೆ ಮಾಹಿತಿಯುಳ್ಳ ಚಿಕ್ಕಮಗಳೂರು ಜಿಲ್ಲೆಯ ಸಪ್ತನದಿಗಳ ತವರು, ತುಮಕೂರು ಜಿಲ್ಲೆಯ ನಿಟ್ಟೂರಿನ ಹೆಚ್‌ಎಎಲ್ ತಯಾರಿಕಾ ಘಟಕ, ಪಾವಗಡದ ಬೃಹತ್ ಸೋಲಾರ್ ಪಾರ್ಕ್ ಸ್ತಬ್ಧಚಿತ್ರ, ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ಸೋಮನಾಥಪುರ ದೇವಾಲಯದ ಸ್ತಬ್ಧಚಿತ್ರ ಹಾಗೂ ವಿಜಯಪುರ ಜಿಲ್ಲೆಯ ಸಿದ್ದರಾಮೇಶ್ವರ ದೇವಾಲಯದ ಸ್ತಬ್ಧಚಿತ್ರಕ್ಕೆ ಸಮಾಧಾನಕರ ಬಹುಮಾನ ನೀಡಲಾಗಿದೆ.

ನಿಗಮ ಮಂಡಳಿಗಳು ನಿರ್ಮಿಸಿದ್ದ ಸ್ತಬ್ಧಚಿತ್ರಗಳಲ್ಲಿ ಕೌಶಲ್ಯಾಭಿವೃದ್ಧಿ ನಿಗಮ ನಿರ್ಮಿಸಿದ ಉದ್ಯಮಶೀಲತೆ–ಐಟಿಐ, ಜಿಟಿಟಿಸಿ, ಕೌಶಲ ತರಬೇತಿ ಸ್ತಬ್ಧಚಿತ್ರಕ್ಕೆ ಪ್ರಥಮ, ಹಾಲು ಉತ್ಪಾದಕರ ಮಹಾಮಂಡಲ ನಿರ್ಮಿಸಿದ್ದ ನಂದಿನಿ ಕ್ಷೀರಧಾರೆ, ಉತ್ಪನ್ನಗಳ ಸ್ತಬ್ಧಚಿತ್ರಕ್ಕೆ ದ್ವಿತೀಯ ಹಾಗೂ ಡಾ.ಬಾಬು ಜಗಜೀವನ ರಾಂ ಅಭಿವೃದ್ಧಿ ನಿಗಮ ನಿರ್ಮಿಸಿದ್ದ ಲಿಡ್ಕರ್ ಉತ್ಪನ್ನಗಳು ಸ್ತಬ್ಧಚಿತ್ರಕ್ಕೆ ಮೂರನೇ ಬಹುಮಾನ ದೊರೆತಿದೆ.

ಯಶಸ್ವಿ ದಸರಾ: ಅಧಿಕಾರಿ ವರ್ಗ, ಮೈಸೂರು ಜನತೆಗೆ ಡಿಸಿ ಧನ್ಯವಾದ

ಮೈಸೂರು,ಅ.6(ಜಿಎ)–ದಸರಾ ಮಹೋತ್ಸವದ ನೇತೃತ್ವ ವಹಿಸಿದ ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ದಸರಾ ಉತ್ಸವದ ಯಶಸ್ಸಿಗೆ ಕಾರಣರಾದ ಅಧಿಕಾರಿ ವರ್ಗ ಮತ್ತು ಜನರಿಗೆ ಧನ್ಯವಾದ ತಿಳಿಸಿದ್ದಾರೆ.



ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷ ದಸರಾ ಮಹೋತ್ಸವ ಅತ್ಯಂತ ಸರಳವಾಗಿ ಅರಮನೆ ಆವರಣಕ್ಕೆ ಸಿಮೀತಗೊಂಡಿತ್ತು. ಆದರೆ, ಈ ಬಾರಿ ಅದ್ಧೂರಿ ದಸರಾ ಮಹೋತ್ಸವ ತಮ್ಮ ನೇತೃತ್ವದಲ್ಲಿ ಯಶಸ್ವಿಯಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು, ತಮ್ಮ ಅಧಿಕಾರಿ ವರ್ಗ ಮತ್ತು ಮೈಸೂರು ಜನತೆಗೆ 'ಮೈಸೂರು ಮಿತ್ರ'ನ ಮೂಲಕ ಕೃತಜ್ಞತೆ ತಿಳಿಸಿದರು.

ಅದ್ಧೂರಿ ದಸರಾ ಯಶಸ್ಸಿನ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿಗಳು, ನನಗೆ ಇದು ಎರಡನೇ ದಸರಾ ಮಹೋತ್ಸವ. ಮೊದಲ ದಸರಾ ಅತ್ಯಂತ ಸರಳವಾಗಿ ನಡೆದಿತ್ತು. ಆದರೆ, ಈ ಬಾರಿ ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿಗಳು ಮೈಸೂರು ದಸರಾವನ್ನು ಉದ್ಘಾಟಿಸುತ್ತಾರೆ ಎಂಬ ಅಧಿಕೃತ ಆದೇಶ ಹೊರಬರುತ್ತಿದ್ದಂತೆ ಇಡೀ ವಿಶ್ವದ ಕಣ್ಣು ಮೈಸೂರು ನಗರದ ಮೇಲಿದ್ದರಿಂದ ಈ ಬಾರಿಯ ದಸರಾ ಬಹಳಷ್ಟು ಚಾಲೆಂಜಿಗ್ ಆಗಿತ್ತು ಎಂದರು.

ದಸರಾ ಸಂಬಂಧ ಯಾವುದೇ ನಿರ್ಧಾರಗಳನ್ನು ತೆಗೆದುಕೊಂಡರು ಅಧಿಕಾರಿ ವರ್ಗದಿಂದ ಉತ್ತಮ ಪ್ರತಿಕ್ರಿಯೆ ಮತ್ತು ಒಡನಾಟ, ಜನರ ಸಹಕಾರ ಎಂಬುದು ಬಹಳ ಮುಖ್ಯವಾಗಿರುತ್ತದೆ ಅವರ ಸಹಕಾರವಂತೂ ಅಭೂತ ಪೂರ್ವವಾಗಿತ್ತು. ಹಾಗಾಗಿ ಈ ಬಾರಿಯ ಅದ್ಧೂರಿ ದಸರಾ ಯಶಸ್ವಿ ಸಾಧ್ಯವಾಯಿತು ಎಂದು ತಿಳಿಸಿದರು.

ತಾವು ಮತ್ತು ತಮ್ಮ ಶ್ರೀಮತಿಯವರು(ಸಿ.ಅಶ್ವಥಿ) ಅಕ್ಕ–ಪಕ್ಕದ ಜಿಲ್ಲೆಯ ದಸರಾ ನೇತೃತ್ವ ವಹಿಸಿದ್ದೀರಿ ಈ ಸಂಬಂಧ ಏನಾದರೂ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮೇಡಂ ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಸಿದ್ಧತೆಗಳಲ್ಲಿ ಬ್ಯುಸಿ ಇರುತ್ತಿದ್ದರು. ನಾನು ಇತ್ತ ಮೈಸೂರಿನಲ್ಲಿ ಬ್ಯುಸಿ ಇದ್ದೆ. ವಾರಕ್ಕೆ ಒಮ್ಮೆ ಮಾತ್ರ ನಾವು ಭೇಟಿ ಮಾಡಲು ಸಮಯ ಸಿಗುತ್ತಿತು. ಕೆಲವೊಮ್ಮೆ ದಸರಾ ಸಿದ್ಧತೆ ಸಂಬಂಧ ಚರ್ಚಿಸುತ್ತಿದ್ದೆವು ಅಷ್ಟೆ ಎಂದು ಪ್ರತಿಕ್ರಿಯಿಸಿದರು.

ಮೈಸೂರು ಹೊರವಲಯದ ಬೆಳವಾಡಿ ಬಳಿ 50 ಕೋಟಿ ವೆಚ್ಚದಲ್ಲಿ ಜವಳಿ ಪಾರ್ಕ್ ನಿರ್ಮಾಣ

ಜವಳಿ ಸಚಿವ ಶಂಕರ ಬಿ.ಪಾಟೀಲ ಘೋಷಣೆ

ಮೈಸೂರು,ಅ.6(ಎಂಟಿವೈ)– ಮೈಸೂರಿನ ಹೊರವಲಯದ ಬೆಳವಾಡಿ ಬಳಿ 50 ಕೋಟಿ ರೂ.ವೆಚ್ಚದಲ್ಲಿ ಜವಳಿ ಪಾರ್ಕ್ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಸಚಿವ ಶಂಕರ ಬಿ.ಪಾಟೀಲ ಮುನೇನಕೊಪ್ಪ ತಿಳಿಸಿದ್ದಾರೆ.



ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಕೈಮಗ್ಗ ಮತ್ತು ಜವಳಿ ಮಳಿಗೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಜವಳಿ ನೀತಿ ಆಧರಿಸಿ ಮೈಸೂರಿನಲ್ಲಿ ಜವಳಿ ಪಾರ್ಕ್ ನಿರ್ಮಿಸಲಾಗುತ್ತಿದೆ. ನಿರ್ಮಾಣಕ್ಕೆ ಇದ್ದ ಕಾನೂನಿನ ತೊಡಕುಗಳನ್ನು ಪರಿಹರಿಸಲಾಗಿದೆ. ಪಾರ್ಕ್‌ಗೆ 10 ಎಕರೆ ಜಾಗದ ಅವಶ್ಯಕತೆ ಇತ್ತು ಆದರೆ, 7 ಎಕರೆ ಮಂಜೂರಾಗಿದೆ. ಹೆಚ್ಚಿನ ಜಾಗ ಕೇಳಿದರೆ ಮತ್ತೆ ತಡವಾಗುತ್ತದೆ. ಕೇಂದ್ರ ಸರ್ಕಾರ ಅನುದಾನ ನೀಡಲು ಸಿದ್ಧವಿದೆ. ಮುಂದಿನ ಜನವರಿ ಅಥವಾ ಫೆಬ್ರವರಿಯಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ. ಇದರಿಂದ 500 ಜನರಿಗೆ ಉದ್ಯೋಗ ಸಿಗಲಿದೆ ಎಂದರು.

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ತರಲು ಪ್ರಯತ್ನಿಸಲಾಗುತ್ತಿದೆ. ರಾಜ್ಯದ 5 ಜಿಲ್ಲೆಗಳಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡಲಾಗುವುದು. ಇನ್ನೂ ಹಲವು ಜಿಲ್ಲೆಗಳೂ ಬೇಡಿಕೆ ಸಲ್ಲಿಸಿದ್ದು, ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಕೋವಿಡ್ ಕಾರಣಕ್ಕೆ 2 ವರ್ಷಗಳಿಂದ ವಸ್ತುಪ್ರದರ್ಶನ ಆಯೋಜಿಸಲು ಆಗಿರಲಿಲ್ಲ. ಈ ಬಾರಿ ಬೆಂಗಳೂರು ಸೇರಿದಂತೆ ಹಲವೆಡೆ ಜವಳಿ ಮೇಳ ಆಯೋಜಿಸಲಾಗುವುದು. ನೇಕಾರರನ್ನು ಉಳಿಸಿ, ಬೆಳೆಸುವುದರ ಜತೆಗೆ ಉದ್ಯೋಗ ಸೃಷ್ಟಿಗೆ ಒತ್ತು ನೀಡಲಾಗುವುದು ಎಂದರು.

ನೇಕಾರರ ಹಳೆ ಪರಂಪರೆಯನ್ನು ಉಳಿಸುವ ಕೆಲಸವನ್ನೂ ಮಾಡಲಾಗುತ್ತಿದೆ. ಕೃಷಿಕರಿಗೆ ನೀಡುವಂತೆ ನೇಕಾರ ಸಮ್ಮಾನ ಯೋಜನೆಯಡಿ ಸಹಾಯಧನ ನೀಡಲಾಗುವುದು. ನೇಕಾರರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲು ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಜತೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ನೇಕಾರರಿಗೆ ಸಬ್ಸಿಡಿ ನೀಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಇಲಾಖೆ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸಮೂರ್ತಿ, ಸಹಾಯಕ ನಿರ್ದೇಶಕ ಲಕ್ಷ್ಮಣ್ ತಳವಾರ್, ಜಂಟಿ ನಿರ್ದೇಶಕ ರವಿಕುಮಾರ್ ಇದ್ದರು.

ನಾಳೆ 'ಜನತಾಮಿತ್ರ' ಸಮಾರೋಪ

ನ.1ಕ್ಕೆ 'ಪಂಚರತ್ನ ರಥಯಾತ್ರೆ'ಗೆ ಚಾಲನೆ

ಬೆಂಗಳೂರು: ಜೆಡಿಎಸ್‌ನ ಮಹತ್ವಾಕಾಂಕ್ಷೆಯ ಪಂಚರತ್ನ ರಥಯಾತ್ರೆಗೆ ನವೆಂಬರ್ 1ರಂದು ಚಾಲನೆ ನೀಡುವುದಾಗಿ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.



ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಗಾಗಲೇ ಸಂಘಟನೆ ಆರಂಭಿಸಿದ್ದೇವೆ. ಉತ್ತರ ಕರ್ನಾಟಕ ಭಾಗದಲ್ಲಿ ಜೆಡಿಎಸ್ ಅಸ್ತಿತ್ವ ಏನು ಎಂಬುದನ್ನು ಈ ಕಾರ್ಯಕ್ರಮದ ಮೂಲಕ ತೋರಿಸುತ್ತೇವೆ ಎಂದು ಗುರುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ಇನ್ನು ಜನತಾಮಿತ್ರ ಸಮಾರೋಪ ಸಮಾರಂಭ ಅ.8ರಂದು ಬಸವನಗುಡಿ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ಮಧ್ಯಾಹ್ನ 3ಕ್ಕೆ ಆಯೋಜಿಸಿದ್ದೇವೆ ಎಂದು ಕುಮಾರಸ್ವಾಮಿ ತಿಳಿಸಿದರು.

ಸಾಮಾಜಿಕ ಜಾಲತಾಣದಲ್ಲಿ ದಾಖಲೆ ಪ್ರಮಾಣದಲ್ಲಿ ದಸರಾ ವೀಕ್ಷಣೆ



ಮೈಸೂರು, ಅ.6(ಆರ್‌ಕೆ)–ಮೈಸೂರು ದಸರಾ ಮಹೋತ್ಸವದ ಕಾರ್ಯಕ್ರಮಗಳನ್ನು ಅತೀ ಹೆಚ್ಚು ಮಂದಿ ಯು–ಟ್ಯೂಬ್ ಮತ್ತು ಫೇಸ್‌ಬುಕ್ ಲೈವ್ ನೋಡಿ ಪ್ರಶಂಸಿಸಿದ್ದಾರೆ ಎಂದು ನೋಡಲ್ ಅಧಿಕಾರಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ತಿಳಿಸಿದ್ದಾರೆ.

ವಿಜಯದಶಮಿ ಮೆರವಣಿಗೆ ಸೇರಿದಂತೆ ನಾಡ ಹಬ್ಬದ ಎಲ್ಲಾ ಕಾರ್ಯಕ್ರಮಗಳನ್ನು ಯು–ಟ್ಯೂಬ್ ಮತ್ತು ಫೇಸ್‌ಬುಕ್ ಲೈವ್‌ನಲ್ಲಿ ಮೊಬೈಲ್ ಮೂಲಕ ನೋಡಿದ್ದು, ಯಾವುದೇ ಅಡಚಣೆ ಇಲ್ಲದೇ ಗುಣಮಟ್ಟದಲ್ಲಿ ಪ್ರಸಾರವಾಯಿತು ಎಂದು ಪ್ರಶಂಸೆ ವ್ಯಕ್ತಪಡಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಯುವ ದಸರಾವನ್ನು 21 ಲಕ್ಷ ಮಂದಿ, ಸಾಂಸ್ಕೃತಿಕ ಕಾರ್ಯಕ್ರಮವನ್ನು 8 ಲಕ್ಷ ಮಂದಿ, ವಿಜಯದಶಮಿ ಮೆರವಣಿಗೆಯನ್ನು 6.5 ಲಕ್ಷ ಮಂದಿ ಫೇಸ್‌ಬುಕ್‌ನಲ್ಲಿ ವೀಕ್ಷಿಸಿದ್ದಾರೆ. ಅದೇ ರೀತಿ ಯು–ಟ್ಯೂಬ್‌ನಲ್ಲಿ ಯುವ ದಸರಾದ 'ಅಪ್ಪು ನಮನ' ಕಾರ್ಯಕ್ರಮವನ್ನು 3.5 ಲಕ್ಷ ಮಂದಿ, ಸೋನು ನಿಗಮ್ ಕಾರ್ಯಕ್ರಮವನ್ನು 4.7 ಲಕ್ಷ ಮಂದಿ ಹಾಗೂ ಸುನಿಧಿ ನಡೆಸಿಕೊಟ್ಟ ಕಾರ್ಯಕ್ರಮವನ್ನು 3.5 ಲಕ್ಷ ಮಂದಿ ನೋಡಿದ್ದಾರೆ ಎಂದು ತಿಳಿಸಿದ್ದಾರೆ. ವೆಬ್‌ಸೈಟ್ ನೋಡಲ್ ಅಧಿಕಾರಿಯಾಗಿ ವ್ಯವಸ್ಥಿತವಾಗಿ ಲೈವ್ ಕಾರ್ಯ ನಿರ್ವಹಣೆ ಮಾಡಲಾಗಿದ್ದು, ಫೇಸ್‌ಬುಕ್ ಮತ್ತು ಯು–ಟ್ಯೂಬ್‌ನಲ್ಲಿ ಹೆಚ್ಚು ಮಂದಿ ವೀಕ್ಷಿಸಲು ನಮ್ಮ ತಂಡ ಯಶಸ್ವಿಯಾಗಿ ಕೆಲಸ ಮಾಡಿದೆ ಎಂದು ಹರೀಶ್ ತಿಳಿಸಿದ್ದಾರೆ.



ಪಾಂಡವಪುರ ತಾಲೂಕಿನಲ್ಲಿ ಗುರುವಾರ ನಡೆದ ಭಾರತ ಐಕ್ಯತಾ ಯಾತ್ರೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ, ಶಾಸಕ ತನ್ವೀರ್ ಸೇಠ್, ಕೆಪಿಸಿಸಿ ನಾಯಕಿ ಐಶ್ವರ್ಯಾ ಮಂಚನಹಳ್ಳಿ ಮಹದೇವ್, ಅಜೀಜ್‌ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್ ಇನ್ನಿತರರು ಭಾಗವಹಿಸಿದ್ದರು.

ಎಸ್‌ಸಿ, ಎಸ್‌ಟಿಗೆ ಮೀಸಲಾತಿ ಹೆಚ್ಚಳ ವಿಚಾರ

ಇಂದು ಸಿಎಂ ಬೊಮ್ಮಾಯಿ ನೇತೃತ್ವದಲ್ಲಿ ಸರ್ವ ಪಕ್ಷ ಸಭೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಹೆಚ್ಚಳ ಸಂಬಂಧ ಚರ್ಚಿಸಲು ನಾಳೆ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸರ್ವ ಪಕ್ಷಗಳ ನಾಯಕರ ಸಭೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆದಿದ್ದಾರೆ.



ಮೀಸಲಾತಿ ಹೆಚ್ಚಳ ಸಂಬಂಧ ಸರ್ವ ಪಕ್ಷ ಸಭೆ ಕರೆದು ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚಿಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಭರವಸೆ ನೀಡಿದ್ದರು. ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡುವುದಕ್ಕೆ ಬೇಡಿಕೆಯಿದೆ. ಜನಸಂಖ್ಯೆ ಆಧಾರದ ಮೇಲೆ ಪರಿಶಿಷ್ಟ ಜಾತಿಗೆ ಶೇ.15ರಿಂದ 17ರಷ್ಟು, ಪರಿಶಿಷ್ಟ ಪಂಗಡಕ್ಕೆ ಶೇ.3ರಿಂದ ಶೇ.7ರಷ್ಟು ಮೀಸಲಾತಿ ಹೆಚ್ಚಿಸಬೇಕೆಂದು ನ್ಯಾಯಮೂರ್ತಿ ಹೆಚ್ ಎನ್ ನಾಗಮೋಹನ್ ದಾಸ್ ನೇತೃತ್ವದ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಎಸ್‌ಟಿ ಸಮುದಾಯಕ್ಕೆ ಶೇ.7.5ರಷ್ಟು ಮೀಸಲಾತಿ ಹೆಚ್ಚಿಸಬೇಕೆಂಬುದು ವಾಲ್ಮೀಕಿ ಸಮುದಾಯದ ಬೇಡಿಕೆಯಾಗಿದೆ. ಸಚಿವ ಬಿ.ಶ್ರೀರಾಮುಲು ಈ ಬೇಡಿಕೆಯನ್ನು ತೀವ್ರವಾಗಿ ಬೆಂಬಲಿಸುತ್ತಿದ್ದಾರೆ.

ಮೀಸಲಾತಿಯನ್ನು ಶೇ.50ಕ್ಕಿಂತ ಹೆಚ್ಚಿಸಬಾರದು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಆದರೆ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಸಮಿತಿ ಶಿಫಾರಸುಗಳು ಸುಪ್ರೀಂ ನೀಡಿರುವ ಆದೇಶಕ್ಕಿಂತ ಹೆಚ್ಚಿನದಾಗಿದೆ. ಆದಾಗ್ಯೂ ಅಸಾಧಾರಣ ಸಂದರ್ಭಗಳಲ್ಲಿ ನಿಯಮವನ್ನು ಸಡಿಲಿಸಬಹುದು ಎಂದು ನ್ಯಾಯಮೂರ್ತಿ ನಾಗಮೋಹನ್ ದಾಸ್ ಹೇಳಿದ್ದಾರೆ. ಇವರ ವರದಿ ಕುರಿತು ಸರ್ವ ಪಕ್ಷ ಸಭೆಯಲ್ಲಿ ಚರ್ಚಿಸುವ ಸಾಧ್ಯತೆಯಿದೆ. ವಿವಿಧ ಸಮುದಾಯಗಳ ಬೇಡಿಕೆಯ ವಿವರಗಳು, ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಸಂಪುಟದಲ್ಲಿ ಚರ್ಚಿಸಲಾಗುತ್ತದೆ. ನಂತರ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು. ಈ ಮಧ್ಯೆ ಲಿಂಗಾಯತ ಪಂಚಮಶಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಲು ಮುಖ್ಯಮಂತ್ರಿ ಬೊಮ್ಮಾಯಿ ಸರ್ವ ಪಕ್ಷಗಳ ಸಭೆ ಕರೆಯಬೇಕೆಂದು ಲಿಂಗಾಯಿತ ಸ್ವಾಮೀಜಿ ಜಯ ಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದ್ದಾರೆ.


ವಿಷಾಹಾರ ಸೇವಿಸಿ ಮೂವರು ಸಾವು: 11 ಮಂದಿ ಆಸ್ಪತ್ರೆಗೆ ದಾಖಲು

ಕೊಯಮತ್ತೂರು: ತಿರುಪ್ಪೂರ್‌ನ ಶಿಶುಪಾಲನಾ ಕೇಂದ್ರದಲ್ಲಿ ಇಂದು ವಿಷಾಹಾರ ಸೇವನೆಯಿಂದ ಮೂವರು ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದ್ದು, ಇನ್ನು ಅಸ್ವಸ್ಥಗೊಂಡಿರುವ 11 ಬಾಲಕರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಾಲಕರು ಬುಧವಾರ ರಾತ್ರಿ ಊಟಕ್ಕೆ 'ರಸ' ಮತ್ತು ಲಡ್ಡು ಮಿಶ್ರಿತ ಅನ್ನವನ್ನು ಸೇವಿಸಿದರು. ನಂತರ ಅವರಲ್ಲಿ ಕೆಲವರಿಗೆ ವಾಂತಿ ಮತ್ತು ಭೇದಿಯಾಗಿತ್ತು. ಇಂದು ಬೆಳಗ್ಗೆ ಅವರು ಉಪಹಾರ ಸೇವಿಸಿದರು. ನಂತರ ಅವರ ಸ್ಥಿತಿ ಹದಗೆಟ್ಟಿದ್ದು, ಕೆಲವರು ಪ್ರಜ್ಞಾಹೀನರಾದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅವರೆಲ್ಲರನ್ನೂ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ತಿರುಪ್ಪೂರ್ ಮತ್ತು ಅವಿನಾಶಿಯ ಸರ್ಕಾರಿ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ ಎಂದರು.

ಆದರೆ, 8ರಿಂದ 13 ವರ್ಷದೊಳಗಿನ ಮೂವರು ಬಾಲಕರು ಆಸ್ಪತ್ರೆಯಲ್ಲಿ ಮೃತಪಟ್ಟರೆ, ಇತರರು ಚಿಕಿತ್ಸೆ ಪಡೆಯುತ್ತಿದ್ದಾರೆ. ಮೂವರನ್ನು ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಗಿದೆ. ಆಸ್ಪತ್ರೆಗೆ ಭೇಟಿ ನೀಡಿದ್ದ ತಿರುಪ್ಪೂರ್ ಡಿಸಿ ವಿನೀತ್, ವಿಷಾಹಾರದ ಪ್ರಾಥಮಿಕ ವರದಿಗಳ ನಂತರ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ ಎಂದರು. ವಿಚಾರಣೆ ನಂತರ ತಪ್ಪಿತಸ್ಥರೆಂದು ಕಂಡುಬಂದರೆ ಶ್ರೀ ವಿವೇಕಾನಂದ ನಿರ್ಗತಿಕರ ಕೇಂದ್ರದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು. ಪೊಲೀಸರು ತನಿಖೆ ನಡೆಸುತ್ತಿದ್ದು, ನಿರಾಶ್ರಿತ ಕೇಂದ್ರ ನಡೆಸುತ್ತಿರುವವರ ಬಗ್ಗೆ ವಿಚಾರಣೆ ನಡೆಸುತ್ತಿದ್ದಾರೆ.

ಕೆಸಿಇಟಿ: ಕೆಇಎ ಕೌನ್ಸೆಲಿಂಗ್ ದಿನಾಂಕ ಪ್ರಕಟ


ಬೆಂಗಳೂರು: ಹಲವಾರು ವಿಳಂಬಗಳ ನಂತರ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ(ಕೆಸಿಇಟಿ)ಯ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದೆ.



ವೇಳಾಪಟ್ಟಿಯ ಪ್ರಕಾರ, ಕೆಇಎ ಕಚೇರಿಯಲ್ಲಿ ದಾಖಲೆಗಳ ಪರಿಶೀಲನೆ ಪ್ರಕ್ರಿಯೆಯು ಅ.7ರಂದು ಪ್ರಾರಂಭವಾಗಲಿದೆ ಮತ್ತು ಅ.8ರಂದು ಕೊನೆಗೊಳ್ಳಲಿದೆ. ಅ.7ರಂದು ಕೆಇಎ ವೆಬ್‌ಸೈಟ್‌ನಲ್ಲಿ ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರವನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡಲಾಗಿದೆ. ಅಭ್ಯರ್ಥಿಗಳು ಅ.7ರಿಂದ 10ರ ನಡುವೆ ವೆಬ್‌ಸೈಟ್‌ನಿಂದ ಪರಿಶೀಲನೆ ಸ್ಲಿಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ದಾಖಲೆಗಳ ಪರಿಶೀಲನೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾದ ಅಭ್ಯರ್ಥಿಗಳ ಹೆಸರನ್ನು ಇಂದು ಮಧ್ಯಾಹ್ನ 1 ಗಂಟೆಯ ನಂತರ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಲಾಗಿದೆ. ನೈಜ ಸೀಟು ಹಂಚಿಕೆ ಫಲಿತಾಂಶವನ್ನು ಅ.17ರಂದು ಮಧ್ಯಾಹ್ನ 2 ಗಂಟೆಯ ನಂತರ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ತಾವು ಆಯ್ಕೆಮಾಡಿದ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಲು ಅ.22 ಕೊನೆಯ ದಿನವಾಗಿದೆ. ಹೆಚ್ಚಿನ ವಿವರಗಳಿಗಾಗಿ ಕೆಇಎ ವೆಬ್‌ಸೈಟ್ http://kea.kar.nic.in/ಪರಿಶೀಲಿಸಬಹುದು.

ನಿರೀಕ್ಷೆಗೂ ಮೀರಿ ಜನ ಬಂದಿದ್ದರಿಂದ ಕೆಲವೆಡೆ ನೂಕು–ನುಗ್ಗಲು

ಮೈಸೂರು, ಅ.6(ಆರ್‌ಕೆ)–ದಸರಾ ಜಂಬೂ ಸವಾರಿ ಮೆರವಣಿಗೆ ವೀಕ್ಷಿಸಲು ನಿರೀಕ್ಷೆಗೂ ಮೀರಿ ಜನರು ಬಂದಿದ್ದರಿಂದ ಕೆಲವೆಡೆ ನೂಕು–ನುಗ್ಗಲು ಉಂಟಾಯಿತು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಈ ಬಾರಿ ಅತೀ ಹೆಚ್ಚು ಜನರು ವಿಜಯದಶಮಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಅರಮನೆ ಆವರಣ ಹಾಗೂ ಚಾಮರಾಜ ಸರ್ಕಲ್ ಬಳಿ ಚಿನ್ನದ ಅಂಬಾರಿ ಬಂದಾಗ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ನೋಡಲೆಂದು ಜನರು ಬ್ಯಾರಿಕೇಡ್ ದಾಟಿ ಮುಂದೆ ಬಂದಾಗ ಸ್ವಲ್ಪ ನೂಕಾಟ–ತಳ್ಳಾಟವಾಯಿತು. ತಕ್ಷಣ ಪೊಲೀಸರು ತಡೆದು ಮೆರವಣಿಗೆಗೆ ಅನುವು ಮಾಡಿಕೊಟ್ಟಿದ್ದಾರೆ ಎಂದರು.

ವಿವಿಧ ಉಪ ಸಮಿತಿಗಳ ಅಧಿಕಾರೇತರ ಸದಸ್ಯರು ಮೆರವಣಿಗೆ ಮಾರ್ಗದಲ್ಲಿ ಅಡ್ಡಾದಿಡ್ಡಿ ಓಡಾಡಿ, ಜನರಿಗೆ ತೊಂದರೆ ಉಂಟು ಮಾಡಿದ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಮೆರವಣಿಗೆ ಉಪ ಸಮಿತಿ ಪದಾಧಿಕಾರಿಗಳು, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ನೇತೃತ್ವದಲ್ಲಿ ಜಂಬೂ ಸವಾರಿ ರೂಪು–ರೇಷೆ ಸಿದ್ಧವಾಗಿತ್ತು. ಅವರು ಚೆನ್ನಾಗಿಯೇ ನಿಭಾಯಿಸಿದ್ದಾರೆ. ಸದಸ್ಯರು ಮೆರವಣಿಗೆ ಮಾರ್ಗದಲ್ಲಿ ಓಡಾಡುತ್ತಿದ್ದರೆಂಬುದರ ಬಗ್ಗೆ ವಿಚಾರಿಸುತ್ತೇನೆ ಎಂದರು.

ಜನರ ದಸರಾ: ಮೈಸೂರು ದಸರಾ ಮಹೋತ್ಸವ ಜನರಿಗಾಗಿ ಆಚರಿಸುವುದು. ಒಂದೇ ಕ್ಷೇತ್ರಕ್ಕೆ ಪಾಸ್‌ಗಳು ಹೋಗಿವೆ ಎಂಬುದು ನಿರಾಧಾರ ಆರೋಪವಷ್ಟೇ. ಇದು ಜನರಿಗಾಗಿ ಆಚರಿಸಿದ ಹಬ್ಬ. ಕೇವಲ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗಾಗಿ ಮಾಡಿದ್ದಲ್ಲ. ಹಾಗಾದರೆ ಯಶವಂತಪುರದ ಜನರು ಮೈಸೂರು ದಸರಾ ನೋಡಬಾರದೇ ಎಂದು ಪ್ರಶ್ನೆಯೊಂದಕ್ಕೆ ಸೋಮಶೇಖರ್ ಪ್ರತಿಕ್ರಿಯಿಸಿದರು.



ಈ ನಾಡಿನ ಜನರು ನೋಡಲೆಂದೇ ದಸರಾ ಮಾಡುತ್ತಿರುವಾಗ ಜನರಿಗೆ ಪಾಸ್ ಕೊಡದೆ ಇನ್ನಾರಿಗೆ ಹಂಚಬೇಕು? ಅದರಿಂದಲೇ ಈ ಬಾರಿ ಅತೀ ಹೆಚ್ಚು ಮಂದಿ ದಸರಾ ಮಹೋತ್ಸವ ನೋಡಲು ಸಾಧ್ಯವಾಯಿತು ಎಂದರು.

ಶೀಘ್ರ ಲೆಕ್ಕ: ಈಗ ತಾನೇ ದಸರಾ ಮುಗಿದಿದೆ. ಎಲ್ಲಾ ಉಪ ಸಮಿತಿಗಳಿಂದ ಖರ್ಚು–ವೆಚ್ಚದ ಮಾಹಿತಿ ಬರ ಬೇಕಾಗಿದೆ. ಮಾಹಿತಿ ತರಿಸಿಕೊಂಡು ಅತೀ ಶೀಘ್ರ ದಸರಾ ಮಹೋತ್ಸವದ ಲೆಕ್ಕವನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡುತ್ತೇವೆ ಎಂದು ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಇದೇ ವೇಳೆ ನುಡಿದರು.

ನಕ್ಕರೆ ಅದೇ ಸ್ವರ್ಗ

ತಾಯಿ : ಇವತ್ತಾದರೂ ನಿನ್ನ ಕೊಠಡಿಯನ್ನು ಕ್ಲೀನ್ ಮಾಡೋ. ಎಷ್ಟೊಂದು ಕಸ

ಮಗ : ಸಾರಿಯಮ್ಮ, ಇವತ್ತು ಬೀದಿ ಸ್ವಚ್ಛತಾ ಕಾರ್ಯಕ್ರಮವಿದೆ. ನಾನೂ ಹೋಗಬೇಕು!

ಮೈಸೂರು ಮಿತ್ರ
ಶುಕ್ರವಾರ, 7 ಅಕ್ಟೋಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಕೆಲಸ ಸಾಧಿಸಲು ಇಚ್ಛಿಸುವವರು ಬಿಗುಮಾನ ಬಿಡಬೇಕು

–ರಾಮಾಯಣ


ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಣ್ಣೆ ಸೊಪ್ಪಾದರೂ ಸರಿ ಲೆಕ್ಕದ ಮುದ್ದೆ ಉಣಬೇಕು

ನಿಮ್ಮ ಪತ್ರಗಳು

ಕನ್ನಡ ಪ್ರಕಾಶನ ಕ್ಷೇತ್ರದ ಸವ್ಯಸಾಚಿ ಟಿ.ಎಸ್. ಛಾಯಾಪತಿ

ಮಾನ್ಯರೆ,



ನಾಡಿನ ಹೆಸರಾಂತ ಪ್ರಕಾಶಕ ಹಾಗೂ ಲೇಖಕರಾಗಿದ್ದ ಟಿ.ಎಸ್. ಛಾಯಾಪತಿಯವರ ನಿಧನ ಕನ್ನಡ ಸಾರಸ್ವತ ಲೋಕಕ್ಕೆ ಉಂಟಾದ ತೀವ್ರ ನಷ್ಟವಾಗಿದೆ. ಪ್ರಖ್ಯಾತ ಸಾಹಿತಿ ಹಾಗೂ ವಿದ್ವಾಂಸರಾಗಿದ್ದ ತ.ಸು.ಶಾಮರಾಯರ ಸುಪುತ್ರರಾಗಿದ್ದ ಟಿ.ಎಸ್. ಛಾಯಾಪತಿ, ಪ್ರಕಾಶನ ಕ್ಷೇತ್ರದಲ್ಲಿ ವಿಶಿಷ್ಟಛಾಪು ಮೂಡಿಸಿದ್ದರು.

ಅವರ ಮಾಲೀಕತ್ವದ "ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆಯು" ನಾಡಿನ ಹೆಸರಾಂತ ಹಾಗೂ ಅಗ್ರಪಂಕ್ತಿಯ ಪ್ರಕಾಶನ ಸಂಸ್ಥೆಯಾಗಿತ್ತು. ಕನ್ನಡದ ಹಿರಿಯ ಕವಿಗಳಾದ ಚೆನ್ನವೀರ ಕಣವಿ ಅವರ 16 ಕವಿತಾ ಸಂಕಲನಗಳನ್ನು ಒಂದೇ ಬಾರಿಗೆ ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದ ಛಾಯಾಪತಿ, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ, ಹಾ.ಮಾ.ನಾಯಕ್, ದೇಜಗೌ, ನಿಸಾರ್ ಅಹಮದ್, ಮತ್ತೂರು ಕೃಷ್ಣಮೂರ್ತಿ ಮುಂತಾದ ವಿದ್ವರೇಣ್ಯರ ಮೌಲಿಕ ಕೃತಿಗಳನ್ನು ಪ್ರಕಟಿಸಿ ಪ್ರಕಾಶನ ಕ್ಷೇತ್ರದ ಸವ್ಯಸಾಚಿಯಾಗಿದ್ದರು. ಸರಿ ಸುಮಾರು 1500ಕ್ಕೂ ಅಧಿಕ ಕೃತಿಗಳನ್ನು ಪ್ರಕಟಿಸುವ ಮೂಲಕ ಪ್ರಕಾಶನ ಕ್ಷೇತ್ರದಲ್ಲಿ ದಾಖಲೆ ಬರೆದಿದ್ದ ಛಾಯಾಪತಿ, ಓರ್ವ ಉತ್ತಮ ಲೇಖಕರಾಗಿಯೂ ಸಹ ಹೆಸರು ಮಾಡಿದ್ದರು. ಅವರನ್ನು "ಸಾವಿರ ಕೃತಿಗಳ ಸರದಾರ" ಎಂದು ಪ್ರೀತಿ ಗೌರವಗಳಿಂದ ಕರೆಯಲಾಗುತ್ತಿತ್ತು. ನಾನು ಕಂಡು ಕೇಳಿರುವ ಹಾಗೇ ಕೆಲವೇ ಕೆಲವು ಪ್ರಕಾಶನ ಸಂಸ್ಥೆಗಳು ಮಾತ್ರ ಜನಮಾನಸದಲ್ಲಿ ದೀರ್ಘಕಾಲ ಉಳಿಯುವಂತಹ ಕೆಲಸ ಮಾಡಿವೆ. ಅವುಗಳ ಪೈಕಿ, ತಳುಕಿನ ಸ್ಮಾರಕ ಗ್ರಂಥ ಮಾಲೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, "ಕಾವ್ಯಾಲಯ ಪ್ರಕಾಶಕರು" ಮುಂತಾದವುಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ. ಸುಮಾರು 23 ಕೃತಿಗಳನ್ನು ಸ್ವತಃ ರಚಿಸಿ, ಕನ್ನಡ ಸಾರಸ್ವತ ಲೋಕಕ್ಕೆ ತಮ್ಮದೇ ಆದ ಕಾಣಿಕೆ ನೀಡಿದ್ದ ಛಾಯಾಪತಿ, ನಾಡಿನ ಬಹುತೇಕ ಸಾಹಿತಿಗಳ ಹಾಗೂ ವಿದ್ವಾಂಸರ ಒಡನಾಟ ಹೊಂದಿದ್ದರು. ಪ್ರಕಾಶಕ ಅಂದ ಮೇಲೆ ಸಹಜವಾಗಿ ಅವರಿಗೆ ಸಾಹಿತಿಗಳ ಮತ್ತು ಲೇಖಕರ ಒಡನಾಟ ಇದ್ದೇ ಇರಬೇಕಾಗುತ್ತದೆ. ಅದು ಬೇರೆ ಮಾತು. ನಾಡಿನ ಕೆಲವೇ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಲ್ಲಿ ಒಂದಾಗಿರುವ ಅವರ ಪ್ರಕಾಶನ ಸಂಸ್ಥೆ, ಪ್ರಕಟಿಸಿರುವ ಬಹುತೇಕ ಕೃತಿಗಳು ಮೌಲಿಕ ಕೃತಿಗಳಾಗಿವೆ. ಅವರ ತಂದೆ ತ.ಸು.ಶಾಮರಾಯರಂತೆ, ಛಾಯಾಪತಿಯವರು ಸಹ ಪುಸ್ತಕ ಪ್ರೇಮಿಯಾಗಿದ್ದರು. ಸಾಹಿತ್ಯ ಎಂಬುದು ಅವರಿಗೆ ರಕ್ತಗತವಾಗಿತ್ತು ಎಂದು ಹೇಳಬಹುದು. ಏಕೆಂದರೆ ಅವರ ಚಿಕ್ಕಪ್ಪ ತ.ರಾ. ಸುಬ್ಬರಾಯರು, ನಾಡಿನ ಶ್ರೇಷ್ಠ ಲೇಖಕರ ಪೈಕಿ ಪ್ರಮುಖರಾಗಿದ್ದರು. ಅವರ "ಹಂಸ ಗೀತೆ", "ದುರ್ಗಾಸ್ತಮಾನ" ಮುಂತಾದ ಶ್ರೇಷ್ಠ ಕಾದಂಬರಿಗಳನ್ನು ಯಾರು ತಾನೇ ಮರೆಯಲು ಸಾಧ್ಯ? ತಮ್ಮ ತಂದೆಯಿಂದ ಬಹಳಷ್ಟು ಪ್ರಭಾವಿತರಾಗಿದ್ದ ಛಾಯಾಪತಿ, ತಂದೆ ತೋರಿದ ದಾರಿಯಲ್ಲೇ ಸಾಗಿ ನಾಡಿನ ಓರ್ವ ಶ್ರೇಷ್ಠ ಪ್ರಕಾಶಕರಾಗಿ ಹೊರಹೊಮ್ಮಿದ್ದರು. ಇಂತಹ ಅಗ್ರಗಣ್ಯ ಪ್ರಕಾಶಕರಾಗಿದ್ದ ಶ್ರೀಯುತರಿಗೆ "ಪರಿಸರ ಶಿಲ್ಪಿ ಪದ್ಮಶ್ರೀ", "ಸಾಹಿತ್ಯ ಸೇವಾ ಧುರೀಣ" ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳು ಸಂದಿದ್ದವು. ಛಾಯಾಪತಿಯವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅದಕ್ಕಿಂತಲೂ ಹೆಚ್ಚಾಗಿ ಮತ್ತು ವಿಶೇಷವಾಗಿ ಪ್ರಕಾಶನ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಅದ್ಧೂರಿ ದಸರಾ 'ಪಾಸು' ಆಯ್ತು?

ಮಾನ್ಯರೆ,

ರಾಜಪಥದಲ್ಲಿ ಗಜಗಾಂಭೀರ್ಯದ ವಿದ್ಯುತ್ ಬೆಳಕಿನಡಿ ಸಾಗಿದ ಅದ್ದೂರಿ ದಸರಾವನ್ನು ರಸ್ತೆಯುದ್ದಕ್ಕೂ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಸೇರಿದ ಜನರು ಕಣ್ತುಂಬಿಕೊಂಡು ಪುಳಕಿತಗೊಂಡರು. ಚಾಮುಂಡೇಶ್ವರಿ ಭೇದವಿಲ್ಲದೆ ಎಲ್ಲರಿಗೂ ದರ್ಶನ ನೀಡಿ ಆಶೀರ್ವದಿಸಿದಳು. ಅವರ್‍ಯಾರಿಗೂ ಜಿಲ್ಲಾಡಳಿತ ಮುದ್ರಿಸುವ ಪಾಸುಗಳ ಬಗ್ಗೆ ಚಿಂತೆ ಇರಲಿಲ್ಲ. ಆದರೆ ಚುನಾಯಿತ ಜನಪ್ರತಿನಿಧಿ ಗಳ ಕೂಗು ಒಂದೇ....!? ನಮಗೆ ಹೆಚ್ಚು ಪಾಸುಗಳನ್ನು ಕೊಡಲಿಲ್ಲ ಎಂಬುದು. ಪ್ರತೀ ದಸರಾದಲ್ಲೂ ಪಾಸುಗಳನ್ನು ನೀಡುವಲ್ಲಿ ಆಗುವ ತಾರತಮ್ಯದ ಜಟಾಪಟಿ ಗಜಕಾಳಗದಂತಿರುತ್ತದೆ. ಆಕಾಶ ನೋಡುವುದಕ್ಕೇಕೆ ನೂಕುನುಗ್ಗಲು? ಮೊದಲು ಬಂದವರಿಗೆ ಮೊದಲ ಆದ್ಯತೆಯ ನಿಯಮದಂತೆ ಪಾಸುರಹಿತವಾಗಿ ಸಾರ್ವಜನಿಕ ದಸರಾ ಮಾಡಿದರೆ ಒಳಿತಲ್ಲವೆ? ದಸರಾ ಹಬ್ಬದಲ್ಲಿ ಯಾವಾಗಲೂ ಕಪ್ಪು ಚುಕ್ಕೆಯಾಗಿ ಕಾಡುವ ಪ್ರವೇಶ ಪಾಸುಗಳನ್ನು ಕೈಬಿಡಬಾರದೇಕೆ? ಜಿಲ್ಲೆಯ ಸಂಸದರು, ಶಾಸಕರು ಮತ್ತು ನಗರಪಾಲಿಕೆ ಸದಸ್ಯರನ್ನು ಹೊರತುಪಡಿಸಿ ಎಲ್ಲರೂ ಒಂದೇ ಎಂದು ಪರಿಗಣಿಸಿ, ಇದರಿಂದ ಸ್ವಪಕ್ಷೀಯರಿಂದಲೇ ಉದ್ಭವಿಸುವ ಪ್ರತಿಭಟನೆಗಳಿಗೆ ಆಸ್ಪದ ಇರುವುದಿಲ್ಲ. ಜನಪ್ರತಿನಿಧಿಗಳು ಭಿನ್ನಾಭಿಪ್ರಾಯ ಇಲ್ಲದೆ ಸ್ವಚ್ಛ ಮನಸ್ಸಿನಿಂದ ಭಾಗವಹಿಸಿ ನಿರಾತಂಕವಾಗಿ ದಸರಾ ನಡೆಯುವಂತೆ ಕಟ್ಟುನಿಟ್ಟಿನ ನಿಯಮ ಜಾರಿಯಾಗಲಿ.

–ಮಿರ್ಲೆ ಚಂದ್ರಶೇಖರ, ಮೈಸೂರು.

ರಸ್ತೆ ಒತ್ತುವರಿ ಸರಿಯೇ?

ಮಾನ್ಯರೆ,



ಮೈಸೂರು ನಗರ ಇತ್ತೀಚಿನ ದಿನಗಳಲ್ಲಿ ವ್ಯಾಪಕ ರೀತಿ ಬೆಳೆಯುತ್ತಿದೆ. ಹೊಸ ಹೊಸ ಬಡಾವಣೆಗಳು ನಗರದ ಎಷ್ಟೋ ಮಂದಿ ಮನೆ ಕಟ್ಟುವವರ ಕನಸನ್ನು ಸಾಕಾರಗೊಳಿಸುತ್ತಿವೆ ನಿಜ. ಇದು ಒಂದೆಡೆಯಿಂದ ಆರೋಗ್ಯಕರ ಹಾಗೂ ಮೈಸೂರಿನ ಪ್ರಾಮುಖ್ಯತೆಯನ್ನು ಇಮ್ಮಡಿಗೊಳಿಸುತ್ತಿದೆ.

ಈ ಎಲ್ಲಾ ಸಕರಾತ್ಮಕ ಅಂಶಗಳ ಜೊತೆ ಜೊತೆಗೆ ಕೆಲವು ಬಡಾವಣೆಗಳಲ್ಲಿ ತಮ್ಮ ಮನೆಗೆ ಅನುಕೂಲವಾಗುವಂತಹ ಪರಿಸರದ ವಾತಾವರಣ ಸೃಷ್ಟಿಸುವ ಭರದಲ್ಲಿ ಮೂವತ್ತು (30) ಅಡಿ ರಸ್ತೆಯನ್ನು ನುಂಗಿ 17–18 ಅಡಿ ರಸ್ತೆಯನ್ನಾಗಿ ಮಾರ್ಪಡಿಸುವ ಶ್ರೀಸಾಮಾನ್ಯ ನಾಗರಿಕ ವಾಹನಗಳ ಸುಲಭ ಸಂಚಾರಕ್ಕೆ ತಡೆ ಒಡ್ಡುತ್ತಿರುವುದು ಅಪೇಕ್ಷಣೀಯ ಅಲ್ಲ. ಅದು ಸಣ್ಣ ಸಣ್ಣ ರಸ್ತೆಯಲ್ಲಿ ವಾಹನಗಳು ಜಾಮ್ ಆಗಿ ತಿರುಗಿಸಲು ಆಗದೆ ಒದ್ದಾಟದ ಜೊತೆಗೆ ಕಿರಿಕಿರಿಯೂ ಆಗಿದೆ. ಇದು ಆತಂಕಕಾರಿಯೂ ಹೌದು. (ಈ ಪತ್ರದ ಜೊತೆಗೆ ಫೋಟೋ ಗಳನ್ನೂ ಸಾಕ್ಷಿಗಾಗಿ ಲಗತ್ತಿಸಲಾಗಿದೆ.). ಇಂತಹ ಬೇನಾಮಿ ಬೇಲಿಗೆ ನಗರಪಾಲಿಕೆ, ಮೂಡಾ ತಾವೇ ಮುಂದೆ ನಿಂತು ಮುಕ್ತಿ ಕೊಡಿಸಬೇಕಾಗಿದೆ.

ಹಾಗೆಯೇ ಎಷ್ಟೋ ಬಡಾವಣೆಯಲ್ಲಿನ ಇಕ್ಕೆಲ ರಸ್ತೆಯ ನಡುವೆ ನೆಟ್ಟಿರುವ ಗಿಡಗಳಿಗೆ ಬೇಲಿ ಹಾಕಿಕೊಂಡು ತಮಗೆ ಬೇಕಾದ ಹೂವು, ಹಣ್ಣಿನ ಗಿಡ ನೆಟ್ಟಿದ್ದಾರೆ ಕೆಲವು ಪರಿಸರ ಪ್ರೇಮಿ. ಇದು ಸರಿಯಲ್ಲ. ದಾರಿಯಲ್ಲಿನ ಸುಲಲಿತ ಓಡಾಟಕ್ಕೆ ಅನುವು ಮಾಡುವಲ್ಲಿ ಜವಾಬ್ದಾರಿಯುತ ಪಾಲಿಕೆ ಅಧಿಕಾರಿಗಳು, ಮೂಡಾ ಅಧಿಕಾರಿಗಳು ಮುಂದಾಗಬೇಕು ಎಂಬುದು ನಮ್ಮ ಪ್ರಾರ್ಥನೆ

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಸಮಾಜಮುಖಿ



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಮರೆಯಾಗುತ್ತಿರುವ ಭಾರತದ ಅರಣ್ಯಗಳು

ಪ್ರಪಂಚದಲ್ಲಿ ಅತೀ ಹೆಚ್ಚು ಅರಣ್ಯ ಭೂಮಿಯನ್ನು ಹೊಂದಿರುವ ಹತ್ತು ದೇಶಗಳ ಸಾಲಿನಲ್ಲಿ ಭಾರತವೂ ಇದೆ. ಲಭ್ಯ ಮಾಹಿತಿಯ ಅನ್ವಯ ಜಾಗತಿಕ ಜೀವವೈವಿಧ್ಯದ ಶೇಕಡಾ ಎಂಟರಷ್ಟು ನಮ್ಮ ಅರಣ್ಯಗಳಲ್ಲಿದ್ದು, 47,000 ಸಸ್ಯ ಬಗೆಗಳೂ 89,000 ಪ್ರಾಣಿ ಸಂಕುಲಗಳೂ ಇಲ್ಲಿರುವ ಹೆಗ್ಗಳಿಕೆ ನಮ್ಮದು. ಆದರೆ ಕಾಲ ಸರಿದಂತೆ ನಮ್ಮ ಅರಣ್ಯ ಪ್ರದೇಶ ಸಂಕುಚಿತವಾಗುತ್ತಿದೆ, ಕಾಡು ಮಾಯವಾಗುತ್ತಿದೆ ಎಂಬ ಆಘಾತಕಾರಿ ಸುದ್ದಿ ಅಧ್ಯಯನಗಳಿಂದ ಹೊರ ಬರುತ್ತಿದೆ. ಹಾಗಾದರೆ ಏನಾಗುತ್ತಿವೆ ನಮ್ಮ ಅರಣ್ಯಗಳು? ಅಧಿಕೃತ ದಾಖಲೆಗಳಲ್ಲಿ ಉಲ್ಲೇಖಿಸಿರುವ ಅರಣ್ಯ ಭೂಮಿಯ ಅಳತೆಗೂ ವಾಸ್ತವದಲ್ಲಿ ಇರುವ ಅರಣ್ಯ ಪ್ರದೇಶಕ್ಕೂ ನಡುವೆ ಅಂತರವಿದೆ. ಭಾರತದಲ್ಲಿ 77.53 ಮಿಲಿಯನ್ ಹೆಕ್ಟೇರ್ ಅರಣ್ಯ ಪ್ರದೇಶವಿದೆ ಎಂದು ದಾಖಲಾಗಿದ್ದರೂ ವಾಸ್ತವದಲ್ಲಿ ಅದರ ವಿಸ್ತೀರ್ಣ 51.66 ಮಿಲಿಯನ್ ಹೆಕ್ಟೇರ್ ಮಾತ್ರ. ಶೇಕಡಾ 34ರಷ್ಟು ಅರಣ್ಯ ಪ್ರದೇಶ ಕಂಡು ಬರುತ್ತಿಲ್ಲ ಎನ್ನುವುದು ಒಂದು ಅಂದಾಜು. ಪ್ರತಿ ವರ್ಷವೂ ಶೇಕಡಾ 2.7ರಷ್ಟು ಅರಣ್ಯ ಕುಗ್ಗುತ್ತಿದೆ.

ಪ್ರತಿ ಎರಡು ವರ್ಷಗಳಿಗೊಮ್ಮೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ಪ್ರಕಟವಾಗುವ ಇಂಡಿಯಾಸ್ ಸ್ಟೇಟ್ ಆಫ್ ಫಾರೆಸ್ಟ್ಸ್ ಎಂಬ ವರದಿಯೇನೋ ಕಳೆದ ಎರಡು ವರ್ಷಗಳಲ್ಲಿ ಅರಣ್ಯ ಪ್ರದೇಶ 2.261 ಚದರ ಕಿಲೋಮೀಟರುಗಳಷ್ಟು ಹೆಚ್ಚಿದೆ ಎಂದು ಹೇಳಿದ್ದರೂ ಇದೇ ಅವಧಿಯಲ್ಲಿ ಭಾರತದ ಅರಣ್ಯ ಮೇಲಾವರಣ ಶೇಕಡ 0.2ರಷ್ಟು ಮಾತ್ರ ಹೆಚ್ಚಿದೆ ಎಂದು ಮತ್ತೊಂದು ವರದಿ ತಿಳಿಸಿದೆ.



ಭಾರತದ ದಟ್ಟ ಅರಣ್ಯ ಪ್ರದೇಶಗಳು ಎಂದು ಗುರುತಿಸಲಾಗಿರುವ ಪ್ರದೇಶ 30 ವರ್ಷಗಳ ಹಿಂದೆ ಇದ್ದದ್ದಕಿಂತ ಕಾಲು ಭಾಗವೂ ಇಲ್ಲ. ಭಾರತದ ಕೆಲ ರಾಜ್ಯಗಳಲ್ಲಿ ಅರಣ್ಯ ಪ್ರದೇಶ ತ್ವರಿತವಾಗಿ ಇಳಿಮುಖವಾಗುತ್ತಿದೆ, ಹೆಚ್ಚು-ಕಡಿಮೆ ಅರ್ಧದಷ್ಟು ಅರಣ್ಯ ಪ್ರದೇಶದಲ್ಲಿ ಕಾಡ್ಗಿಚ್ಚು ಹರಡುವ ಸಾಧ್ಯತೆ ಇದೆ, ಶೇಕಡಾ 65ರಷ್ಟು ಅರಣ್ಯ ಈ ದಶಕ ಕೊನೆಗೊಳ್ಳುವ ವೇಳೆಗೆ ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ಎದುರಿಸುತ್ತದೆ ಹಾಗೂ ಇಂಗಾಲದ ಸಂಗ್ರಹ ಕ್ರಮೇಣ ಹೆಚ್ಚಾಗುತ್ತಿದೆ ಎಂದು ಸ್ಟೇಟ್ ಆಫ್ ಫಾರೆಸ್ಟ್ಸ್ ವರದಿಯೇ ಒಪ್ಪಿಕೊಳ್ಳುತ್ತಿದೆ. ಕಳೆದು ಹೋಗುತ್ತಿರುವ ಅರಣ್ಯ ಸಂಪತ್ತನ್ನು ಮರು ಪಡೆಯುವುದು ಮತ್ತು ಈಗ ಇರುವುದನ್ನು ರಕ್ಷಿಸುವುದು ನಮ್ಮ ಮುಂದಿರುವ ಬಹು ದೊಡ್ಡ ಸವಾಲುಗಳು.

ಈ ವರದಿಯಲ್ಲಿ ಅನೇಕ ವೈರುಧ್ಯಗಳನ್ನು ನಾವು ಕಾಣಬಹುದು. ಉದಾಹರಣೆಗೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿಯೇ ಅರಣ್ಯ ಮೇಲಾವರಣ ಕಳೆದ ಹತ್ತು ವರ್ಷಗಳಲ್ಲಿ 22.6 ಚದರ ಕಿಲೋಮೀಟರುಗಳಷ್ಟು ಕಡಿಮೆಯಾಗಿದೆಯಂತೆ. ಇದಕ್ಕೆ ಕಾರಣಗಳು ಏನು ಎಂಬ ಗಂಭೀರ ಪ್ರಶ್ನೆಯನ್ನು ಎತ್ತ ಬೇಕಾಗುತ್ತದೆ. ಹುಲಿ ಸಂರಕ್ಷಿತ ಪ್ರದೇಶಗಳು ಅತ್ಯಂತ ಹೆಚ್ಚು ಭದ್ರತೆ ಇರುವ ಸ್ಥಳಗಳು. ಇಲ್ಲಿ ಮಾನವರು, ವಾಹನಗಳು ಹಾಗೂ ಜಾನುವಾರುಗಳ ಸಂಚಾರದ ಮೇಲೆ ಕಠಿಣ ನಿರ್ಬಂಧಗಳು ಇದ್ದರೂ ಹೇಗೆ ಅರಣ್ಯ ನಶಿಸುತ್ತಿದೆ? ಅರಣ್ಯ ಇಲಾಖೆಯ ಸುಪರ್ದಿಯಲ್ಲಿ ಇರುವ ಕಾಡುಗಳಲ್ಲೇ ಅತೀ ಹೆಚ್ಚು ಅರಣ್ಯ ಪ್ರದೇಶಗಳು ಕಾಣೆಯಾಗುತ್ತಿವೆ ಎಂದು ಅರ್ಥೈಸಬೇಕಾಗುತ್ತದೆಯಲ್ಲವೇ?

ನಮ್ಮ ದೇಶದಲ್ಲಿ ಒಂದು ಪ್ರದೇಶವನ್ನು ಅರಣ್ಯ ಭೂಮಿ ಎಂದು ಗುರುತಿಸುವುದು ಹೇಗೆ? ಶೇಕಡಾ 10ರಷ್ಟು ಮರಗಳ ಮೇಲಾವರಣ ಸಾಂದ್ರತೆ ಇರುವ ಒಂದಕ್ಕಿಂತ ಹೆಚ್ಚು ಹೆಕ್ಟೇರ್ ಭೂ ಪ್ರದೇಶವನ್ನು ಅರಣ್ಯ ಎಂದು ಗುರುತಿಸಲಾಗುತ್ತದೆ. 'ಅರಣ್ಯ ಪ್ರದೇಶ' ಎನ್ನುವ ಪದವನ್ನು ಸಾಮಾನ್ಯವಾಗಿ ಸರ್ಕಾರದ ದಾಖಲೆಗಳಲ್ಲಿ ನಮೂದಿತವಾಗಿರುವ ಭೂಕ್ಷೇತ್ರವನ್ನು ಸೂಚಿಸಲು ಬಳಸಿದರೆ, 'ಅರಣ್ಯ ಹೊದಿಕೆ' ಅಥವಾ 'ಅರಣ್ಯ ಮೇಲಾವರಣ' ಎಂಬ ಪದಗಳನ್ನು ಅರಣ್ಯ ಲಕ್ಷಣಗಳನ್ನು ಹೊಂದಿರುವ ಎಲ್ಲ ಪ್ರದೇಶಗಳಿಗೆ ಅನ್ವಯಿಸುವಂತೆ ಬಳಸಲಾಗುತ್ತದೆ. ಎಲ್ಲಾ ಅರಣ್ಯ ಭೂಮಿಯೂ ಸರ್ಕಾರದಿಂದ ದಾಖಲಾದ ಅರಣ್ಯ ಪ್ರದೇಶದ ಒಳಗೆ ಬರುವುದಿಲ್ಲ. ನೆಡುತೋಪುಗಳಲ್ಲಿ, ಸಂಸ್ಥೆಗಳು ನಿರ್ವಹಿಸುವ ತೋಟಗಳಲ್ಲಿ ಮತ್ತು ಕೃಷಿ ಭೂಮಿಗಳಲ್ಲಿ ನೆಟ್ಟಿರುವ ಮರಗಳ ದಟ್ಟಣೆ, ಅರಣ್ಯ ಮೇಲಾವರಣ ಹೆಚ್ಚಿರುವುದಕ್ಕೆ ಕಾರಣವಾಗಿದೆ ಎಂಬುದು ಬಹು ಮುಖ್ಯವಾದ ವಿಚಾರ.

ಇಂಡಿಯಾಸ್ ಸ್ಟೇಟ್ ಆಫ್ ಫಾರೆಸ್ಟ್ಸ್ ವರದಿಯೇನೋ ದೇಶದಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿ ಮತ್ತು ಮರಗಳ ಮೇಲಾವರಣ ಸಾಂದ್ರತೆಗಳೆರಡೂ ಹೆಚ್ಚುತ್ತಿವೆ ಎಂದು ಹೇಳಿದೆ. ಅರಣ್ಯ ಹೊದಿಕೆಯ ಉದ್ದಗಲ ಅಥವಾ ಸಾಂದ್ರತೆಯನ್ನು ಸ್ಯಾಟಲೈಟ್ ತಂತ್ರಜ್ಞಾನವನ್ನು ಬಳಸಿ ಮೇಲಿನಿಂದ ಅಳೆಯುವುದರಿಂದ ಅದು ಹೆಚ್ಚುತ್ತಿರುವಂತೆ ಕಾಣುವುದು ಸಹಜವೇ. ಇದರಲ್ಲಿ ಖಾಸಗಿ ಒಡೆತನದಲ್ಲಿರುವ ಭೂಪ್ರದೇಶಗಳೂ ಸೇರಿದ್ದು, ಅದು ಇರುವುದು ನಿಯಂತ್ರಿತ ಅರಣ್ಯದೊಳಗಲ್ಲ, ಅದರ ಹೊರಗೆ ಎಂಬುದು ಗಮನಾರ್ಹವಾದ ವಿಷಯ. ದೇಶದ ನಾನಾ ಭಾಗಗಳಲ್ಲಿ ಸಮೃದ್ಧ ಅರಣ್ಯ ಪ್ರದೇಶವಿರುವುದು ಸರ್ಕಾರಿ ಸ್ವಾಮ್ಯದಲ್ಲಲ್ಲ ಎನ್ನುವ ಅಂಶದತ್ತ ಗಮನಹರಿಸುವ ಅಗತ್ಯವಿದೆ. ಹಾಗೆಯೇ ದಾಖಲಾಗಿರುವ ಅರಣ್ಯ ಪ್ರದೇಶಕ್ಕಿಂತ ಹೊರಗಿರುವ ಅನೇಕ ಕ್ಷೇತ್ರಗಳಲ್ಲಿ ಅರಣ್ಯ ಮೇಲಾವರಣ ಸಾಂದ್ರತೆ ಏಕೆ ಹೆಚ್ಚಾಗಿದೆ? ಇದರಲ್ಲಿರುವ ಜೀವವೈವಿಧ್ಯ ವೇನು? ಅದರ ನಿರ್ವಹಣೆಯ ಜವಾಬ್ದಾರಿ ಹೊತ್ತಿರುವವರು ಯಾರು? ಈ ಭೂಮಿಯಲ್ಲಿರುವ ಸಸ್ಯ ಮತ್ತು ಪ್ರಾಣಿ ಸಂಪತ್ತಿನ ಬಳಕೆ ಹಾಗೂ ಸಂರಕ್ಷಣೆ ಹೇಗೆ ನಡೆಯುತ್ತಿದೆ? ಎಂಬ ಪ್ರಶ್ನೆಗಳಿಗೂ ಉತ್ತರಗಳನ್ನು ಹುಡುಕುವುದು ಬಹು ಮುಖ್ಯ.

ಭಾರತದ ಅರಣ್ಯ ಪ್ರದೇಶಗಳು ಏಕಪ್ರಕಾರವಾಗಿಲ್ಲ. ಅವುಗಳ ಸಾಂದ್ರತೆ, ಅವುಗಳ ವ್ಯಾಪ್ತಿಯಲ್ಲಿ ಕೈಗೊಳ್ಳಬಹುದಾದ ಮತ್ತು ನಿಷೇಧಿತವಾಗಿರುವ ಮಾನವ ಚಟುವಟಿಕೆಗಳು, ಅವುಗಳ ಪರಿಧಿಯೊಳಗೆ ಅಥವಾ ಗಡಿಗಳಲ್ಲಿ ವಾಸವಾಗಿರುವ ಜನಸಮುದಾಯಗಳಿಗಿರುವ ಅರಣ್ಯ ಬಳಕೆಯ ಹಕ್ಕುಗಳು ಮತ್ತು ಅದು ದಾಖಲಿತ ಅರಣ್ಯವೋ ಅಥವಾ ಖಾಸಗಿ ಒಡೆತನದಲ್ಲಿರುವ ಪ್ರದೇಶವೋ ಎಂಬ ನಾಲ್ಕು ಪ್ರಮುಖ ಅಂಶಗಳ ಆಧಾರದ ಮೇಲೆ ಅರಣ್ಯ ಪ್ರದೇಶಗಳನ್ನು ವರ್ಗೀಕರಿಸಲಾಗುತ್ತದೆ. ಸಾಂದ್ರತೆಯ ಆಧಾರದ ಮೇಲೆ ಅರಣ್ಯ ಪ್ರದೇಶಗಳನ್ನು ಅತ್ಯಂತ ದಟ್ಟ ಅರಣ್ಯ, ಮಧ್ಯ ಮಟ್ಟದ ದಟ್ಟತೆ ಇರುವ ಅರಣ್ಯ ಮತ್ತು ತೆರೆದ ಅರಣ್ಯ ಎಂಬ ಮೂರು ಭಾಗಗಳಾಗಿ ವಿಂಗಡಿಸಲಾಗುತ್ತದೆ. ಇವುಗಳು ಆವರಿಸಿಕೊಂಡಿರುವ ಭೂಪ್ರದೇಶ ಅನುಕ್ರಮವಾಗಿ 3, 60 ಮತ್ತು 30.71 ಮಿಲಿಯನ್ ಹೆಕ್ಟೇರು ಇದೆ. ಅರಣ್ಯ ಬಳಕೆಯ ಹಕ್ಕುಗಳು ಮತ್ತು ಆಯಾ ಅರಣ್ಯ ಭಾಗಗಳಲ್ಲಿ ಕೈಗೊಳ್ಳಬಹುದಾದ ಮತ್ತು ನಿಷೇಧಿಸಲಾಗಿರುವ ಚಟುವಟಿಕೆಗಳ ಆಧಾರದ ಮೇಲೆ ಅರಣ್ಯಗಳನ್ನು 'ಕಾಯ್ದಿರಿಸಿದ ಅರಣ್ಯಗಳು' ಮತ್ತು 'ಸಂರಕ್ಷಿತ ಅರಣ್ಯಗಳು' ಎಂದು ವಿಭಜಿಸಲಾಗಿದೆ. ಕಾಯ್ದಿರಿಸಿದ ಅರಣ್ಯಗಳಲ್ಲಿ ಬೇಟೆಯಾಡುವುದು, ದಂತ ಚೌರ್ಯದಂತಹ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗುವುದನ್ನು ನಿಷೇಧಿಸಲಾಗಿದೆ. ಸಂರಕ್ಷಿತ ಅರಣ್ಯಗಳಲ್ಲಿ ಜೀವನ ನಿರ್ವಹಣೆಗಾಗಿ ಸ್ಥಳೀಯ ಜನಸಮುದಾಯಗಳು ನಿಯಮಿತ ರೀತಿಯಲ್ಲಿ ಅರಣ್ಯ ಸಂಪತ್ತನ್ನು ಉಪಯೋಗಿಸಬಹುದು. ನಮ್ಮ ದೇಶದ ಅರಣ್ಯ ಪ್ರದೇಶಗಳಲ್ಲಿ ಅರ್ಧಕ್ಕೂ ಹೆಚ್ಚು ಭಾಗವನ್ನು ಕಾಯ್ದಿರಿಸಿದ ಅರಣ್ಯವೆಂದೂ ಸುಮಾರು ಮೂರನೇ ಒಂದು ಭಾಗವನ್ನು ಸಂರಕ್ಷಿತ ಅರಣ್ಯವೆಂದೂ ಘೋಷಿಸಲಾಗಿದೆ. ಇನ್ನುಳಿದ ಅರಣ್ಯ ಭಾಗ ಎಲ್ಲಿದೆ, ಯಾವ ಸ್ಥಿತಿಯಲ್ಲಿದೆ ಎಂದು ಅರಣ್ಯಾಸಕ್ತರು ಕೇಳುತ್ತಿದ್ದಾರೆ. ಕಳೆದ ಏಳು ವರ್ಷಗಳ ಹಿಂದೆ ಬಂದ ವರದಿಯ ಪ್ರಕಾರ ದಾಖಲಾಗಿರುವ, ಅರಣ್ಯ ಎಂದರೆ ಇಲಾಖೆಯ ಸ್ವಾಮ್ಯದಲ್ಲಿರುವ ಅರಣ್ಯ ಪ್ರದೇಶ 51 ಮಿಲಿಯನ್ ಹೆಕ್ಟೇರ್ ಇದ್ದು, 20 ಮಿಲಿಯನ್ ಹೆಕ್ಟೇರ್ ಪ್ರದೇಶ ಅರಣ್ಯ ಇಲಾಖೆಯ ನಿಯಂತ್ರಣದಲ್ಲಿರಲಿಲ್ಲ. ಈ ಪ್ರದೇಶ ಖಾಸಗಿ ಒಡೆತನದಲ್ಲಿ ಇತ್ತು ಎನ್ನುವುದಾದರೆ ಇನ್ನುಳಿದ 30 ಮಿಲಿಯನ್ ಹೆಕ್ಟೇರ್ ಎಲ್ಲಿದೆ? ಬಹು ಕಾಲದಿಂದಲೂ ಈ ಪ್ರದೇಶ 'ಮರೆಯಾಗಿರುವ ಅರಣ್ಯ' ಎಂದೇ ಬಿಂಬಿತವಾಗುತ್ತಿದೆ!

ಭಾರತದ ದಟ್ಟ ಅರಣ್ಯ ಪ್ರದೇಶಗಳು ಎಂದು ಗುರುತಿಸಲಾಗಿರುವ ಪ್ರದೇಶ 30 ವರ್ಷಗಳ ಹಿಂದೆ ಇದ್ದದ್ದಕಿಂತ ಕಾಲು ಭಾಗವೂ ಇಲ್ಲ. ಭಾರತದ ಕೆಲ ರಾಜ್ಯಗಳಲ್ಲಿ ಅರಣ್ಯ ಪ್ರದೇಶ ತ್ವರಿತವಾಗಿ ಇಳಿಮುಖವಾಗುತ್ತಿದೆ, ಹೆಚ್ಚು–ಕಡಿಮೆ ಅರ್ಧದಷ್ಟು ಅರಣ್ಯ ಪ್ರದೇಶದಲ್ಲಿ ಕಾಡ್ಗಿಚ್ಚು ಹರಡುವ ಸಾಧ್ಯತೆ ಇದೆ, ಶೇಕಡಾ 65 ರಷ್ಟು ಅರಣ್ಯ ಪ್ರದೇಶ ಈ ದಶಕ ಕೊನೆಗೊಳ್ಳುವ ವೇಳೆಗೆ ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ಎದುರಿಸುತ್ತದೆ ಹಾಗೂ ಇಂಗಾಲದ ಸಂಗ್ರಹ ಕ್ರಮೇಣ ಹೆಚ್ಚಾಗುತ್ತಿದೆ ಎಂದು ಸ್ಟೇಟ್ ಆಫ್ ಫಾರೆಸ್ಟ್ಸ್ ವರದಿಯೇ ಒಪ್ಪಿಕೊಳ್ಳುತ್ತಿದೆ. ಕಳೆದು ಹೋಗುತ್ತಿರುವ ಅರಣ್ಯ ಸಂಪತ್ತನ್ನು ಮರು ಪಡೆಯುವುದು ಮತ್ತು ಈಗ ಇರುವುದನ್ನು ರಕ್ಷಿಸುವುದು ನಮ್ಮ ಮುಂದಿರುವ ಬಹು ದೊಡ್ಡ ಸವಾಲುಗಳು .

ಗುಣಮಟ್ಟದ ಅರಣ್ಯ ರಕ್ಷಣೆಯಾಗಬೇಕಾದರೆ ಜನರ ಭಾಗವಹಿಸುವಿಕೆ ಅತ್ಯಗತ್ಯ. ಹಾಗೆ ನೋಡಿದರೆ ಅರಣ್ಯ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವುದೇ ಜನರು ತೋರುತ್ತಿರುವ ಆಸ್ಥೆಯಿಂದ. ಹಾಗಿದ್ದೂ ದೇಶದ ಅನೇಕ ಭಾಗಗಳಲ್ಲಿ ಅವರನ್ನು ಯಾವುದೇ ಪರ್ಯಾಯ ಜೀವನ ನಿರ್ವಹಣಾ ಆಯ್ಕೆಗಳಿಲ್ಲದೆ ಒಕ್ಕಲೆಬ್ಬಿಸಲಾಗುತ್ತಿದೆ. ಭಾರತದ ಅರಣ್ಯ ಕಾಯಿದೆ ಅವರಿಗೆ ಕೆಲ ಅರಣ್ಯ ಉತ್ಪನ್ನಗಳನ್ನು ಉಪಯೋಗಿಸುವ ಹಕ್ಕನ್ನು ನೀಡಿದ್ದರೂ ಅದನ್ನು ಅನುಭವಿಸಲು ಅವರಿಗೆ ಅನುಮತಿಯನ್ನು ನಿರಾಕರಿಸಲಾಗುತ್ತಿದೆ. ಇದಕ್ಕೆ ಅರಣ್ಯ ಪ್ರದೇಶಗಳಲ್ಲಿ ಬಹು ಸಮೃದ್ಧವಾಗಿ ಬೆಳೆಯುತ್ತಿರುವ ಬಿದಿರೇ ಸಾಕ್ಷಿ ಇದನ್ನು ಹುಲ್ಲು ಎಂದು ಪರಿಗಣಿಸಿ ಭಾರತದ ಅರಣ್ಯ ಕಾಯಿದೆಯ ವ್ಯಾಪ್ತಿಯಿಂದ ಹೊರ ತೆಗೆದಿದ್ದರೂ ಬಿದಿರು ಬೆಳೆಗಾರರಿಗೆ ಅದನ್ನು ಹೊರ ಸಾಗಿಸಲಾಗಲಿ, ಮಾರಾಟ ಮಾಡಲಾಗಲಿ ಅವಕಾಶವಿಲ್ಲ. ಅದೇ ಗಣಿಗಾರಿಕೆ, ನಗರ ಕೇಂದ್ರಿತ ಅಭಿವೃದ್ಧಿ ಯೋಜನೆಗಳು, ಅರಣ್ಯ ಒತ್ತುವರಿ ಮಾಡಿ ರೆಸಾರ್ಟುಗಳ ನಿರ್ಮಾಣ–ಇವುಗಳಿಗೆಲ್ಲ ತಡೆ ಯಾಕಿಲ್ಲ? ಎಲ್ಲಿಯವರೆಗೂ ಅರಣ್ಯಾವಲಂಬಿ ಸಮುದಾಯಗಳನ್ನು ಒಳಗೊಳ್ಳದ, ಅವರ ಜೀವನಾನುಭವ ಹಾಗೂ ಸ್ಥಳೀಯ ಜ್ಞಾನವನ್ನು ಬಳಸಿಕೊಳ್ಳದ ಕಾರ್ಯಕ್ರಮಗಳು ನಡೆಯುತ್ತಾ ಹೋಗುವುವೋ ಅಲ್ಲಿಯವರೆಗೂ ಅರಣ್ಯ ಪ್ರದೇಶಗಳು ಖಾಲಿಯಾಗುತ್ತಲೇ ಹೋಗುತ್ತವೆ.

ಇಂದು ವಿಚಾರಣೆಗೆ ಆಗಮಿಸುವಂತೆ ಡಿಕೆಶಿ ಬ್ರದರ್ಸ್‌ಗೆ ಇಡಿ ಸಮನ್ಸ್

ಬೆಂಗಳೂರು, ಅ.6(ಕೆಎಂಶಿ)–ತಮ್ಮ ಕಚೇರಿ ಮುಂದೆ ಅಕ್ಟೋಬರ್ 7ರಂದು ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯವು (ಇ ಡಿ) ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ್ ಹಾಗೂ ಅವರ ಸಹೋದರ, ಸಂಸದ ಡಿ ಕೆ ಸುರೇಶ್ ಅವರಿಗೆ ಮತ್ತೆ ಸಮನ್ಸ್ ಜಾರಿ ಮಾಡಿದೆ.



ಈ ಮೊದಲು ಸೆಪ್ಟೆಂಬರ್ 23, 2022 ರಂದು ನೋಟೀಸ್ ಜಾರಿ ಮಾಡಿ, ಅಕ್ಟೋಬರ್ 7ರಂದು ವಿಚಾರಣೆಗೆ ಬರುವಂತೆ ಇಡಿ ಸಮನ್ಸ್ ಜಾರಿ ಮಾಡಿತ್ತು. ಆದರೆ ಭಾರತ್ ಜೋಡೋ ಪಾದಯಾತ್ರೆ ಹಿನ್ನೆಲೆಯಲ್ಲಿ ಕಾಲಾವಕಾಶ ನೀಡುವಂತೆ ಶಿವಕುಮಾರ್ ಹಾಗೂ ಸುರೇಶ್ ಪತ್ರ ಬರೆದು ಕೋರಿದ್ದರು. ಆದರೆ ಅದಕ್ಕೆ ನಿರಾಕರಿಸಿರುವ ಇಡಿ ನಿಗದಿತ ದಿನಾಂಕದಂದೇ ವಿಚಾರಣೆಗೆ ಹಾಜರಾಗುವಂತೆ ನಿನ್ನೆ ಸಂಜೆ ಮತ್ತೊಂದು ನೋಟಿಸ್ ಜಾರಿ ಮಾಡಿದೆ. ಪಕ್ಷದ ಮುಖಂಡರ ಜತೆ ಸಮಾಲೋಚನೆ ನಡೆಸಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಾಗಿ ಡಿಕೆ ಶಿವಕುಮಾರ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಾಗರಹೊಳೆಯಲ್ಲಿ ಗಾಯಗೊಂಡ ಆನೆ, ಅದರ ಮರಿಗೆ ಅಗತ್ಯ ನೆರವು

ರಾಹುಲ್ ಗಾಂಧಿ ಪತ್ರಕ್ಕೆ ಸಿಎಂ ಸ್ಪಂದನೆ

ಬೆಂಗಳೂರು,ಅ.6(ಕೆಎಂಶಿ)–ನಾಗರಹೊಳೆ ಅರಣ್ಯದಲ್ಲಿ ಆನೆ ಮತ್ತು ಅದರ ಮರಿಗೆ ಬಾಲ ಮತ್ತು ಸೊಂಡಿಲಲ್ಲಿ ಗಾಯವಾಗಿರುವ ಬಗ್ಗೆ ರಾಹುಲ್ ಗಾಂಧಿ ಅವರು ಪತ್ರ ಬರೆದಿದ್ದು, ಈ ಬಗ್ಗೆ ಸ್ಪಂದಿಸ ಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗರಹೊಳೆ ಅರಣ್ಯಕ್ಕೆ ರಾಹುಲ್ ಗಾಂಧಿ ಭೇಟಿ ನೀಡಿದ ಸಂದರ್ಭದಲ್ಲಿ ಇದನ್ನು ಗಮನಿಸಿದ್ದಾರೆ. ಈ ಬಗ್ಗೆ ಮಾಹಿತಿ ಪಡೆದು ಹಿರಿಯ ಅಧಿಕಾರಿಗಳ ಬಳಿ ಮಾತನಾಡಿ ಆನೆಗಳಿಗೆ ಏನೆಲ್ಲಾ ಚಿಕಿತ್ಸೆ ನೀಡಬಹುದು ಎಂದು ಪರಿಶೀಲನೆ ಮಾಡಲಾಗುವುದು. ಅವರು ಗಮನಕ್ಕೆ ತಂದಿರುವ ವಿಷಯದ ಬಗ್ಗೆ ಸ್ಪಂದಿಸಲಾಗುವುದು ಹಾಗೂ ಮಾನವೀಯ ದೃಷ್ಟಿಯಿಂದ ಅದರ ಅಗತ್ಯವೂ ಇದೆ ಎಂದರು. ಭಾರತ್ ಜೋಡೋ ಅಭಿಯಾನದಲ್ಲಿ ಸೋನಿಯಾ ಗಾಂಧಿ ಪಾಲ್ಗೊಂಡಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಸಹಜವಾಗಿ ಎಲ್ಲಾ ಪಕ್ಷದ ಮುಖ್ಯಸ್ಥರು ತಮ್ಮ ಪಕ್ಷಕ್ಕೆ ಕೆಲಸ ಮಾಡುತ್ತಾರೆ. ಸೋನಿಯಾ ಗಾಂಧಿ ಅರ್ಧ ಕಿ.ಮೀ ನಡೆದು ವಾಪಸ್ಸಾಗಿದ್ದಾರೆ. ಇದ್ಯಾವುದೂ ನಮ್ಮ ಮೇಲೆ ಪರಿಣಾಮ ಬೀರುವುದಿಲ್ಲ ಎಂದರು. ಪ್ರಿಯಾಂಕಾ ಗಾಂಧಿ ಅಭಿಯಾನದಲ್ಲಿ ಪಾಲ್ಗೊಳ್ಳುವುದಕ್ಕೂ ನಮಗೂ ಸಂಬಂಧ ಇಲ್ಲ. ಇದರಿಂದ ಯಾವ ಪರಿಣಾಮವೂ ಆಗುವುದಿಲ್ಲ ಎಂದು ತಿಳಿಸಿದರು.



ಭಾರತ್ ಜೋಡೋ ಅಭಿಯಾನಕ್ಕೂ ಮುನ್ನವೇ ತೀರ್ಮಾನಿಸಿದಂತೆ ಬಿಜೆಪಿ ಆರು ರ್‍ಯಾಲಿಗಳನ್ನು ಕೈಗೊಳ್ಳಲಿದೆ. ಈ ಮಧ್ಯೆ ಅಧಿವೇಶನ ಹಾಗೂ ದಸರಾ ಇದ್ದುದರಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ಜಂಟಿ ಪ್ರವಾಸ ಪ್ರಾರಂಭಿಸುವುದು ಸಾಧ್ಯವಾಗಲಿಲ್ಲ. ಸದ್ಯದಲ್ಲೇ ಪ್ರಾರಂಭ ಮಾಡಲಿದ್ದೇವೆ ಎಂದರು. ಮಂಡ್ಯದಲ್ಲಿ ಪೊಲೀಸ್ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲ್ಲಿ ಯಾರ ತಪ್ಪಿದೆ ಎಂದು ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ತಿಳಿಸಿದರು.

ಪ್ರಾದೇಶಿಕ ಹಂತದಲ್ಲಿ 24X7 ಸಲಹೆ ನೀಡುವ 6 ಕಮಾಂಡ್ ಸೆಂಟರ್ ಆರಂಭ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಹಿತಿ ● ಪ್ರಾಥಮಿಕ ಆರೋಗ್ಯ ಕೇಂದ್ರಗಳು ಟೆಲಿ ಮೆಡಿಸಿನ್ ಜಾಲಕ್ಕೆ ಸೇರ್ಪಡೆ

ಬೆಂಗಳೂರು, ಅ.6(ಕೆಎಂಶಿ)–ಟೆಲಿ ಮೆಡಿಸಿನ್ ಮೂಲಕ ಪ್ರಾದೇಶಿಕ ಹಂತದಲ್ಲಿ, ವೈದ್ಯರ ತಂಡವೊಂದು 24X7 ಸಲಹೆ ಸೂಚನೆಗಳನ್ನು ನೀಡುವ ಆರು ಕಮಾಂಡರ್ ಸೆಂಟರ್‌ಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಜೋಡಿಸುವ ವ್ಯವಸ್ಥೆಯನ್ನು ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಆಯೋಜಿಸಿರುವ "50 ಹಾಸಿಗೆ ಸಾಮರ್ಥ್ಯದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಉಪಕೇಂದ್ರ"ದ ಹಾಗೂ "ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಮಕ್ಕಳ ತೀವ್ರ ನಿಗಾ ಘಟಕದ ಉಪ ಕೇಂದ್ರ" ಉದ್ಘಾಟಿಸಿ ಮಾತನಾಡಿದರು.

100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸುವುದು ತಲಾ 7–8 ಲಕ್ಷ ರೂ.ಗಳ ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದೊರೆಯುವ ಸೌಲಭ್ಯಗಳನ್ನು, ಬೆಡ್‌ಗಳನ್ನು ಹೆಚ್ಚಿಸಲಾಗುವುದು. ಮೇಲ್ದರ್ಜೆಗೇರಿಸಿದ ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಮೊದಲೇ ಇದ್ದ ಸಮುದಾಯ ಆರೋಗ್ಯ ಕೇಂದ್ರಗಳನ್ನು ಟೆಲಿಮೆಡಿಸಿನ್‌ಗೆ ಜೋಡಣೆ ಮಾಡುವ ವ್ಯವಸ್ಥೆ ರೂಪಿಸಲಾಗುತ್ತಿದೆ ಎಂದರು.



ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಆಯೋಜಿಸಿರುವ 50 ಹಾಸಿಗೆ ಸಾಮರ್ಥ್ಯದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಉಪಕೇಂದ್ರದ ಹಾಗೂ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಮಕ್ಕಳ ತೀವ್ರ ನಿಗಾ ಘಟಕದ ಉಪಕೇಂದ್ರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು.

ಇದಲ್ಲದೇ ಸುಮಾರು 81 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದೆ. ಹಿರಿಯ ನಾಗರಿಕರಿಗೆ ಆರೋಗ್ಯ ತಪಾಸಣೆ ಶಿಬಿರಗಳನ್ನು ಗ್ರಾಮೀಣ ಹಾಗೂ ತಾಲೂಕು ಮಟ್ಟದಲ್ಲಿ ಹಾಗೂ ಬೆಂಗಳೂರಿನಲ್ಲಿ ವಲಯ ಮಟ್ಟದಲ್ಲಿ ಆರೋಗ್ಯ ಶಿಬಿರಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಹಿರಿಯ ನಾಗರಿಕರಿಗೆ ಕಣ್ಣಿನ ತಪಾಸಣೆ, ಅವಶ್ಯಕತೆಯಿದ್ದಲ್ಲಿ ಶಸ್ತ್ರಚಿಕಿತ್ಸೆ, ಬಡವರಿಗೆ ಉಚಿತ ಕನ್ನಡಕ ನೀಡುವ ಕಾರ್ಯಕ್ರಮ ಶೀಘ್ರದಲ್ಲಿ ಪ್ರಾರಂಭಿಸಲಾಗುವುದು. ಕಿವುಡರಿಗೆ ಕಾಕ್ಲಿಯರ್ ಇಂಪ್ಲಾಂಟ್ ವ್ಯವಸ್ಥೆಯನ್ನು ಬಡವರಿಗೆ ಉಚಿತವಾಗಿ ಪೂರೈಸಲಾಗುತ್ತಿದ್ದು, ಇದಕ್ಕಾಗಿ 500 ಕೋಟಿ ರೂ. ಮೀಸಲಿರಿಸಲಾಗಿದೆ. ಡಯಾಲಿಸಿಸ್ ಸೈಕಲ್‌ಗಳನ್ನು 30 ಸಾವಿರಗಳಿಂದ 60 ಸಾವಿರಗಳನ್ನು ಹೆಚ್ಚಿಸಲಾಗಿದೆ. ಕಿಮೋಥೆರಪಿ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಆಯುಷ್ಮಾನ್ ಕಾರ್ಡ್ ಬಳಸಲು ಸರಳ ನಿಯಮಾವಳಿಗಳನ್ನು ಶೀಘ್ರದಲ್ಲಿ ಹೊರಡಿಸಲಾಗುವುದು ಎಂದರು.

ರೈತರಿಗೆ ಆರೋಗ್ಯ ಸೌಲಭ್ಯ ನೀಡುವ 'ಯಶಸ್ವಿನಿ' ಯೋಜನೆಯನ್ನು ನವೆಂಬರ್ 1ರಂದು ಚಾಲನೆಗೊಳಿಸಲಾಗುವುದು. ಹೀಗೆ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಕಾಳಜಿ ವಹಿಸಲಾಗಿದೆ. ಪೌಷ್ಟಿಕ ಆಹಾರ ಪೂರೈಸುವ ಜೊತೆಗೆ 4000 ಅಂಗನವಾಡಿಗಳ ಸ್ಥಾಪನೆಗೆ ಕ್ರಮ ವಹಿಸಲಾಗುತ್ತಿದೆ ಎಂದರು.

ಉತ್ತಮ ಆರೋಗ್ಯಕ್ಕೆ ಸ್ವಚ್ಛತೆ ಬಹಳ ಮುಖ್ಯ. ಮುಂದಿನ ಆಗಸ್ಟ್ 15ರೊಳಗೆ ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಲಾಗುವುದು. 430 ನಮ್ಮ ಕ್ಲಿನಿಕ್‌ಗಳನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗುತ್ತಿದ್ದು, ಇದರಲ್ಲಿ 240 ಕ್ಲಿನಿಕ್‌ಗಳು ಬೆಂಗಳೂರು ನಗರದ ಪ್ರತಿಯೊಂದು ವಾರ್ಡ್‌ಗಳಲ್ಲಿ ಇರಲಿದೆ. 4 ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಬೆಂಗಳೂರಿನಲ್ಲಿ 20 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯ ಈಗಾಗಲೇ ಪ್ರಾರಂಭವಾಗಿದೆ ಎಂದರು.

ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಜಯದೇವ, ಕಿದ್ವಾಯಿ, ನಿಮಾನ್ಸ್ ಸೇರಿದಂತೆ ಪ್ರಮುಖ ಆರೋಗ್ಯ ಸಂಸ್ಥೆಗಳು ಉತ್ತಮ ಕೆಲಸವನ್ನು ಮಾಡುತ್ತಿವೆ. ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಎಂಸಿಹೆಚ್ ಆಸ್ಪತ್ರೆ ಮತ್ತು ಟ್ರಾಮಾ ಸೆಂಟರ್‌ಗಳ ಸ್ಥಾಪಿಸುವ ಯೋಜನೆಗಳ ಬಗ್ಗೆ ಪರಿಶೀಲಿಸಲಾಗುವುದು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ತೆರೆಮೇಲೂ ಜೋಡಿಯಾದ ಅರವಿಂದ್-ದಿವ್ಯಾ

ಬಿಗ್ಬಾಸ್ ಖ್ಯಾತಿಯ ಯುವಜೋಡಿ ಅರವಿಂದ್ ಕೆಪಿ ಮತ್ತು ದಿವ್ಯಾ ಉರುಡುಗ ಈಗ ತೆರೆಯ ಮೇಲೂ ಮೋಡಿ ಮಾಡಲು ಹೊರಟಿದ್ದಾರೆ. ಅರವಿಂದ್ ಕೌಶಿಕ್ ನಿರ್ದೇಶನದ 'ಅರ್ಧಂಬರ್ಧ ಪ್ರೇಮಕಥೆ' ಚಿತ್ರದಲ್ಲಿ ಬೈಕ್‌ರೇಸರ್ ಅರವಿಂದ್ ನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದ ಹೀರೋ ಇಂಟ್ರಡಕ್ಷನ್ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಪ್ರೀತಿ ಎನ್ನುವುದು ನಮ್ಮ ಕನಸುಗಳ ಜೊತೆಗೇ ಬೆಳೆಯುತ್ತೆ. ಆದರೆ ಅದೇ ಪ್ರೀತಿ ಸಂಬಂಧವಾಗಿ ಬದಲಾದಾಗ ಅದು ಉಳಿಯೋದು ಕಷ್ಟ, ಏಕೆಂದರೆ ಅದು ನಮ್ಮ ಸುತ್ತಲಿನ ಸಮಾಜದ ಚೌಕಟ್ಟಿನಲ್ಲಿ ಬದುಕಬೇಕಾಗಿರುತ್ತೆ ಎನ್ನುವ ಕಾನ್ಸೆಪ್ಟ್ ಮೇಲೆ ನಿರ್ಮಾಣವಾದ ಚಿತ್ರ 'ಅರ್ಧಂಬರ್ಧ ಪ್ರೇಮಕಥೆ'. ಈ ಸಂದರ್ಭದಲ್ಲಿ ಹಿರಿಯನಟ ದ್ವಾರಕೀಶ್, ಬಿಗ್ಬಾಸ್ ತಂಡದ ಶುಭಾ ಪುಂಜಾ, ರಾಜೀವ್, ಅರವಿಂದ್ ಕೂಡ ಹಾಜರಿದ್ದು ಗೆಳೆಯನಿಗೆ ಶುಭ ಹಾರೈಸಿದರು. ಚಿತ್ರದಲ್ಲಿ ದ್ವಾರಕೀಶ್ ಅವರ ಪುತ್ರ ಅಭಿಲಾಷ್ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, 25 ವರ್ಷಗಳ ನಂತರ ನಟನೆಗೆ ಹಿಂದಿರುಗಿದ್ದಾರೆ.

ನಿರ್ದೇಶಕ ಅರವಿಂದ್ ಕೌಶಿಕ್ ಮಾತನಾಡಿ ನಾನು ಮಾಡಿಕೊಂಡಿದ್ದ ಕಥೆಗೆ ಒಬ್ಬ ಹೊಸ ಹೀರೋ ಬೇಕಿತ್ತು. ಆತ ಜನ ಗುರುತಿಸುವಂಥ ಹೀರೋನೂ ಆಗಿರಬೇಕು ಅಂದುಕೊಂಡಾಗ ನೆನಪಿಗೆ ಬಂದದ್ದೇ ಕೆ.ಪಿ.ಅರವಿಂದ್. ಇದೊಂದು ಅಪ್ಪಟ ಪ್ರೇಮಕಥೆಯಾಗಿದ್ದು ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಅಂತಿಮ ಹಂತದಲ್ಲಿವೆ. ನವೆಂಬರ್‌ನಲ್ಲಿ ರಿಲೀಸ್ ಮಾಡೋ ಯೋಜನೆಯಿದೆ ಎಂದು ಹೇಳಿದರು.ಬಕ್ಸ್ ಮೀಡಿಯಾ, ಲೈಟ್‌ಹೌಸ್ ಮೀಡಿಯಾ ಮತ್ತು ಆರ್‌ಎಸಿ ವಿಷುವಲ್ಸ್ ನಿರ್ಮಾಣದ ಈ ಚಿತ್ರಕ್ಕೆ ಅರ್ಜುನ್ ಜನ್ಯ ಅವರ ಸಂಗೀತ, ಸೂರ್ಯ ಅವರ ಛಾಯಾಗ್ರಹಣವಿದೆ. ಆಲ್‌ಓಕೆ ಅಲೋಕ್, ಶ್ರೇಯಾ, ವೆಂಕಟ್ ಶಾಸ್ತ್ರಿ, ಪ್ರದೀಪ್ ರೋಷನ್, ಸೂರಜ್ ಹೂಗಾರ್, ಸುಜಿತ್ಶೆಟ್ಟಿ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.



ಸ್ವಾತಿಮುತ್ತಿನ ಮಳೆ ಹನಿಯಲ್ಲಿ ರಮ್ಯಾ

ಆಪಲ್‌ಬಾಕ್ಸ್ ಸ್ಟುಡಿಯೋಸ್ ಮೂಲಕ ತಾವು ನಿರ್ಮಿಸುತ್ತಿರುವ ಹೊಸ ಚಿತ್ರದ ಬಗ್ಗೆ ಮೋಹಕ ತಾರೆ ರಮ್ಯಾ ಅವರು ವಿಜಯದಶಮಿಯ ಶುಭದಿನದಂದು ಅಧಿಕೃತವಾಗಿ ಘೋಷಿಸಿದ್ದಾರೆ. 'ಸ್ವಾತಿಮುತ್ತಿನ ಮಳೆ ಹನಿಯೇ' ಹೆಸರಿನಲ್ಲಿ ಮೂಡಿಬರುತ್ತಿರುವ ಈ ಚಿತ್ರವನ್ನು ರಾಜ್ ಬಿ ಶೆಟ್ಟಿ ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದಲ್ಲಿ ರಮ್ಯಾ ಮತ್ತು ರಾಜ್ ಬಿ. ಶೆಟ್ಟಿ ಇಬ್ಬರೂ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ರಾಜ್‌ಶೆಟ್ಟಿ ಹೇಳಿದ ಕಥೆಯನ್ನು ಇಷ್ಟಪಟ್ಟು ತಾವು ಈ ಚಿತ್ರವನ್ನು ನಿರ್ಮಿಸುತ್ತಿರುವುದಾಗಿ ರಮ್ಯಾ ಹೇಳಿಕೊಂಡಿದ್ದಾರೆ. ಈಗಾಗಲೇ ಪ್ರೀ-ಪ್ರೊಡಕ್ಷನ್ ಹಂತದಲ್ಲಿರುವ ಈ ಚಿತ್ರವು ಸದ್ಯದಲ್ಲೇ ಸೆಟ್ಟೇರಲಿದೆ. ರಾಜ್‌ಶೆಟ್ಟಿ ನಿರ್ದೇಶನದ ಗರುಡ ಗಮನ ಋಷಭ ವಾಹನದಲ್ಲಿ ಛಾಯಾಗ್ರಾಹಕರಾಗಿ ಕೆಲಸ ಮಾಡಿದ್ದ ಪ್ರವೀಣ್ ಶ್ರೀಯಾನ್ ಮತ್ತು ಸಂಗೀತ ನಿರ್ದೇಶಕ ಮಿಥುನ್ ಮುಕುಂದನ್ ಇಲ್ಲೂ ಸಹ ಮುಂದುವರೆಯಲಿದ್ದಾರೆ. ಸ್ವಾತಿಮುತ್ತಿನ ಮಳೆಹನಿಯೇ ಚಿತ್ರವನ್ನು ರಮ್ಯಾ ಅವರ ಆಪಲ್ ಬಾಕ್ಸ್ ಸ್ಟುಡಿಯೋಸ್ ಮತ್ತು ಲೈಟರ್‌ಬುದ್ಧ ಫಿಲಂಸ್ ಜಂಟಿಯಾಗಿ ನಿರ್ಮಿಸುತ್ತಿವೆ. ಈ ಚಿತ್ರದ ಬಗ್ಗೆ ಇನ್ನಷ್ಟು ಮಾಹಿತಿ ಸದ್ಯದಲ್ಲೇ ಹೊರಬೀಳಲಿದೆ.





'ಶ್ರೀಮಂತ'ನ ಹಾಡು ಪಾಡು!

ರೈತ ನಮ್ಮ ದೇಶದ ಬೆನ್ನೆಲುಬು. ನಾವು ಎಷ್ಟೇ ಮುಂದುವರಿದರೂ ರೈತನ ಕೊಡುಗೆ ನಮಗೆ ಬಹಳ ಮುಖ್ಯ ಎಂಬ ಸಂದೇಶದ ಜೊತೆಗೆ ರೈತನ ಬದುಕು, ಬವಣೆಗಳೊಂದಿಗೆ ಸ್ನೇಹ, ಪ್ರೀತಿ, ಬಾಂಧವ್ಯದ ಕಥೆ ಹೇಳುವ ಚಿತ್ರ 'ಶ್ರೀಮಂತ'. ನಾರಾಯಣಪ್ಪ, ಸಂಜಯ್‌ಬಾಬು ಹಾಗೂ ಹಾಸನ್ ರಮೇಶ್ ನಿರ್ಮಾಣದ ಜೊತೆಗೆ ನಿರ್ದೇಶಿಸಿರುವ ಈ ಚಿತ್ರದ ಪೋಸ್ಟರ್ ಹಾಗೂ ಎಸ್‌ಪಿಬಿ ಅವರ ಕಂಠದಲ್ಲಿ ಮೂಡಿಬಂದಿರುವ ರೈತಗೀತೆಯ ಲಿರಿಕಲ್ ವೀಡಿಯೋ ಬಿಡುಗಡೆ ಕಾರ್ಯಕ್ರಮ ನಡೆಯಿತು. ಡಾ.ಹಂಸಲೇಖ, ಬಾಮಾ ಹರೀಶ್ ಅತಿಥಿಗಳಾಗಿ ಭಾಗವಹಿಸಿದ್ದ ಈ ಹಾಡನ್ನು ಬಿಡುಗಡೆ ಮಾಡಿದರು. ಡಾ.ಹಂಸಲೇಖ ಮಾತನಾಡಿ ಎಸ್‌ಪಿಬಿ ಅವರು 50 ವರ್ಷಗಳಲ್ಲಿ ಎಲ್ಲಾ ಭಾಷೆಯಲ್ಲೂ ಹಾಡೋ ಮೂಲಕ ತಮ್ಮದೇ ಅಭಿಮಾನಿ ಬಳಗ, ಪ್ರೀತಿ, ವಿಶ್ವಾಸ ಗಳಿಸಿದ್ದಾರೆ. ಅವರು ಹಾಡಿದ ಕೊನೆಯ ಹಾಡಿದು. ಕಥೆಗೆ ಪೂರಕವಾಗಿ ಸಂಗೀತ ನೀಡಲು ಪ್ರಯತ್ನಿಸಿದ್ದೇನೆ. ಹಾಡುಗಳು ಸೊಗಸಾಗಿ ಮೂಡಿಬಂದಿವೆ. 'ಶ್ರೀಮಂತ' ಚಿತ್ರವು ಶ್ರೀಮಂತವಾಗಿಯೇ ಬಂದಿದೆ ಎಂದು ಹೇಳಿದರು. ಬಾಲಿವುಡ್ ನಟ ಸೋನುಸೂದ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ನಾಯಕಿಯರಾಗಿ ಮುಂಬೈ ಬೆಡಗಿ ವೈಷ್ಣವಿ ಪಟುವರ್ಧನ್ ಹಾಗೂ ವೈಷ್ಣವಿ ಚಂದ್ರನ್ ಮೆನನ್ ಅಭಿನಯಿಸಿದ್ದಾರೆ. ನಿರ್ಮಾಪಕ ಹಾಗೂ ನಿರ್ದೇಶಕ ಹಾಸನ್ ರಮೇಶ್ ಮಾತನಾಡುತ್ತಾ ನಮ್ಮ ದೇಶದಲ್ಲಿ ಶೇ.80ರಷ್ಟು ಜನ ರೈತರೇ ಆಗಿದ್ದಾರೆ. ಈ ಥಾಟ್ ಇಟ್ಟುಕೊಂಡು ಮಾಡಿರುವ ಸಂಗೀತಮಯ ಚಿತ್ರವಿದು. ಚಿತ್ರದಲ್ಲಿ ಎಲ್ಲಾ ಮನರಂಜನಾತ್ಮಕ ಅಂಶಗಳೂ ಇದೆ. ನಾಯಕಿ ಹಳ್ಳಿಯಲ್ಲೂ ಗ್ಲಾಮರ್ ಆಗಿ ಕಾಣಿಸಿಕೊಂಡಿದ್ದಾರೆ. 8 ಗೀತೆಗಳ ಜೊತೆಗೆ ಒಗಟು, ಗಾದೆಗಳೂ ಚಿತ್ರದಲ್ಲಿವೆ ಎಂದು ಹೇಳಿದರು. ನಿರ್ಮಾಪಕ ಸಂಜಯ್ ಬಾಬು ಮಾತನಾಡುತ್ತಾ ಕೊರೊನಾ ನಂತರ ನಾನು ಸಿನಿಮಾ ತಂಡ ಸೇರಿಕೊಂಡೆ. ನಿರ್ದೇಶಕರ ಪರಿಶ್ರಮ ನೋಡಿ ಸಿನಿಮಾಗೆ ಬಂಡವಾಳ ಹಾಕಿದೆ ಎಂದರು. ಮತ್ತೊಬ್ಬ ನಿರ್ಮಾಪಕ ನಾರಾಯಣಪ್ಪ ಮಾತನಾಡುತ್ತ ನಾನೂ ಒಬ್ಬ ರೈತ, ನಮ್ಮ ಕಸುಬು ವ್ಯವಸಾಯ, ರೈತರ ಬಗ್ಗೆ ಕಾಳಜಿ ಇದ್ದರಿಂದಲೇ ಈ ಸಿನಿಮಾ ಮಾಡಿದ್ದೇನೆ ಎಂದು ಹೇಳಿದರು.

'ದಿಲ್ ಪಸಂದ್' ತ್ರಿಕೋನ ಪ್ರೇಮಕಥೆ


ಸುಮಂತ್‌ಕ್ರಾಂತಿ ಅವರ ನಿರ್ಮಾಣದಲ್ಲಿ ಡಾರ್ಲಿಂಗ್ ಕೃಷ್ಣ, ಮೇಘಾಶೆಟ್ಟಿ ಹಾಗೂ ನಿಶ್ವಿಕಾನಾಯ್ಡು ಅಭಿನಯದ ತ್ರಿಕೋನ ಪ್ರೇಮ ಕಥೆ ಹೊಂದಿರುವ ಚಿತ್ರ 'ದಿಲ್‌ಪಸಂದ್' ನ.11ರಂದು ಬಿಡುಗಡೆಯಾಗುತ್ತಿದ್ದು, ಇತ್ತೀಚೆಗೆ ಚಿತ್ರದ ಟೀಸರ್ ಬಿಡುಗಡೆಯಾಯಿತು. ಮಳೆ, ಧೈರ್ಯಂ ಖ್ಯಾತಿಯ ನಿರ್ದೇಶಕ ಶಿವತೇಜಸ್ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿರುವ ಈ ಚಿತ್ರ ಹನ್ನೊಂದು ತಿಂಗಳ ಹಿಂದಷ್ಟೇ ಆರಂಭವಾಗಿತ್ತು. ಚಿತ್ರ ಕುರಿತು ಮಾತನಾಡಿದ ನಿರ್ದೇಶಕ ಶಿವತೇಜಸ್, ನಮ್ಮ ಚಿತ್ರ ದಿಲ್ ಪಸಂದ್‌ನಷ್ಟೇ ಸಿಹಿಯಾಗಿದೆ. ಒಬ್ಬ ನಾಯಕ ಇಬ್ಬರು ನಾಯಕಿಯರ ನಡುವೆ ನಡೆಯುವ ಘಟನೆಗಳನ್ನಿಟ್ಟುಕೊಂಡು ಈ ಚಿತ್ರ ಮಾಡಿದ್ದೇನೆ. ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ ಡೀಸೆಂಟ್ ಆದರೆ, ಮೇಘಾ ಶೆಟ್ಟಿ ಸೈಲೆಂಟು, ನಿಶ್ವಿಕಾ ನಾಯ್ಡು ವೈಲೆಂಟು ಎಂದು ಪ್ರಮುಖ ಪಾತ್ರಗಳ ಕುರಿತು ವಿವರಿಸಿದ್ದರು. ನಾಯಕಿ ಮೇಘಾಶೆಟ್ಟಿ ಮಾತನಾಡಿ ಈ ಚಿತ್ರದಲ್ಲಿ ನನ್ನದು ಒಬ್ಬ ಮುಗ್ಧ ಹುಡುಗಿಯ ಪಾತ್ರ. ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ನೋಡಬಹುದಾದ ಕಥೆ ಈ ಚಿತ್ರದಲ್ಲಿದೆ. ಈ ಚಿತ್ರದಲ್ಲಿ ಅಭಿನಯಿಸುತ್ತಿ ರುವುದಕ್ಕೆ ತುಂಬಾ ಖುಷಿಯಾಗಿದೆ ಎಂದರು. ನಂತರ ಮಾತನಾಡಿದ ನಿಶ್ವಿಕಾ ನಾಯ್ಡು ಐಶು ನನ್ನ ಪಾತ್ರದ ಹೆಸರು. ಈ ಚಿತ್ರದಲ್ಲಿ ತುಂಬಾ ಎಮೋಷನ್ ಹುಡುಗಿಯಾಗಿ ನಟಿಸಿ ದ್ದೇನೆ. ಲವ್‌ಟ್ರ್ಯಾಕ್ ಇರುವ ಚಿತ್ರಗಳಲ್ಲಿ ಅಭಿನಯಿಸಿದ್ದೆ, ಆದರೆ ಕಂಪ್ಲೀಟ್ ಲವ್ ಸ್ಟೋರಿಯಿರುವ ಚಿತ್ರದಲ್ಲಿ ಅಭಿನಯಿಸಿರಲಿಲ್ಲ. ಇದು ನನ್ನ ಪೂರ್ಣ ಪ್ರಮಾಣದ ಪ್ರೇಮಕಥೆಯುಳ್ಳ ಮೊದಲ ಚಿತ್ರ ಎಂದು ತಿಳಿಸಿದರು. ನಾನು ಕಥೆ ಕೇಳಬೇಕಾದರೆ ಸಾಕಷ್ಟು ಖುಷಿಪಟ್ಟಿದೆ. ಎಂಜಾಯ್ ಮಾಡಿಕೊಂಡು ಡಬ್ಬಿಂಗ್ ಮಾಡಿದ್ದೇನೆ. ಉತ್ತಮ ಮನೋರಂಜನೆಯಿರುವ "ದಿಲ್‌ಪಸಂದ್" ಎಲ್ಲರಿಗೂ ಪ್ರಿಯವಾಗಲಿದೆ. ಕಾಮಿಡಿ ಜೊತೆಗೆ ತಂದೆ-ಮಗನ ಭಾವನಾತ್ಮಕ ಸನ್ನಿವೇಶಗಳು ಜನರ ಮನಸ್ಸಿಗೆ ಹತ್ತಿರವಾಗಲಿದೆ ಎಂದು ನಾಯಕ ಡಾರ್ಲಿಂಗ್ ಕೃಷ್ಣ ಹೇಳಿದ್ದಾರೆ. ನಿರ್ಮಾಪಕ ಸುಮಂತ್ ಕ್ರಾಂತಿ ಮಾತನಾಡುತ್ತ ನಿರ್ದೇಶಕರು ಕಥೆ ಹೇಳಿದ ರೀತಿಯಲ್ಲೇ ಸಿನಿಮಾ ಮಾಡಿಕೊಟ್ಟಿದ್ದಾರೆ. ಕೆಲವರು ಕಥೆ ಹೇಳುವುದೇ ಬೇರೆ. ಚಿತ್ರ ಮಾಡುವುದೇ ಬೇರೆ. ನಾನು ಇತ್ತೀಚೆಗೆ ಚಿತ್ರವನ್ನು ನೋಡಿದೆ ನಮ್ಮ 'ದಿಲ್‌ಪಸಂದ್'



ಚಿತ್ರ ಚೆನ್ನಾಗಿದೆ. ನವೆಂಬರ್ 11ಕ್ಕೆ ತೆರೆಗೆ ಬರುತ್ತಿದೆ ಎಂದು ಹೇಳಿದರು. ಕಾರ್ಯಕಾರಿ ನಿರ್ಮಾಪಕ ರಂಗಸ್ವಾಮಿ ಹಾಗೂ ಸಹ ನಿರ್ದೇಶಕ, ಮಾರ್ಕೆಟಿಂಗ್ ಹೆಡ್ ಹರೀಶ್ ದೇವಿತ್ 'ದಿಲ್ ಪಸಂದ್' ಕುರಿತು ಮಾತನಾಡಿದರು.

ಸಿನಿಪದಬಂಧ-028

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. 1992ರ ಈ ಚಿತ್ರ ವಿಷ್ಣುವರ್ಧನರ ಬಿರುದಾಯಿತು (5)
3. ರವಿಚಂದ್ರನ್ ಬಾಲನಟನಾಗಿ ನಟಿಸಿದ ಚಿತ್ರದಲ್ಲಿ ಡಾ. ರಾಜ್ ತ್ರಿಪಾತ್ರಾಭಿನಯವಿದೆ (5)
7. ಅಭಿನಯ ಚಕ್ರವರ್ತಿ ಈತ (3)
8. - - - ಬರೆದನು ಒಲವಿನ ಓಲೆ.... ಬೆಸುಗೆ ಚಿತ್ರದ ಗೀತೆ (3)
9. ಚಳಿ ಚಳಿ ತಾಳೆನು ಎಂದು ಕುಣಿದ ನಾಯಕಿ (3)
10. ಲೋಕೇಶ್-ಲಕ್ಷ್ಮೀ ಜೋಡಿಯ 1981ರ ಚಿತ್ರ (9)
13. - - - ವಾಸು, ಕನ್ನಡದ ಅಂದಿನ ಬೋಲ್ಡ್ ನಟಿ (3)
14. 2019ರ ಈ ದರ್ಶನ್ ಚಿತ್ರದಲ್ಲಿ ದೇವರಾಜ್ ನಟಿಸಿದ್ದಾರೆ (3)
15. ವಿಷ್ಣು-ಸುಹಾಸಿನಿ ಜೋಡಿಯ ಜನಪ್ರಿಯ ಚಿತ್ರ (3)
18. ಶ್ರೀನಾಥ್-ಅಂಬಿಕಾ-ಮಾಧವಿ ಅಭಿನಯದ 1982ರ ಚಿತ್ರ (5)
19. ವಿಷ್ಣು ಅಭಿನಯದ 1995 ರ ಚಿತ್ರ, ಮೋಜುಗಾರ - - - - - (5)

ಮೇಲಿನಿಂದ ಕೆಳಕ್ಕೆ

1. ರವಿಚಂದ್ರನ್-ರಾಧಾ ನಟನೆಯ 1985ರ ಚಿತ್ರ (5)
2. 2014ರ ದುನಿಯಾ ವಿಜಿ ಚಿತ್ರ (3)
4. ಪ್ರೇಮಿಗಳು ಎಂಬರ್ಥದ 1993ರ ಚಿತ್ರ (3)
5. ಎಸ್.ನಾರಾಯಣ್ ನಿರ್ದೇಶನದಲ್ಲಿ ಕೆ. ಶಿವರಾಂ-ಸುಧಾರಾಣಿ ಚಿತ್ರ (5)
6. ಲೋಕೇಶ್ ನಟಿಸಿದ ಈ ಚಿತ್ರ ಶ್ರೀ ಕೃಷ್ಣ ಆಲನಹಳ್ಳಿಯವರ ಕೃತಿ ಆಧಾರಿತ (9)
11. ಶಿವಣ್ಣ-ದರ್ಶನ್ ನಟಿಸಿದ ಈ ಚಿತ್ರದಲ್ಲಿ ಅಂಬರೀಶ್ ಕೂಡ ಇದ್ದಾರೆ (5)
12. ಯೋಗೀಶ್ ಹುಣಸೂರು ನಿರ್ದೇಶನದಲ್ಲಿ ದರ್ಶನ್-ರುಚಿತಾಪ್ರಸಾದ್ ಜೋಡಿ (5)
16. ಬೆಳದಿಂಗಳ ಬಾಲೆ ಚಿತ್ರದಲ್ಲಿ ನಾಯಕ ಅನಂತನಾಗ್ ಹೆಸರು ತಲೆಕೆಳಗಾಗಿದೆ (3)
17. ಈ ಚಿತ್ರದಲ್ಲಿ ದುನಿಯಾ ವಿಜಿ ಮತ್ತು ಡಾಲಿ ಧನಂಜಯ ನಟಿಸಿದ್ದಾರೆ (3)

ವಿಜೇತರು ಪ್ರಭಾಕರ್, ಶಿವರಾತ್ರೀಶ್ವರನಗರ, ಮೈಸೂರು

ಸಿನಿ ಪದಬಂಧ 027ರ ಸರಿ ಉತ್ತರ

ಅ	ಮ್ಮ	ನ	ಮ	ನೆ		ಹೂ	ವೊಂ	ದು	ಬೇ	ಕು
ಪ		ರ						ರ್ಗಾ		ದು
ರಿ		ಸಿಂ						ಷ್ಟ		ರೆ
ಚಿ		ಹ	ಮ್ಮೀ	ರ		ಗೌ	ತ	ಮಿ		ಮು
ತ				ಕ್ತ		ರೀ				ಖಿ
	ಸಂ	ಕ	ಷ್ಟ	ಕ	ರ	ಗ	ಣ	ಪ	ತಿ	
ಪ್ರೇ				ಣ್ಣೀ		ಣೇ				ಮಾ
ಮ		ಟ	ಗ	ರು		ಶ	ಕ್ರೋ	ಆ		ನ್ಸೂ
ದಾ		ಗಾ						ಕ್ರ		ನ್
ರಂ		ಡು						ಮ		ರಾ
ಭ	ಲೇ	ಹು	ಡು	ಗ		ಅ	ರು	ಣ	ರಾ	ಗ

'ಭಾಗ್ಯಲಕ್ಷ್ಮಿ' ಅಕ್ಕ ತಂಗಿ ಕಥೆ

ಅಕ್ಕ ತಂಗಿಯ ನಡುವಿನ ಬಾಂಧವ್ಯದ ಕಥೆ ಹೇಳುವ ಭಾಗ್ಯಲಕ್ಷ್ಮಿ ಧಾರಾವಾಹಿಯಲ್ಲಿ ನಿರೂಪಕಿ ಸುಷ್ಮಾ ಅಕ್ಕನಾಗಿ, ಮತ್ತೊಬ್ಬ ನಟಿ ಭೂಮಿಕಾ ತಂಗಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ, ಅ.10ರಿಂದ ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿರುವ ಈ ಕಥೆಯಲ್ಲಿ ಬಿಗ್‌ಬಾಸ್ ಖ್ಯಾತಿಯ ಶಮಂತ್‌ಗೌಡ(ಬ್ರೋಗೌಡ), ಸುದರ್ಶನ್, ಪದ್ಮಜಾರಾವ್, ಭೂಮಿಕ, ತಾಂಡವ ಸೂರ್ಯವಂಶಿ ಮುಂತಾದವರು ನಟಿಸಿದ್ದಾರೆ, ಮಿಲನ ಸೇರಿದಂತೆ ಸಾಕಷ್ಟು ಹಿಟ್ ಸಿನಿಮಾ, ಧಾರಾವಾಹಿಗಳನ್ನು ನಿರ್ಮಿಸಿರುವ ಜೈಮಾತಾ ಕಂಬೈನ್ಸ್ ಈ ಧಾರಾವಾಹಿಯನ್ನು ನಿರ್ಮಾಣ ಮಾಡುತ್ತಿದೆ. ಮೊನ್ನೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಇಡೀ ತಂಡ ಹಾಜರಾಗಿ ಒಂದಿಷ್ಟು ಮಾಹಿತಿಗಳನ್ನು ಹಂಚಿಕೊಂಡಿತು. ನಾಯಕಿ ಸುಷ್ಮಾ ಮಾತನಾಡುತ್ತ ಹತ್ತು ವರ್ಷಗಳ ನಂತರ ನಾನು ಮತ್ತೆ ಸೀರಿಯಲ್‌ನಲ್ಲಿ ನಟಿಸುತ್ತಿದ್ದೇನೆ. ಜೀವನದಲ್ಲಿ ಏನೇ ಬಂದರೂ ಅದನ್ನು ಖುಷಿಯಿಂದ ಸ್ವಾಗತಿಸಿ, ಸುತ್ತಮುತ್ತಲಿನವರಿಗೆ ಖುಷಿ ನೀಡುವ, ಮನೆಯ ಸಂಪೂರ್ಣ ಜವಾಬ್ದಾರಿ ಹೊತ್ತು, ಸಂಸಾರಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟಿರೋ ದಿಟ್ಟ ಹೆಣ್ಣಿನ ಪಾತ್ರ ಮಾಡಿದ್ದೇನೆ. ತನ್ನ ಪ್ರೀತಿಯ ತಂಗಿಗೆ ಒಳ್ಳೆಯ ವರನನ್ನು ನೋಡಿ ಆಕೆಗೆ ಮದುವೆ ಮಾಡಿ, ಆಕೆಯನ್ನು ಖುಷಿಯಾಗಿ ನೋಡಿಕೊಳ್ಳಬೇಕು ಎನ್ನುವುದೇ ಈ ಅಕ್ಕನ ಧ್ಯೇಯವಾಗಿರುತ್ತೆ ಎಂದು ತಮ್ಮ ಪಾತ್ರವನ್ನು ಪರಿಚಯಿಸಿಕೊಂಡರು.

ಕೇಂದ್ರದ ರೈತ ವಿರೋಧಿ ಕಾಯ್ದೆ ರೈತರ ಆತ್ಮಹತ್ಯೆಗೆ ಕಾರಣ



ಬ್ರಹ್ಮದೇವರಹಳ್ಳಿ(ನಾಗಮಂಗಲ),ಅ.6– ಕೇಂದ್ರ ಸರ್ಕಾರದ ರೈತ ವಿರೋಧಿ ಕಾಯ್ದೆಯಿಂದ ದೇಶದಲ್ಲಿ ರೈತರು ಸಾಲಬಾಧೆ ಹಾಗೂ ಬೆಳೆದ ಬೆಳೆಗೆ ಬೆಂಬಲ ಬೆಲೆ ಸಿಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಬ್ರಹ್ಮದೇವರಹಳ್ಳಿ ಗ್ರಾಮದಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ರೈತರು ಜೀವನ ನಡೆಸಲಾಗದೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರು ಮಾಡಿದ ಸಾಲಕ್ಕೆ ಗರಿಷ್ಠ 25 ಪರ್ಸೆಂಟ್‌ನಷ್ಟು ಬಡ್ಡಿ ಕಟ್ಟುತ್ತಿದ್ದಾರೆ. ರೈತರು ಸಾಲಬಾಧೆಗೆ ಸಿಲುಕಿ ಬಂಡವಾಳಶಾಹಿಗಳಿಗೆ ತಮ್ಮ ಜಮೀನುಗಳನ್ನು ಮಾರಾಟ ಮಾಡುತ್ತಿದ್ದಾರೆ. ಇದಕ್ಕೆಲ್ಲಾ ಸರ್ಕಾರವೇ ಹೊಣೆ ಎಂದು ಕಿಡಿಕಾರಿದರು.

ಸರ್ಕಾರ ದೇಶವನ್ನು ಎರಡು ಭಾಗ ಮಾಡುತ್ತಿದೆ. ಶ್ರೀಮಂತ, ಬಡವ ಎಂದು ಎರಡು ಭಾಗ ಮಾಡುತ್ತಿದ್ದು, ಬಡವರೇ ದೇಶದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಯುವಕರು ನಿರುದ್ಯೋಗದಿಂದ ಬಳಲುತ್ತಿದ್ದು, ಇದರ ಜೊತೆಗೆ ದಲಿತರನ್ನು ದಮನ ಮಾಡಲು ಸಹ ಸರ್ಕಾರ ಮುಂದಾಗಿದೆ ಎಂದು ದೂರಿದರು.

ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ 3500 ಕಿಮೀ ಪಾದಯಾತ್ರೆ ಸುಲಭವಲ್ಲ. ಪ್ರಾರಂಭದಿಂದ ಇಲ್ಲಿಯವರೆಗೆ ಉತ್ಸಾಹ ಕಡಿಮೆಯಾಗಿಲ್ಲ. ನಿಮ್ಮ ಬೆಂಬಲ ನನಗೆ ಶಕ್ತಿ ತುಂಬಿದೆ. ದೇಶದ ಜನರಲ್ಲಿ ವಿಷ ಬೀಜ ಬಿತ್ತದೇ ಶಾಂತಿಮಂತ್ರ ಬೋಧಿಸಬೇಕು. ಈ ಪಾದಯಾತ್ರೆಯಲ್ಲಿ ಜನರ ನೋವಿನ ಕೂಗು ನನಗೆ ಕೇಳುತ್ತಿದೆ ಎಂದು ಹೇಳಿದರು.

ವೇದಿಕೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್‌ಸಿಂಗ್ ಸುರ್ಜೇವಾಲಾ, ಕೆ.ಸಿ.ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್, ವಿಧಾನಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಪ್ರಿಯಾಂಕ್ ಖರ್ಗೆ, ಯು.ಟಿ.ಖಾದರ್, ಮಾಜಿ ಕೇಂದ್ರ ಸಚಿವ ಕೆ.ಹೆಚ್.ಮುನಿಯಪ್ಪ ಇತರರು ಉಪಸ್ಥಿತರಿದ್ದರು.

ರೈತರೊಂದಿಗೆ ರಾಹುಲ್ ಸಂವಾದ

ಖರಡ್ಯ ಗ್ರಾಮದಲ್ಲಿ ಆಯ್ದಮಂದಿ ರೈತರು, ರೈತ ಮುಖಂಡರು ಹಾಗೂ ಪ್ರಗತಿಪರ ರೈತರೊಂದಿಗೆ ಸಂವಾದ ನಡೆಸಿದ ರಾಹುಲ್, ಈ ಭಾಗದಲ್ಲಿ ರೈತರು ಅನುಭವಿಸುತ್ತಿರುವ ಸಮಸ್ಯೆ, ಸಾಲಬಾಧೆ, ಬೆಳೆಗೆ ಸಮರ್ಪಕ ಬೆಂಬಲ ಬೆಲೆ ಇಲ್ಲ, ರೈತರ ಆತ್ಮಹತ್ಯೆ ಸೇರಿದಂತೆ ಅನೇಕ ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು.

ಸಂವಾದದಲ್ಲಿ ಅನೇಕ ರೈತರು ಈ ಭಾಗದಲ್ಲಿರುವ ರೈತರ ಸಮಸ್ಯೆಗಳನ್ನು ರಾಹುಲ್ ಮುಂದೆ ಹೇಳಿದರು. ರಾಜ್ಯದಲ್ಲಿ ನಮ್ಮ ಸರ್ಕಾರ ಬಂದರೆ ರೈತರ ಎಲ್ಲಾ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುವ ಭರವಸೆಯನ್ನು ರಾಹುಲ್ ಗಾಂಧಿ ನೀಡಿದರು.

ಗುರುವಾರದ ಪಾದಯಾತ್ರೆಯಲ್ಲಿ ಜನಸ್ತೋಮ



ಮಂಡ್ಯ,ಅ.6– ಗುರುವಾರದ ಭಾರತ್ ಜೋಡೋ ಯಾತ್ರೆಯಲ್ಲಿ ಭಾರೀ ಜನಸ್ತೋಮವೇ ಹರಿದು ಬಂದಿತ್ತು. ಪ್ರತಿ ಪಾದಯಾತ್ರೆಯ ಬೆಳಗಿನ ಅವಧಿಗೆ ಎರಡು ವಿಧಾನಸಭಾ ಕ್ಷೇತ್ರ ಹಾಗೂ ಸಂಜೆ ವೇಳೆಯ ಪಾದಯಾತ್ರೆಗೆ ಮತ್ತೆರಡು ವಿಧಾನಸಭಾ ಕ್ಷೇತ್ರದ ಜನ ಭಾಗವಹಿಸಬೇಕೆಂಬ ಸೂಚನೆ ಹಿನ್ನೆಲೆಯಲ್ಲಿ ಹತ್ತು ಸಾವಿರಕ್ಕೂ ಅಧಿಕ ಕಾಂಗ್ರೆಸ್ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಗುರುವಾರ ಬೆಳಗಿನ ಪಾದಯಾತ್ರೆಗೆ ಪಿ.ಎಂ.ನರೇಂದ್ರಸ್ವಾಮಿ ನೇತೃತ್ವದಲ್ಲಿ ಮಳವಳ್ಳಿ, ಪ್ರಿಯಾಕೃಷ್ಣ ನೇತೃತ್ವದಲ್ಲಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಜನ ಭಾಗವಹಿಸಿದ್ದರೆ, ಸಂಜೆಯ ಪಾದಯಾತ್ರೆಗೆ ಎನ್.ಎ.ಹ್ಯಾರೀಸ್ ನೇತೃತ್ವದಲ್ಲಿ ಶಾಂತಿನಗರ ಹಾಗೂ ಡಾ.ರಂಗನಾಥ್ ನೇತೃತ್ವದಲ್ಲಿ ಕುಣಿಗಲ್ ವಿಧಾನಸಭಾ ಕ್ಷೇತ್ರದ ಜನ ಪಾಲ್ಗೊಂಡಿದ್ದರು. ಇದರ ಜೊತೆಗೆ ಸ್ಥಳೀಯವಾಗಿ ಶ್ರೀರಂಗಪಟ್ಟಣ, ಮೇಲುಕೋಟೆ ಹಾಗೂ ನಾಗಮಂಗಲ ಕ್ಷೇತ್ರದ ಜನರು ಭಾಗವಹಿಸಿದ್ದರಿಂದ ಹತ್ತು ಸಾವಿರಕ್ಕೂ ಅಧಿಕ ಮಂದಿ ಪಾದಯಾತ್ರೆಯಲ್ಲಿದ್ದರು.

ಜೋಡೋ ಯಾತ್ರೆಯಲ್ಲಿ ವಿಕಲಚೇತನರ ಸಮಸ್ಯೆ ಆಲಿಕೆ



ನಾಗಮಂಗಲ, ಅ.6–ಪಾಂಡವಪುರ ಮತ್ತು ನಾಗಮಂಗಲ ತಾಲೂಕುಗಳಲ್ಲಿ ಗುರುವಾರ ನಡೆದ ಭಾರತ ಐಕ್ಯತಾ ಯಾತ್ರೆಗೆ ಭರ್ಜರಿ ಬೆಂಬಲ ದೊರೆತಿದೆ. ಯಾತ್ರೆಯಲ್ಲಿ ಲಕ್ಷಾಂತರ ಕಾರ್ಯಕರ್ತರು ಉತ್ಸಾಹದಿಂದ ಭಾಗವಹಿಸಿದ್ದರು. ವಿಕಲಚೇತನರು ವ್ಹೀಲ್‌ಚೇರ್‌ಗಳಲ್ಲಿ ಬಂದು ಯಾತ್ರೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಈ ವಿಕಲಚೇತನರನ್ನು ರಾಹುಲ್ ಗಾಂಧಿಯವರು ಆತ್ಮೀಯವಾಗಿ ಮಾತನಾಡಿಸಿ, ಅವರ ಸಮಸ್ಯೆಗಳನ್ನು ಆಲಿಸಿದರು.

ಭಾರತ ಐಕ್ಯತಾ ಯಾತ್ರೆ ಮಾರ್ಗದುದ್ದಕ್ಕೂ ಐಕ್ಯತಾ ಯಾತ್ರೆ ಕಾಂಗ್ರೆಸ್ ಬ್ಯಾನರ್‌ಗಳು ರಾರಾಜಿಸಿದವು. ಅಲ್ಲಲ್ಲಿ ಕಾಂಗ್ರೆಸ್ ನಾಯಕರ ಭಾವಚಿತ್ರವಿರುವ ಭಾರೀ ಗಾತ್ರದ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿತ್ತು. ಮಾರ್ಗ ಮಧ್ಯೆ ಕೆಲವೆಡೆ ಪಾದಯಾತ್ರಿಗಳಿಗೆ ತಂಪು ಪಾನೀಯ, ಎಳನೀರು, ಬಿಸ್ಕತ್ ಮುಂತಾದವುಗಳನ್ನು ನೀಡಿ ಸತ್ಕರಿಸಲಾಯಿತು. ಯಾತ್ರೆಯಲ್ಲಿ ಭಾಗವಹಿಸಿದ್ದ ಯುವಕ–ಯುವತಿಯರು ರಾಹುಲ್‌ರವರ ಬಳಿ ಆಗಮಿಸಿ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು. ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಪುಟ್ಟಪುಟ್ಟ ಮಕ್ಕಳನ್ನು ಮುದ್ದಾಡಿದ್ದಲ್ಲದೇ ಅವರ ಕೈ ಹಿಡಿದು ಸ್ವಲ್ಪ ದೂರ ಹೆಜ್ಜೆ ಹಾಕಿದರು.

ಮೈಸೂರು ಜಿಲ್ಲೆಯಿಂದಲೂ ಬಸ್‌ಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಆಗಮಿಸಿದ್ದು, ಎನ್.ಆರ್.ಕ್ಷೇತ್ರದಿಂದ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಯ್ಯದ್ ಇಕ್ಬಾಲ್ ನೇತೃತ್ವದಲ್ಲಿ 24 ಬಸ್‌ಗಳಲ್ಲಿ ಕಾರ್ಯಕರ್ತರು ಆಗಮಿಸಿದ್ದರು. ಇವರೆಲ್ಲರೂ ಶಾಸಕ ತನ್ವೀರ್ ಸೇಠ್, ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್, ಕೆಪಿಸಿಸಿ ನಾಯಕಿ ಐಶ್ವರ್ಯಾ ಮಹದೇವ್ ನೇತೃತ್ವದಲ್ಲಿ ಭಾಗವಹಿಸಿದ್ದರು.

ಗಂಜಾಂ ಇಂದ್ರಮ್ಮ ನಿಧನ



ಶ್ರೀರಂಗಪಟ್ಟಣ, ಅ.6– ಪಟ್ಟಣ ಪುರಸಭಾ ವ್ಯಾಪ್ತಿಯ ಗಂಜಾಂನ ಮುಖ್ಯ ಬೀದಿಯ ನಿವಾಸಿ ಇಂದ್ರಮ್ಮ (75) ಬುಧವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಬಳಗ ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಗಂಜಾಂನ ಜಮೀನಿನಲ್ಲಿ ನೆರವೇರಿಸಲಾಯಿತು.

ನಾರಾಯಣಪುರ ಗ್ರಾಪಂಗೆ ಆಯ್ಕೆ

ಚಿನಕುರಳಿ, ಅ.6– ಸಮೀಪದ ನಾರಾಯಣಪುರ ಗ್ರಾಪಂನ ಅಧ್ಯಕ್ಷೆಯಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಎಂ.ಡಿ.ಪವಿತ್ರ ಲೋಕೇಶ್ ಅವಿರೋಧವಾಗಿ ಆಯ್ಕೆಯಾದರು. 14 ಮಂದಿ ಸದಸ್ಯರ ಬಲ ಹೊಂದಿದ್ದು, ಹಿಂದಿನ ಅಧ್ಯಕ್ಷೆ ನವೀನಯೋಗಶೆಟ್ಟಿ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಅದರಂತೆ ನಡೆದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಎಂ.ಡಿ.ಪವಿತ್ರ ಲೋಕೇಶ್ ನಾಮಪತ್ರ ಸಲ್ಲಿಸಿದರು. ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಗ್ರಾಪಂನ ನೂತನ ಅಧ್ಯಕ್ಷೆಯಾಗಿ ಎಂ.ಡಿ.ಪವಿತ್ರ ಲೋಕೇಶ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಕುಮಾರ್ ಘೋಷಿಸಿದರು.

ಯಾತ್ರೆ ಫ್ಲೆಕ್ಸ್‌ನಲ್ಲಿ ಸಾವರ್ಕರ್ ಪ್ರತ್ಯಕ್ಷ



ನಾಗಮಂಗಲ, ಅ.6–ಎಐಸಿಸಿ ನಾಯಕ ರಾಹುಲ್ ಗಾಂಧಿಯವರು ಕೈಗೊಂಡಿರುವ ಭಾರತ ಐಕ್ಯತಾ ಯಾತ್ರೆಯ ಅಂಗವಾಗಿ ಅಳವಡಿಸಿದ್ದ ಫ್ಲೆಕ್ಸ್‌ನಲ್ಲಿ ಸಾವರ್ಕರ್ ಭಾವಚಿತ್ರ ಗುರುವಾರ ಕಾಣಿಸಿಕೊಂಡಿದೆ. ಈ ಯಾತ್ರೆ ವೇಳೆ ಮಾರ್ಗದುದ್ದಕ್ಕೂ ಹಲವಾರು ಫ್ಲೆಕ್ಸ್ ಹಾಗೂ ಬ್ಯಾನರ್‌ಗಳನ್ನು ಅಳವಡಿಸಲಾಗುತ್ತದೆ. ಅದರ ಭಾಗವಾಗಿ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರವಿರುವ ಫ್ಲೆಕ್ಸ್‌ಗಳನ್ನೂ ಕೂಡ ವಿಶೇಷವಾಗಿ ಅಳವಡಿಸಲಾಗುತ್ತದೆ. ಇಂದು ನಾಗಮಂಗಲ ತಾಲೂಕು ಚಿಣ್ಯಾ ಗ್ರಾಮದ ಬಳಿ ಅಳವಡಿಸಿದ್ದ ಐಕ್ಯತಾ ಯಾತ್ರೆ ಫ್ಲೆಕ್ಸ್‌ನಲ್ಲಿ ಸಾವರ್ಕರ್ ಅವರ ಭಾವಚಿತ್ರವಿತ್ತು. ಬೆಂಗಳೂರಿನ ಶಾಂತಿನಗರ ಕಾಂಗ್ರೆಸ್ ಶಾಸಕ ಹ್ಯಾರೀಸ್ ಅವರ ಪರವಾಗಿ ಅಳವಡಿಸಿದ್ದ ಈ ಫ್ಲೆಕ್ಸ್‌ನಲ್ಲಿ ದೊಡ್ಡ ಗಾತ್ರದಲ್ಲಿ ಸಾವರ್ಕರ್ ಅವರ ಭಾವಚಿತ್ರವಿದ್ದರೆ, ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮತ್ತು ಹ್ಯಾರೀಸ್ ಅವರ ಭಾವಚಿತ್ರಗಳನ್ನು ಸಣ್ಣ ಗಾತ್ರದಲ್ಲಿ ಮುದ್ರಿಸಲಾಗಿತ್ತು.

ಆದರೆ ಯಾತ್ರೆ ಈ ಗ್ರಾಮಕ್ಕೆ ಬರುವ ಮುನ್ನವೇ ಅದನ್ನು ಗಮನಿಸಿದ ಕಾಂಗ್ರೆಸ್ ಕಾರ್ಯಕರ್ತರು ಸದರಿ ಫ್ಲೆಕ್ಸ್ ಅನ್ನು ತೆರವುಗೊಳಿಸಿದರು. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಕಾಂಗ್ರೆಸ್ ನಾಯಕರೊಬ್ಬರು 'ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳ ಫ್ಲೆಕ್ಸ್‌ಗಳನ್ನು ಮಾಡಲಾಗಿದೆ. ಗೂಗಲ್‌ನಲ್ಲಿ ಸರ್ಚ್ ಮಾಡಿದಾಗ ದೊರೆತ ಸಾವರ್ಕರ್ ಚಿತ್ರವನ್ನೂ ಬಳಸಿಕೊಳ್ಳಲಾಗಿದೆ. ಫ್ಲೆಕ್ಸ್ ಸಿದ್ಧಪಡಿಸಿದವರು ತಪ್ಪು ತಿಳುವಳಿಕೆಯಿಂದ ಸಾವರ್ಕರ್ ಭಾವಚಿತ್ರವನ್ನು ಬಳಸಿದ್ದು ತಕ್ಷಣ ಫ್ಲೆಕ್ಸ್ ತೆರವುಗೊಳಿಸಲಾಗಿದೆ' ಎಂದರು.

ದೊಡ್ಡೇಗೌಡ



ಕೆ.ಆರ್.ಪೇಟೆ,ಅ.06– ತಾಲೂಕಿನ ಗಂಜಿಗೆರೆಕೊಪ್ಪಲು ಗ್ರಾಮದ ಹಿರಿಯ ಮುಖಂಡರಾದ ದೊಡ್ಡೇಗೌಡ(95) ಅವರು ಇಂದು ನಿಧನರಾದರು. ಮೃತರು ಪತ್ನಿ ಜವರಮ್ಮ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಅ.7ರಂದು ಶುಕ್ರವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ಗಂಜಿಗೆರೆಕೊಪ್ಪಲಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋಟೆಯಲ್ಲಿ ಅದ್ದೂರಿ ದಸರಾ ಮಹೋತ್ಸವ





ಹೆಚ್.ಡಿ.ಕೋಟೆ, ಅ.6– ವಿಜಯ ದಶಮಿ ಅಂಗವಾಗಿ ಪಟ್ಟಣದಲ್ಲಿ ಬುಧವಾರ ದಸರಾ ಮಹೋತ್ಸವ ಅದ್ದೂರಿಯಾಗಿ ನೆರವೇರಿತು.

ಪಟ್ಟಣದ ಶ್ರೀವರದರಾಜಸ್ವಾಮಿ ದೇವಾಲಯದ ಆವರಣದಲ್ಲಿ ಸಂಜೆ 5.40ರ ಶುಭ ಲಗ್ನದಲ್ಲಿ ಪಟ್ಟಣ ಪೊಲೀಸ್ ಠಾಣೆ ಆರಕ್ಷಕ ಉಪನಿರೀಕ್ಷಕ ಗೌರಿಶಂಕರ್ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ವರದರಾಜಸ್ವಾಮಿಗೆ ಸಕಲ ಸರ್ಕಾರಿ ಗೌರವ ಸಲ್ಲಿಸಿದರು. ಬಳಿಕ ಶಾಸಕ ಅನಿಲ್ ಚಿಕ್ಕಮಾದು, ದೇವಸ್ಥಾನದ ಧರ್ಮದರ್ಶಿ ಬಿ.ಎಸ್.ರಂಗಯ್ಯಂಗಾರ್ ಸೇರಿದಂತೆ ಪಟ್ಟಣದ ಎಲ್ಲಾ ಸಮಾಜದ ಮುಖಂಡರು ಶ್ರೀವರದರಾಜಸ್ವಾಮಿ ಅಶ್ವವಾಹನಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ವಿಜಯದಶಮಿಯ ದಸರಾ ಮಹೋತ್ಸವದ ಬನ್ನಿ ಪೂಜೆಗೆ ಚಾಲನೆ ನೀಡಿದರು.

ಬಳಿಕ ಅಶ್ವವಾಹನದಲ್ಲಿ ಪ್ರತಿಷ್ಠಾಪಿಸಿದ್ದ ಶ್ರೀವರದರಾಜಸ್ವಾಮಿ ಹಾಗೂ ಪೆರುಂದೇವಿ ಅಮ್ಮನವರ ಸಹಿತ ಶ್ರೀದೇವಿ, ಭೂದೇವಿಯವರನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಬಳಿಕ ಪಟ್ಟಣದ ಚಾಮುಂಡೇಶ್ವರಿ ದೇವಾಲಯದ ಹಿಂಭಾಗದಲ್ಲಿರುವ ಬನ್ನಿ ಮರಕ್ಕೆ ಪೊಲೀಸರ ಬಂದೂಕುಗಳನ್ನು ಇಟ್ಟು ಪೂಜೆ ಸಲ್ಲಿಸಲಾಯಿತು. ಮೆರವಣಿಗೆಯಲ್ಲಿ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಗ್ರಾಮಸ್ಥರು ಭಾಗವಹಿಸಿದ್ದರು. ಈ ವೇಳೆ ಭಕ್ತರು ದಾರಿಯುದ್ದಕ್ಕೂ ದೇವರಿಗೆ ಪೂಜೆ ಸಲ್ಲಿಸಿದರು. ಇನ್ನು ಕೆಲವರು ಇಡುಗಾಯಿ ಹೊಡೆದರು. ಅಲ್ಲದೇ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಬಾಣ ಬಿರುಸು ಹಾರಿಸಲಾಯಿತು.

ಈ ವೇಳೆ ಶಾಸಕ ಅನಿಲ್ ಚಿಕ್ಕಮಾದು, ಜಿಪಂ ಮಾಜಿ ಸದಸ್ಯರಾದ ಚಿಕ್ಕವೀರನಾಯ್ಕ, ಹೆಚ್.ಸಿ.ಮಂಜುನಾಥ್, ದೇವಸ್ಥಾನ ಧರ್ಮದರ್ಶಿ ಬಿ.ಎಸ್.ರಂಗಯ್ಯಾಂಗರ್, ಡಾ.ಹೆಚ್.ವಿ.ಕೃಷ್ಣಸ್ವಾಮಿ, ಜಯಂತ್, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಆರ್‌ಐ ಮಹೇಶ್, ಪುರಸಭೆ ಸದಸ್ಯರಾದ ರಾಜು, ಎಂ.ಮಧುಕುಮಾರ್, ಮಾಜಿ ಪ್ರಧಾನ ಎಂ.ಸಿ.ದೊಡ್ಡನಾಯಕ, ಮುಖಂಡರಾದ ಸತೀಶ್‌ಗೌಡ, ಕಾರ್ತಿಕ್, ವೆಂಕಟೇಶ್, ಪ್ರಸಾದ್ ಅಯ್ಯಂಗಾರ್, ಜಯಪ್ರಕಾಶ್ ಚಿಕ್ಕಣ್ಣ, ದಿನೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ನಯಾಜ್, ಪರಶಿವಮೂರ್ತಿ ಗಣೇಶಚಾರ್, ಶ್ರೀ ವರದರಾಜಸ್ವಾಮಿ ದೇವಸ್ಥಾನ ಸಮಿತಿ ಹೆಚ್.ವಿ.ತಿರುಮಲಾಚಾರ್, ದೇವರಾಜು, ಅರ್ಚಕ ಶ್ರೀಧರ್ ಸೇರಿದಂತೆ ಇನ್ನಿತರರಿದ್ದರು.

ಜಾನುವಾರುಗಳ ಆರೋಗ್ಯ ತಪಾಸಣೆ ಶಿಬಿರ ಉದ್ಘಾಟನೆ



ಹಿರೀಕ್ಯಾತನಹಳ್ಳಿ, ಅ.6– ತಾಲೂಕಿನ ಅಗ್ರಹಾರ ಗ್ರಾಮದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ಏರ್ಪಡಿಸಿದ್ದ ಜಾನುವಾರುಗಳ ಆರೋಗ್ಯ ತಪಾಸಣೆ ಶಿಬಿರವನ್ನು ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ರೈತರು ಜಾನುವಾರುಗಳಿಗೆ ತಗಲುವ ರೋಗ ತಡೆಗಟ್ಟಲು ಮುಂದಾಗಬೇಕು. ರೈತರು ಹೈನುಗಾರಿಕೆಗೆ ಹೆಚ್ಚು ಒತ್ತು ನೀಡುತ್ತಿದ್ದು, ಅದೇ ರೀತಿ ಜಾನುವಾರುಗಳ ಆರೋಗ್ಯಕ್ಕೂ ಒತ್ತು ನೀಡಬೇಕು ಎಂದರು.

ಈ ವೇಳೆ ರಾಸುಗಳ ಔಷಧಗಳ ಪ್ರದರ್ಶನ ನಡೆಯಿತು. 300ಕ್ಕೂ ಹೆಚ್ಚು ಜಾನುವಾರು ಹೆಚ್ಚು ಜಾನುವಾರುಗಳನ್ನು ತಪಾಸಣೆ ಮಾಡಲಾಯಿತು. ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿ ಡಾ.ಚನ್ನಬಸಪ್ಪ ತಂಬಾಕು ಹರಾಜು ಮಾರುಕಟ್ಟೆಯ ನಿವೃತ್ತ ಅಧೀಕ್ಷಕ ಕೆ.ಎನ್.ದಿನೇಶ್, ಗ್ರಾಪಂ ಸದಸ್ಯರಾದ ರಾಮೇಗೌಡ, ಶಿವಣ್ಣ, ಗ್ರಾಮದ ಮುಖಂಡರಾದ ರಾಮಕೃಷ್ಣೇಗೌಡ, ಹಿರಿಯ ಪಶು ವೈದ್ಯಾಧಿಕಾರಿ ಡಾ.ಭರತ್ ಕುಮಾರ್, ಪಶು ವೈದ್ಯರಾದ ಡಾ.ದರ್ಶನ್ ಡಾ.ರಾಜಶೇಖರಪ್ಪ ಪಶು ಇಲಾಖೆ ಸಿಬ್ಬಂದಿ ಹಾಜರಿದ್ದರು.

ಭಾರೀ ಮಳೆ: ಮನೆಗೆ ಹಾನಿ



ಹನಗೋಡು, ಅ. 6– ಹನಗೋಡು ಹೋಬಳಿ ವ್ಯಾಪ್ತಿ ಭಾರೀ ಮಳೆಯಾಗಿ ವಾಸದ ಮನೆಗಳಿಗೆ ಹಾನಿಯಾಗಿದೆ. ನಾಗರಹೊಳೆ ಕಾಡಂಚಿನ ಗ್ರಾಮ ಮುದಗನೂರಿನಲ್ಲಿ ಭಾರೀ ಮಳೆಯಿಂದ ಗ್ರಾಮದ ಚಾಮಮ್ಮ ಹಾಗೂ ಪರಮೇಶ್ ಅವರ ಮನೆಗೋಡೆ ಶಿಥಿಲಗೊಂಡು ಬಿರುಕು ಬಿಟ್ಟಿದೆ. ಅಲ್ಲದೆ ಅಮ್ಮಣ್ಣಮ್ಮ ನವರ ಮನೆಗೆ ಮಳೆ ನೀರು ತುಂಬಿದೆ. ಮಳೆ ಹಾನಿಯಿಂದ ಸಂಕಷ್ಟಕ್ಕೀಡಾಗಿರುವ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕೆಂದು ಯುವ ಮುಖಂಡ ಗಣೇಶ್ ತಾಲೂಕು ಆಡಳಿತಕ್ಕೆ ಮನವಿ ಮಾಡಿದ್ದಾರೆ.

ನಗರ್ಲೆಯಲ್ಲಿ ಗಾಂಧಿ ಜಯಂತಿ, ವಿಶೇಷ ಗ್ರಾಮಸಭೆ



ನಗರ್ಲೆ, ಅ. 6– ನಂಜನಗೂಡು ತಾಲೂಕು ನಗರ್ಲೆ ಗ್ರಾಮದ ಗ್ರಾಮ ಪಂಚಾಯಿತಿಯಲ್ಲಿ ಗಾಂಧಿ ಜಯಂತಿ ಹಾಗೂ ವಿಶೇಷ ಗ್ರಾಮಸಭೆ ಅಧ್ಯಕ್ಷೆ ಸುಮನ್ ರಾಜ್ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯನ್ನುದ್ದೇಶಿಸಿ ಪಿಡಿಓ ಈಶಕುಮಾರ್ ಮಾತನಾಡಿದರು. ಇದೇ ವೇಳೆ ಉಪಾಧ್ಯಕ್ಷ ಭದ್ರನಾಯಕ, ಗ್ರಾಪಂ ಸದಸ್ಯರಾದ ಎನ್.ಇ.ಪ್ರಮೋದ್ ಕುಮಾರ್, ಪ್ರಭು, ಮಹೇಶ್, ಮಹದೇವನಾಯಕ, ಸಿದ್ಧಾರ್ಥ ಮಹೇಶ್, ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಗ್ರಾಪಂ ಸಿಬ್ಬಂದಿ ವರ್ಗದವರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಭೇರ್ಯ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಭೇರ್ಯ, ಅ.6– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮುಶೀರ್ ಅಹಮದ್ ಖಾನ್, ಉಪಾಧ್ಯಕ್ಷರಾಗಿ ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮುಶೀರ್ ಅಹಮದ್ ಖಾನ್, ಉಪಾಧ್ಯಕ್ಷ ಸ್ಥಾನಕ್ಕೆ ವೆಂಕಟೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಾಲೂಕು ಸಹಕಾರ ಇಲಾಖೆ ಅಭಿವೃದ್ಧಿ ಅಧಿಕಾರಿ ಎಸ್.ರವಿ ಪ್ರಕಟಿಸಿದರು. ಸಹಕಾರ ಸಂಘದ ಆಡಳಿತ ಅಧಿಕಾರಿ ಎಂಸಿಡಿಸಿಸಿ ಬ್ಯಾಂಕ್ ಅಧಿಕಾರಿ ಸತೀಶ್, ಸಂಘದ ಸಿಇಓ ಬಿ.ಹೆಚ್.ಮಹದೇವ್ ಇದ್ದರು.

ಈ ವೇಳೆ ನಿರ್ದೇಶಕರಾದ ತಾರಾ, ಅನಿತಾ, ರಂಜಿನಿ, ಯಶೋದಮ್ಮ, ಕೃಷ್ಣ (ಸಣ್ಣಮರಿ), ರಾಮೇಗೌಡ, ಶ್ರೀನಿವಾಸ್, ಮಂಜೇಗೌಡ, ಸುಬ್ಬನಾಯಕ, ಮೊಕಬಲ್ ಚುನಾವಣೆಯಲ್ಲಿ ಭಾಗವಹಿಸಿದ್ದರು.

ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ತಾಪಂ ಮಾಜಿ ಸದಸ್ಯ ಸಾದೀಕ್ ಖಾನ್, ಗ್ರಾಪಂ ಮಾಜಿ ಅಧ್ಯಕ್ಷ ಬಿ.ವೈ. ಶಿವಶಂಕರ್, ಜೆಡಿಎಸ್ ಮುಖಂಡರಾದ ಜಯಕೀರ್ತಿ, ತನು ಅಭಿನಂದಿಸಿದರು.



ಸರಗೂರು ಪಟ್ಟಣದ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಚಿಕ್ಕವೀರನಾಯಕ ಅವರ ಅಧ್ಯಕ್ಷತೆಯಲ್ಲಿ ಕಂದೇಗಾಲ ಮಹದೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯಿತು. ಸಭೆಯಲ್ಲಿ ಸಿಇಓ ಎಂ.ಮಹದೇವ ನಾಯಕ, ಸಂಘದ ಉಪಾಧ್ಯಕ್ಷ ಬಿ.ಶಿವನಾಯಕ, ಸದಸ್ಯರಾದ ಎಸ್.ರೇಖಾ, ದೇವಾಲಮ್ಮ, ಜಯರಾಮ, ಅಂಕನಾಯಕ, ಎಸ್.ಟಿ. ಗೋವಿಂದ ನಾಯಕ, ಎಂ.ಎಸ್.ಹನುಮಂತರಾಜು, ಸೋಮೇಶ್, ಕೃಷ್ಣ, ಸಿದ್ದಲಿಂಗನಾಯಕ, ಚಂದ್ರ ನಾಯಕ, ಸೋಮಣ್ಣ ಹಾಜರಿದ್ದರು.

ಭಾರತದ ವಿರುದ್ಧ ದ.ಆಫ್ರಿಕಾಕ್ಕೆ ಭರ್ಜರಿ ಜಯ



ಲಖನೌ, ಅ.6– ಹೆನ್ರಿಕ್ ಕ್ಲಾಸೆನ್ ಹಾಗೂ ಡೇವಿಡ್ ಮಿಲ್ಲರ್ ಅವರ ಅರ್ಧ ಶತಕಗಳ ನೆರವಿನಿಂದ ದಕ್ಷಿಣ ಆಫ್ರಿಕಾ ಭಾರತದ ವಿರುದ್ಧ 9 ರನ್‌ಗಳ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಅಂತರದಿಂದ ಮುನ್ನಡೆ ಸಾಧಿಸಿದೆ.

ಇಲ್ಲಿನ ಭಾರತರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯವನ್ನು ಮಳೆಯಿಂದಾಗಿ 40 ಓವರ್‌ಗಳಿಗೆ ಕಡಿತಗೊಳಿಸಲಾಗಿತ್ತು. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ನಿಗದಿತ 40 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 249 ರನ್ ಗಳಿಸಿತು. ತಂಡದ ಪರ ಹೆನ್ರಿಕ್ ಕ್ಲಾಸೆನ್ ಹಾಗೂ ಡೇವಿಡ್ ಮಿಲ್ಲರ್ 5ನೇ ವಿಕೆಟ್‌ಗೆ 139 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಆಫ್ರಿಕಾ ಪರ ಕ್ವಿಂಟನ್ ಡಿಕಾಕ್ 48, ಜನೆಮನ್ ಮಲನ್ 22, ಹೆನ್ರಿಕ್ ಕ್ಲಾಸೆನ್ 74, ಮಿಲ್ಲರ್ 75 ರನ್ ಗಳಿಸಿದರು. ಭಾರತದ ಪರ ಶಾರ್ದೂಲ್ ಠಾಕೂರ್ 2, ರವಿ ಬಿಷ್ಣೋಯಿ, ಕುಲದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

250 ರನ್‌ಗಳ ಗೆಲುವಿನ ಗುರಿ ಪಡೆದ ಭಾರತದ ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 51 ರನ್ ಆಗುವಷ್ಟರಲ್ಲಿ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಸಂಜು ಸ್ಯಾಮ್ಸನ್ ಹಾಗೂ ಶ್ರೇಯಸ್ ಅಯ್ಯರ್ 67 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿ ದರು. ಆದರೆ 50ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ಅಯ್ಯರ್ ವಿಕೆಟ್ ಒಪ್ಪಿಸಿದರು. ನಂತರ ಸಂಜು ಸ್ಯಾಮ್ಸನ್‌ಗೆ ಉತ್ತಮ ಸಾಥ್ ನೀಡಿದ ಶಾರ್ದೂಲ್ ಠಾಕೂರ್ ಕೂಡ 33 ರನ್ ಗಳಿಸಿ ನಿರ್ಗಮಿಸಿ ದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಏಕಾಂಗಿಯಾಗಿ ಹೋರಾಡಿದ ಸಂಜು ಸ್ಯಾಮ್ಸನ್ 63 ಎಸೆತಗಳಲ್ಲಿ 3 ಸಿಕ್ಸರ್, 9 ಬೌಂಡರಿ ಒಳಗೊಂಡ 86 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಇಶಾನ್ ಕಿಶಾನ್ 20, ಋತುರಾಜ್ ಗಾಯಕ್ವಾಡ್ 19 ರನ್ ಗಳಿಸಿದರು. ಅಂತಿಮವಾಗಿ ಭಾರತ 8 ವಿಕೆಟ್ ನಷ್ಟಕ್ಕೆ 240 ರನ್ ಗಳಿಸಿತು. ದ.ಆಫ್ರಿಕಾ ಪರ ರಬಾಡ 2 ಲುಂಗಿ ಎನ್‌ಗಿಡಿ 3, ಪರ್ನೆಲ್, ಮಹಾರಾಜ್, ಸಂಶಿ ತಲಾ ಒಂದೊಂದು ವಿಕೆಟ್ ಪಡೆದರು. ಹೆನ್ರಿಕ್ ಕ್ಲಾಸೆನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಹುಲ್ಲಹಳ್ಳಿಯಲ್ಲಿ ನಡೆದ ಗಾಂಧಿ ಜಯಂತಿ ಮತ್ತು ವಿಶೇಷ ಗ್ರಾಮಸಭೆಯನ್ನು ಹುಲ್ಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹೆಚ್.ಎನ್ ಮಹೇಶ್ ಉದ್ಘಾಟಿಸಿದರು. ಈ ವೇಳೆ ಗ್ರಾಪಂ ಸದಸ್ಯರಾದ ಮಲ್ಲಿಕಾರ್ಜುನ, ನಾಗಂದ್ರ.ಜೆ, ಕುಮಾರ್, ಜಯಮ್ಮ, ಪ್ರಭಾರ ಪಿಡಿಓ ಅರುಣ್‌ಕುಮಾರ್ ಹಾಜರಿದ್ದರು.

ಮೈಸೂರು ಮಿತ್ರ
ಶುಕ್ರವಾರ 7 ಅಕ್ಟೋಬರ್ 2022

ರಾಹುಲ್‌ಗೆ ತಾಯಿ ಬಲ

ಮಂಡ್ಯ ಜಿಲ್ಲೆಯ ಯಾತ್ರೆಯಲ್ಲಿ ಕೆಲ ದೂರ ಸಾಗಿದ ಸೋನಿಯಾಗಾಂಧಿ



ಒಂದನೇ ಪುಟದಿಂದ

ಭಾಗಿಯಾದರು. ಉತ್ಸಾಹದಿಂದಲೇ ಮಗನೊಂದಿಗೆ ಅವರು ಹೆಜ್ಜೆ ಹಾಕಿದರು. ಈ ವೇಳೆ ಮಾಜಿ ಸಚಿವ ಕೆ.ಹೆಚ್.ಮುನಿಯಪ್ಪ ಭಾಗಿಯಾದರು. ಶಾಸಕಿ ಅಂಜಲಿ ನಿಂಬಾಳ್ಕರ್ ಅವರನ್ನು ವಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸೋನಿಯಾ ಅವರಿಗೆ ಪರಿಚಯಿಸಿದರು. ಮಗ ಹಾಗೂ ಮುಖಂಡರೊಂದಿಗೆ ಮಾತನಾಡುತ್ತಾ ಸೋನಿಯಾ ಗಾಂಧಿ ಬಿರುಸಿನ ಹೆಜ್ಜೆ ಹಾಕಿದರು. ಅವರು ಮಾಣಿಕ್ಯನಹಳ್ಳಿಯಿಂದ ಸುಮಾರು ಒಂದು ಕಿಲೋಮೀಟರ್ ಕ್ರಮಿಸಿದಾಗ ಅವರ ಆರೋಗ್ಯ ದೃಷ್ಟಿಯಿಂದ ರಾಹುಲ್ ಗಾಂಧಿ, ಅವರ ಪಾದಯಾತ್ರೆ ಮೊಟಕುಗೊಳಿಸಿ ಕಾರಿನಲ್ಲಿ ಬರುವಂತೆ ತಾಯಿಗೆ ಸೂಚಿಸಿದರು. ಮಗನ ಸೂಚನೆಯಂತೆ ಸೋನಿಯಾ ಕಾರಿನಲ್ಲೇ ಐಕ್ಯತಾ ಯಾತ್ರೆಯನ್ನು ಹಿಂಬಾಲಿಸಿದರು.

ಜಕ್ಕನಹಳ್ಳಿ ಬರುತ್ತಿದ್ದಂತೆ ಮತ್ತೆ ಕಾರಿನಿಂದ ಇಳಿದ ಸೋನಿಯಾಗಾಂಧಿ ಪುತ್ರನೊಂದಿಗೆ ಹೆಜ್ಜೆ ಹಾಕಿದರು. ಅಲ್ಲಿಂದ ಸುಮಾರು ಅರ್ಧ ಕಿಲೋ ಮೀಟರ್ ನಡೆದು ಜಕ್ಕನಹಳ್ಳಿ ಕ್ರಾಸ್‌ನಲ್ಲಿರುವ ಕಾಂಗ್ರೆಸ್ ಮುಖಂಡರೊಬ್ಬರ ಮನೆ ಬಳಿಗೆ ತೆರಳಿದ ಸೋನಿಯಾ, ರಾಹುಲ್, ಸಿದ್ದು, ಡಿಕೆಶಿ, ಸುರ್ಜೇವಾಲಾ, ವೇಣುಗೋಪಾಲ್ ಸೇರಿದಂತೆ ಪ್ರಮುಖ ನಾಯಕರು ಸುಮಾರು 15 ನಿಮಿಷ ವಿಶ್ರಾಂತಿ ಪಡೆದು ಚಹ ಸೇವಿಸಿ ಪಾದಯಾತ್ರೆ ಮುಂದುವರೆಸಿದರು. ಮತ್ತೆ ಕಾರು ಹತ್ತಿದ್ದ ಸೋನಿಯಾಗಾಂಧಿ ನಾಗಮಂಗಲ ತಾಲೂಕಿನ ಖರಡ್ಯ ಗ್ರಾಮ ಬರುತ್ತಿದ್ದಂತೆಯೇ ಮತ್ತೆ ಪಾದಯಾತ್ರೆಯಲ್ಲಿ ಭಾಗವಹಿಸಿದರು. ಖರಡ್ಯ ಗ್ರಾಮದಲ್ಲಿ ಮಧ್ಯಾಹ್ನದ ವಿಶ್ರಾಂತಿಗೆ ಪಾದಯಾತ್ರೆಯನ್ನು ಸ್ಥಗಿತಗೊಳಿಸಲಾಯಿತು. ಸೋನಿಯಾ ಗಾಂಧಿಯವರು ಈ ಗ್ರಾಮದಲ್ಲಿ ಊಟ ಮಾಡಿದ ನಂತರ ಪಾದಯಾತ್ರೆಯಿಂದ ನಿರ್ಗಮಿಸಿದರು. ಅವರು ಅಲ್ಲಿಂದ ಕಾರಿನಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿ, ವಿಶೇಷ ವಿಮಾನದ ಮೂಲಕ ದೆಹಲಿಯತ್ತ ಪ್ರಯಾಣ ಬೆಳೆಸಿದರು. ಸಂಜೆ 4.30ಕ್ಕೆ ಮತ್ತೆ ಶುರುವಾದ ಪಾದಯಾತ್ರೆ ಖರಡ್ಯ ಗ್ರಾಮದಿಂದ ನಾಗಮಂಗಲ ಮಾರ್ಗವಾಗಿ ಸಾಗಿ, ಬ್ರಹ್ಮದೇವರಹಳ್ಳಿ ಗ್ರಾಮ ತಲುಪಿತು. ದಾರಿ ಮಧ್ಯೆ ಸ್ವಾಮನಹಳ್ಳಿ ಗ್ರಾಮದಲ್ಲಿ ಕುಮಾರ್ ಎಂಬ ಕಾರ್ಯಕರ್ತರ ಮನೆಗೆ ಭೇಟಿ ನೀಡಿದ ರಾಹುಲ್‌ಗಾಂಧಿ, ಕೆಲ ಹೊತ್ತು ವಿಶ್ರಾಂತಿ ಪಡೆದು ಚಹ ಸೇವಿಸಿ ಯಾತ್ರೆ ಮುಂದುವರೆಸಿದರು. ಬ್ರಹ್ಮದೇವರಹಳ್ಳಿ ಗ್ರಾಮವು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ತವರು ಗ್ರಾಮವಾಗಿದ್ದು, ಅಲ್ಲಿ ರಾಹುಲ್‌ಗಾಂಧಿಗೆ ಅದ್ಧೂರಿ ಸ್ವಾಗತ ಕೋರಲಾಯಿತು. ರಾಹುಲ್ ಗುರುವಾರ ರಾತ್ರಿ ಬ್ರಹ್ಮದೇವರಹಳ್ಳಿ ಗ್ರಾಮದಲ್ಲೇ ವಾಸ್ತವ್ಯ ಹೂಡಿದ್ದು, ಶುಕ್ರವಾರದ ಪಾದಯಾತ್ರೆ ಇದೇ ಗ್ರಾಮದಿಂದ ಆರಂಭವಾಗಿ, ನಾಗಮಂಗಲ ರಸ್ತೆ ಮೂಲಕ ಬೆಳ್ಳೂರು ಕ್ರಾಸ್, ಆದಿಚುಂಚನಗಿರಿ ತಲುಪಲಿದೆ. ಆದಿಚುಂಚನಗಿರಿಯಲ್ಲಿ ರಾಹುಲ್ ಶುಕ್ರವಾರ ರಾತ್ರಿ ವಾಸ್ತವ್ಯ ಹೂಡಲಿದ್ದಾರೆ.

ಇಂದಿನ ಪಾದಯಾತ್ರೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್‌ಸಿಂಗ್ ಸುರ್ಜೇವಾಲಾ, ಕೆ.ಸಿ. ವೇಣುಗೋಪಾಲ್, ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯ ಸಭಾ ಸದಸ್ಯ ಜೈರಾಮ್ ರಮೇಶ್, ವಿಧಾನಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಮಾಜಿ ಸಚಿವರಾದ ತನ್ವೀರ್ ಸೇಠ್, ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಪ್ರಿಯಾಂಕ್ ಖರ್ಗೆ, ಯು.ಟಿ.ಖಾದರ್, ಮಾಜಿ ಕೇಂದ್ರ ಸಚಿವ ಕೆ.ಹೆಚ್.ಮುನಿಯಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಧ್ರುವನಾರಾಯಣ್, ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್, ಜಿಲ್ಲಾ ಮುಖಂಡರಾದ ದಿನೇಶ್ ಗೂಳಿಗೌಡ, ರಮೇಶ್ ಬಂಡಿಸಿದ್ದೇಗೌಡ, ಬಿ.ಪ್ರಕಾಶ್, ಕೆ.ಬಿ.ಚಂದ್ರಶೇಖರ್, ಸಿ.ಡಿ.ಗಂಗಾಧರ್, ಡಾ.ಕೃಷ್ಣ, ರವೀಂದ್ರ ಸೇರಿದಂತೆ ಅನೇಕರಿದ್ದರು.

ದೃಶ್ಯ ಮಾಧ್ಯಮದವರ ಮೇಲೆ ಪೊಲೀಸರ ಹಲ್ಲೆ: ಪಾದಯಾತ್ರೆ ಸಾಗುವಾಗ ಸೋನಿಯಾಗಾಂಧಿ ಹಾಗೂ ರಾಹುಲ್‌ಗಾಂಧಿ ಜಕ್ಕನಹಳ್ಳಿ ಬಳಿ ಕಾರ್ಯಕರ್ತರೊಬ್ಬರ ಮನೆಗೆ ತೆರಳಿ ಹಿಂತಿರುಗುವಾಗ ನೂಕು-ನುಗ್ಗಲು ಉಂಟಾಯಿತು. ಈ ಸಂದರ್ಭದಲ್ಲಿ ಎಸ್‌ಪಿಜಿ ಭದ್ರತಾ ಪಡೆಗಳು, ಜನರನ್ನು ಚದುರಿಸಲು ಮುಂದಾದರು. ಆಗ ಅಲ್ಲೇ ಇದ್ದ ಪೊಲೀಸರು ದೃಶ್ಯ ಮಾಧ್ಯಮದ ಇಬ್ಬರು ವರದಿಗಾರರು ಹಾಗೂ ಮೂವರು ಕ್ಯಾಮರಾಮನ್‌ಗಳ ಮೇಲೆ ಮನಸ್ಸೋ ಇಚ್ಛೆ ಹಲ್ಲೆ ಮಾಡಿದ್ದಾರೆ. ಈ ಘಟನೆ ಖಂಡಿಸಿ ದೃಶ್ಯ ಮಾಧ್ಯಮದವರು ಜಕ್ಕನಹಳ್ಳಿಯಿಂದ ಖರಡ್ಯವರೆಗೆ ಚಿತ್ರೀಕರಣವನ್ನು ಸ್ಥಗಿತಗೊಳಿಸಿದರು. ಈ ವೇಳೆ ರಣದೀಪ್ ಸಿಂಗ್ ಸುರ್ಜೇವಾಲಾ, ಜೈರಾಮ್ ರಮೇಶ್, ಪ್ರಿಯಾಂಕ ಖರ್ಗೆ ಅವರ ಮನವೊಲಿಸಿದರೂ ಅದು ಯಶಸ್ವಿಯಾಗಲಿಲ್ಲ. ಪೊಲೀಸರ ವಿರುದ್ಧ ಪತ್ರಕರ್ತರು ಧಿಕ್ಕಾರ ಕೂಗಿದರು. ಬಳಿಕ ಖರಡ್ಯ ಗ್ರಾಮದಲ್ಲಿ ಸ್ವತಃ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾಧ್ಯಮದವರ ಜೊತೆ ಚರ್ಚೆ ನಡೆಸಿ, ಕ್ಷಮೆಯಾಚಿಸಿದರು. ಆದರೆ ಪತ್ರಕರ್ತರು ಹಲ್ಲೆ ನಡೆಸಿದ ಪೊಲೀಸರಿಂದ ಕ್ಷಮೆ ಕೇಳಿಸುವಂತೆ ಒತ್ತಾಯಿಸಿದರು. ಬಳಿಕ ಎಸ್ಪಿ ಯತೀಶ್‌ರನ್ನು ಸ್ಥಳಕ್ಕೆ ಕರೆಸಿದ ಡಿಕೆಶಿ, ಹಲ್ಲೆ ನಡೆಸಿದ ಪೊಲೀಸ್ ಅಧಿಕಾರಿಯನ್ನು ಕರೆಸುವಂತೆ ಎಸ್ಪಿ ಅವರಿಗೆ ಮನವಿ ಮಾಡಿದರು. ಆದರೆ ಆ ಅಧಿಕಾರಿ ಅಲ್ಲಿಂದ ತೆರಳಿದ್ದ ಕಾರಣ ಎಸ್ಪಿ ಯತೀಶ್, ಅವರ ಬದಲಾಗಿ ನಾನು ನಿಮ್ಮಲ್ಲಿ ವಿಷಾದ ವ್ಯಕ್ತಪಡಿಸುವೆ. ಆ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದ ಬಳಿಕ ಮಾಧ್ಯಮದವರು ಪ್ರತಿಭಟನೆ ಕೈಬಿಟ್ಟರು.

ತಪ್ಪಿತಸ್ಥರ ವಿರುದ್ಧ ಕ್ರಮ: ಮಂಡ್ಯದಲ್ಲಿ ಮಾಧ್ಯಮ ಪ್ರತಿನಿಧಿಗಳ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ ವರದಿ ತರಿಸಿಕೊಂಡು ಯಾರ ತಪ್ಪಿದೆ ಎಂದು ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ಸೋನಿಯಾ ಗಾಂಧಿಯವರು ಭಾರತ ಐಕ್ಯತಾ ಯಾತ್ರೆಯಲ್ಲಿ ನಡೆಯುತ್ತಿರುವಾಗ ಮಾಣಿಕ್ಯನಹಳ್ಳಿ ಗ್ರಾಮದಲ್ಲಿ ಅವರ ಶೂ ಲೇಸ್ ಸಡಿಲವಾಗಿದ್ದು, ಅದನ್ನು ಗಮನಿಸಿದ ರಾಹುಲ್ ಗಾಂಧಿ ತಕ್ಷಣವೇ ಕೆಳಗೆ ಕುಳಿತು ತಾಯಿ ಶೂ ಲೇಸ್ ಕಟ್ಟಿದರು.



ಇಂದಿನ ಭಾರತ ಐಕ್ಯತಾ ಯಾತ್ರೆ ವೇಳೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ, ರಸ್ತೆಬದಿ ನಿಂತು ನೋಡುತ್ತಿದ್ದ ಮಕ್ಕಳನ್ನು ಹತ್ತಿರಕ್ಕೆ ಕರೆದು ಮುದ್ದಾಡಿದರಲ್ಲದೆ, ರಸ್ತೆಬದಿ ನಿಂತಿದ್ದ ಕೆಲವರೊಂದಿಗೆ ಸ್ವಲ್ಪ ದೂರು ಹೆಜ್ಜೆ ಹಾಕಿದರು.

ಶುಕ್ರವಾರ ಇಡಿ ವಿಚಾರಣೆಗೆ ಹಾಜರಾಗುವೆ: ಡಿಕೆಶಿ

ಖರಡ್ಯ(ನಾಗಮಂಗಲ),ಅ.6- ಇಡಿ ವಿಚಾರಣೆಗೆ ಸಂಬಂಧಿಸಿದಂತೆ ಅಧಿಕಾರಿಗಳು ನಮ್ಮ ಮೇಲಿದ್ದ ಪ್ರಕರಣಗಳ ಜತೆಗೆ ಬೇರೆ ಪ್ರಕರಣಗಳ ವಿಚಾರವಾಗಿಯೂ ಸಮನ್ಸ್ ನೀಡಿದ್ದು, ಭಾರತ ಐಕ್ಯತಾ ಯಾತ್ರೆ ಮುಗಿದ ನಂತರ ವಿಚಾರಣೆಗೆ ಹಾಜರಾಗುವುದಾಗಿ ನಾವು ಕಾಲಾವಕಾಶ ಕೋರಿದ್ದೆವು. ಆದರೆ ಇಂದು ಮತ್ತೆ ಇಡಿ ಅಧಿಕಾರಿಗಳು ಸಮನ್ಸ್ ಜಾರಿ ಮಾಡಿದ್ದು, ಶುಕ್ರವಾರ ಬೆಳಗ್ಗೆ 10.30ಕ್ಕೆ ಇಡಿ ಕಚೇರಿಗೆ ಬಂದು ಹೇಳಿಕೆ ನೀಡಬೇಕು ಎಂದು ತಿಳಿಸಿದ್ದಾರೆ. ನಾನು ಇಡಿ ವಿಚಾರಣೆಗೆ ಹಾಜರಾಗಲು ದೆಹಲಿಗೆ ತೆರಳುತ್ತಿದ್ದೇನೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ನಾಗಮಂಗಲ ತಾಲೂಕಿನ ಖರಡ್ಯ ಗ್ರಾಮದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡಿ ವಿಚಾರಣೆಗೆ ಹೋಗಬೇಕಾ ಎಂಬ ಬಗ್ಗೆ ನಾನು ನಮ್ಮ ನಾಯಕರ ಜತೆ ಚರ್ಚೆ ಮಾಡಿದ್ದು, ಅವರು ವಿಚಾರಣೆಗೆ ಹಾಜರಾಗುವಂತೆ ಸಲಹೆ ನೀಡಿದ್ದಾರೆ. ನಾವು ಕಾನೂನು ರೂಪಿಸುವವರಾಗಿದ್ದು, ಕಾನೂನಿಗೆ ಗೌರವ ನೀಡಬೇಕಿದೆ. ಈ ಯಾತ್ರೆಯನ್ನು ಜನರು ನಡೆಸುತ್ತಾರೆ ಎಂದು ಪಕ್ಷ ಆದೇಶ ನೀಡಿದ್ದು, ನಾನು ಹಾಗೂ ನನ್ನ ಸಹೋದರ ದೆಹಲಿಗೆ ತೆರಳಿ ವಿಚಾರಣೆಗೆ ಹಾಜರಾಗುತ್ತೇವೆ ಎಂದರು.

ಮೇಲುಕೋಟೆ ಚೆಲುವನಾರಾಯಣಸ್ವಾಮಿ ದರ್ಶನ ಮಾಡಿದ ಸೋನಿಯಾ

ಮೇಲುಕೋಟೆ, ಅ.6- ಗುರುವಾರ ಬೆಳಗ್ಗೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ ಪಾಂಡವಪುರ ತಾಲೂಕಿನ ಮೇಲುಕೋಟೆಗೆ ಆಗಮಿಸಿ ಶ್ರೀ ಚೆಲುವನಾರಾಯಣ ಸ್ವಾಮಿಯ ದರ್ಶನ ಪಡೆದರು. ಅಲ್ಲಿನ ಸ್ಥಾನಿಕ ಅರ್ಚಕರ ಸಮ್ಮುಖದಲ್ಲಿ ಸೋನಿಯಾಗಾಂಧಿ ವಿಶೇಷ ಪೂಜೆ ಸಲ್ಲಿಸಿದರು. ಸೋನಿಯಾಗಾಂಧಿ ಭೇಟಿ ಹಿನ್ನಲೆಯಲ್ಲಿ ಮೇಲುಕೋಟೆಯಲ್ಲಿ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಈ ಸಂದರ್ಭದಲ್ಲಿ ಸೋನಿಯಾ ಜೊತೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಇತರರು ಉಪಸ್ಥಿತರಿದ್ದರು.

ನ್ಯಾ. ನಾಗಮೋಹನದಾಸ್ ವರದಿ ಜಾರಿಗೆ ಆಗ್ರಹ

ಖರಡ್ಯ (ನಾಗಮಂಗಲ ತಾ.), ಅ.6- ಪಾಂಡವಪುರ ಮತ್ತು ನಾಗಮಂಗಲ ತಾಲೂಕುಗಳಲ್ಲಿ ಗುರುವಾರ ನಡೆದ ಭಾರತ ಐಕ್ಯತಾ ಯಾತ್ರೆಯ ನಂತರ ಜಂಟಿ ಸುದ್ದಿಗೋಷ್ಠಿ ನಡೆಸಿದ ಕಾಂಗ್ರೆಸ್ ಮುಖಂಡರು, ಮೀಸಲಾತಿ ಅಸ್ತ್ರವನ್ನು ಕೈಗೆತ್ತಿಕೊಂಡಿದ್ದು, ನ್ಯಾ. ನಾಗಮೋಹನ ದಾಸ್ ವರದಿಯನ್ನು ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ವಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ, ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂದು ಬಹಳ ವರ್ಷಗಳಿಂದ ಒತ್ತಾಯ ಇದೆ. ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಎಸ್‌ಸಿಗಳಿಗೆ ಶೇ.15 ಹಾಗೂ ಎಸ್.ಟಿ.ಗಳಿಗೆ ಶೇ.7.5 ರಷ್ಟು ಮೀಸಲಾತಿ ನೀಡಲಾಗಿದೆ. ಎರಡೂ ಸೇರಿಸಿದರೆ ಶೇ.22.5ರಷ್ಟು ಆಗುತ್ತದೆ. ಕರ್ನಾಟಕದಲ್ಲಿ ಎಸ್.ಸಿಗಳಿಗೆ ಶೇ.15 ಹಾಗೂ ಎಸ್.ಟಿಗಳಿಗೆ ಶೇ.3ರಷ್ಟು ಮೀಸಲಾತಿ ನೀಡಲಾಗುತ್ತಿದ್ದು, ಒಟ್ಟು ಶೇ.18ರಷ್ಟಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೀಸಲಾತಿ ನಡುವೆ ಶೇ.4.5ರಷ್ಟು ವ್ಯತ್ಯಾಸವಿದೆ ಎಂದರು.

2011ರ ಜನಗಣತಿ ಪ್ರಕಾರ ಎಸ್.ಸಿಗಳು ಶೇ.17.15ರಷ್ಟಿದ್ದು, ಎಸ್.ಟಿಗಳು ಶೇ.6.95 ರಷ್ಟಿಸಿದ್ದಾರೆ. ಎರಡೂ ವರ್ಗ ಸೇರಿಸಿ, ಶೇ.24.10 ರಷ್ಟು ಜನರಿದ್ದಾರೆ. ಆದರೆ ಮೀಸಲಾತಿ ಕೇವಲ ಶೇ.18ರಷ್ಟಿದೆ. ಹೀಗಾಗಿ ಮೀಸಲಾತಿ ಹೆಚ್ಚಳಕ್ಕೆ ಒತ್ತಾಯ ಬಂದಿದೆ. ಈ ಕಾರಣಕ್ಕೆ ಸಮ್ಮಿಶ್ರ ಸರ್ಕಾರವಿದ್ದಾಗ 2019ರಲ್ಲಿ ನ್ಯಾ. ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತು. ಅವರು 02-07-2020ರಲ್ಲಿ ವರದಿ ನೀಡಿದ್ದು, ಆಗ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂತು. ವರದಿ ಕೊಟ್ಟು ಎರಡು ವರ್ಷ ಮೂರು ತಿಂಗಳಾಗಿದ್ದು, ಇಂದಿನವರೆಗೂ ಈ ವರದಿ ಒಪ್ಪಿ ಅದನ್ನು ಜಾರಿ ಮಾಡಿಲ್ಲ. ಅದಕ್ಕಾಗಿ ಎಸ್ ಟಿ ಜನಾಂಗದ ವಾಲ್ಮೀಕಿ ಮಠದ ಸ್ವಾಮಿಜಿ ಧರಣಿ ಆರಂಭಿಸಿದ್ದಾರೆ. ನಾನು ಹಾಗೂ ಪರಿಶಿಷ್ಟ ಸಮುದಾಯದ ಶಾಸಕರು, ಅಧ್ಯಕ್ಷರು ಚರ್ಚೆ ಮಾಡಿದ್ದು, ಈ ವರದಿ ಜಾರಿ ಮಾಡಬೇಕು ಎಂದು ಆಗ್ರಹಿಸುತ್ತೇವೆ ಎಂದರು. ಈ ಸಮಿತಿಯು ಎಸ್.ಟಿ ಜನಾಂಗದವರಿಗೆ ಜನಸಂಖ್ಯೆ ಅನುಗುಣವಾಗಿ ಮೀಸಲಾತಿಯನ್ನು ಶೇ.3ರಿಂದ ಶೇ.7ರಷ್ಟು ಹೆಚ್ಚಿಸಬೇಕು. ಎಸ್.ಸಿ ಜನಾಂಗದವರಿಗೆ ಶೇ.15ರಿಂದ ಶೇ.17ರಷ್ಟು ಹೆಚ್ಚಾಗಬೇಕು. ಒಟ್ಟಾರೆ ಮೀಸಲಾತಿಯು ಶೇ.6ರಷ್ಟು ಹೆಚ್ಚಾಗಬೇಕು ಎಂದು ಶಿಫಾರಸ್ಸು ಮಾಡಿದೆ. ಆದರೆ, ಈ ವರದಿ ಬಂದು 2 ವರ್ಷವಾಗಿದ್ದರೂ ಸರ್ಕಾರ ಅದನ್ನು ಜಾರಿ ಮಾಡಲು ಮೀನಾ ಮೇಷ ಎಣಿಸುತ್ತಿದೆ. ಬಿಜೆಪಿ ದಲಿತ ವಿರೋಧಿಗಳಾಗಿದ್ದು, ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರ ಬಗ್ಗೆ ಕಾಳಜಿ ಇಲ್ಲದವರಾಗಿದ್ದಾರೆ. ಯಾವುದೇ ಸಮಿತಿಯ ವರದಿ ಇಲ್ಲದಿದ್ದರೂ ಸಾಮಾನ್ಯ ವರ್ಗದ ಬಡವರಿಗೆ ಒಂದೇ ದಿನದಲ್ಲಿ ಲೋಕಸಭೆ ಹಾಗೂ ರಾಜ್ಯ ಸಭೆಯಲ್ಲಿ ಅನುಮತಿ ನೀಡಿ ಶೇ.10ರಷ್ಟು ಮೀಸಲಾತಿ ನೀಡಿದ್ದಾರೆ. ಆದರೆ ಇವರು 2 ವರ್ಷದಿಂದ ವರದಿ ನೀಡಿದ್ದರೂ ಅವರಿಗೆ ಯಾಕೆ ನೀಡಿಲ್ಲ? ಎಂದು ಪ್ರಶ್ನಿಸಿದರು.





6 ಭಾರತ ಐಕ್ಯತಾ ಯಾತ್ರೆಯಿಂದ ಬಿಜೆಪಿ ಸರ್ಕಾರ ವಿಚಲಿತಗೊಂಡಿದ್ದು, ಇಂದಿನ ಪಾದಯಾತ್ರೆ ಬಳಿಕ ಮತ್ತಷ್ಟು ವಿಚಲಿತವಾಗಲಿದೆ. ಹೀಗಾಗಿ ಈ ಯಾತ್ರೆ ಹತ್ತಿಕ್ಕಲು ರಾಹುಲ್ ಗಾಂಧಿ ಅವರ ಸಿಬ್ಬಂದಿ ಹಾಗೂ ಪತ್ರಕರ್ತರ ಮೇಲೆ ಹಲ್ಲೆ ಮಾಡಿದ್ದಾರೆ. ಕೆಲವೆಡೆ ನಮ್ಮ ಪೋಸ್ಟರ್ ಕಿತ್ತುಹಾಕಿದರೆ, ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸುತ್ತಾರೆ. ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡುತ್ತಾರೆ. ಆದರೆ ಅವರ ಈ ಕುತಂತ್ರದಿಂದ ರಾಹುಲ್ ಗಾಂಧಿ ಅವರನ್ನಾಗಲಿ, ಸಮಾಜದ ಎಲ್ಲ ವರ್ಗದ ಜನರನ್ನಾಗಲಿ, ಈ ಯಾತ್ರೆಯನ್ನಾಗಲಿ ತಡೆಯಲು ಸಾಧ್ಯವಿಲ್ಲ. ಸುಳ್ಳು ಪ್ರಕರಣಗಳ ಮೂಲಕ ಡಿ.ಕೆ. ಶಿವಕುಮಾರ್ ಅವರನ್ನು ಕುಗ್ಗಿಸಲು ಸಾಧ್ಯವಿಲ್ಲ. ಕಾರ್ಯಕರ್ತರ ಆತ್ಮಸ್ಥೈರ್ಯ ಕುದಿಸಲು ಆಗುವುದಿಲ್ಲ. **9** – ರಣದೀಪ್ ಸಿಂಗ್ ಸುರ್ಜೇವಾಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ

ನಾಗಮೋಹನ್ ದಾಸ್ ಸಮಿತಿ ವರದಿ ಜತೆಗೆ ಹಿಂದುಳಿದ ವರ್ಗಗಳ ಆಯೋಗವೂ ಇದೆ. ಇದರ ಜತೆಗೆ ಸುಭಾಶ್ ಆಡಿ ಅವರ ಸಮಿತಿಯನ್ನು ಕಾನೂನು ಬಾಹಿರವಾಗಿ ಸಂವಿಧಾನ ಬಾಹಿರವಾಗಿ ರಚಿಸಿದೆ. ಈಗ ಒತ್ತಡ ಹೆಚ್ಚಾದ ಬಳಿಕ ಮುಖ್ಯಮಂತ್ರಿಗಳು ನಾಳೆ ಸರ್ವಪಕ್ಷಗಳ ಸಭೆ ಕರೆದಿದ್ದು, ನಾಗಮೋಹನ್ ದಾಸ್ ವರದಿ ಜಾರಿ ಆಗಬೇಕು ಎಂಬುದು ನಮ್ಮ ನಿಲುವು. ನಾವು ಸಾಮಾಜಿಕ ನ್ಯಾಯದ ಪರವಾಗಿದ್ದು, ಮೀಸಲಾತಿ ಹೆಚ್ಚಳ ಆಗಬೇಕು ಇದನ್ನು ನಾವು ನಾಳೆ ಸರ್ವಪಕ್ಷ ಸಭೆಯಲ್ಲಿ ಮಾಡುತ್ತೇವೆ ಎಂದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಪರಿಶಿಷ್ಟ ಜಾತಿ ಹಾಗೂ ಪಂಗಡದ ಜನರ ಮೀಸಲು ವಿಚಾರವಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದ ಸಮಿತಿ ರಚಿಸಿತ್ತು. ಪರಿಶಿಷ್ಟ ವರ್ಗದವರಿಗೆ ಪೂರ್ಣ ಪ್ರಮಾಣದ ರಕ್ಷಣೆ ಸಿಗುತ್ತಿಲ್ಲ ಎಂದು ಈ ಸಮಿತಿ ತನ್ನ ವರದಿಯಲ್ಲಿ ಹೇಳಿದ್ದು, ಅದರಲ್ಲಿ ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣ ಶೇ.3 ರಿಂದ ಶೇ.7 ರಷ್ಟು ಏರಿಕೆ ಮಾಡಬೇಕು ಎಂದು ಸ್ಪಷ್ಟವಾಗಿ ತಿಳಿಸಿದೆ. ಈ ಮೀಸಲಾತಿ ಹೆಚ್ಚಳ ವಿಚಾರವಾಗಿ ಹಲವು ತಿಂಗಳುಗಳಿಂದ ಈ ಸಮುದಾಯದ ಸ್ವಾಮೀಜಿಗಳು ಧರಣಿ ಮಾಡುತ್ತಿದ್ದರೂ ಬೊಮ್ಮಾಯಿ ಅವರ ಸರ್ಕಾರ ಈ ಬಗ್ಗೆ ಗಮನಹರಿಸುತ್ತಿಲ್ಲ. ಈ ವಿಚಾರವಾಗಿ ಸದನದಲ್ಲಿ ನಮ್ಮ ನಾಯಕರು ಪ್ರಸ್ತಾಪಿಸಿದರೆ ಅದಕ್ಕೆ ಉತ್ತರ ನೀಡುವುದಿಲ್ಲ. ಕಾರಣ, ಬಿಜೆಪಿ ಪರಿಶಿಷ್ಟ ವರ್ಗದವರ ವಿರೋಧಿಯಾಗಿದೆ. ಬೊಮ್ಮಾಯಿ ಅವರು ಈ ವಿಚಾರವಾಗಿ ಮತ್ತೆ ಸಮಿತಿ ರಚಿಸುತ್ತೇವೆ ಎಂಬ ನಾಟಕವನ್ನು ನಿಲ್ಲಿಸಲಿ. ಕಳೆದ ಎರಡೂವರೆ ವರ್ಷಗಳಿಂದ ಈ ಸಮಿತಿಯ ವರದಿ ನಿಮ್ಮ ಮುಂದೆಯೇ ಇದೆ. ಆದರೂ ಏನೂ ಮಾಡದೆ, ಈಗ ಚುನಾವಣೆ ಹತ್ತಿರ ಬಂದಿದೆ ಎಂಬ ಭಯಕ್ಕೆ ಮತ್ತೆ ಸಮಿತಿ ರಚನೆ ಎಂಬ ನೆಪ ಹೇಳುವುದನ್ನು ನಿಲ್ಲಿಸಿ ಎಂದು ಕಾಂಗ್ರೆಸ್ ಆಗ್ರಹಿಸುತ್ತದೆ ಎಂದರು.

ದಳಪತಿಗಳಿಗೆ ಮತ್ತೊಂದು ಶಾಕ್
ಮುಂದಿನ ಚುನಾವಣೆಗೆ ಸ್ಪರ್ಧೆ ಮಾಡಲ್ಲ ಎಂದ ಜೆಡಿಎಸ್ ಹಾಲಿ ಶಾಸಕ ವೀರಭದ್ರಯ್ಯ



ತುಮಕೂರು: ಕರ್ನಾಟಕ ವಿಧಾನಸಭೆ ಚುನಾವಣೆಗೆ ಇನ್ನೇನು ಆರೇಳು ತಿಂಗಳು ಬಾಕಿ ಇದ್ದು, ಆಗಲೇ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ರಾಜಕೀಯ ಮೇಲಾಟಗಳು ನಡೆದಿವೆ. ಆದರೆ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆ ಜೆಡಿಎಸ್‌ಗೆ ಒಂದೊಂದೇ ಸಂಕಷ್ಟಗಳು ಎದುರಾಗುತ್ತಿವೆ. ಕೆಲ ಶಾಸಕರು ಪಕ್ಷ ತೊರೆದು ಕಾಂಗ್ರೆಸ್ ಸೇರಲು ಸಜ್ಜಾಗಿದ್ದಾರೆ. ಇನ್ನು ಕೆಲ ಶಾಸಕರು ಪಕ್ಷದ ಕಾರ್ಯ ಚಟುವಟಿಕೆಗಳಿಂದ ಅಂತರ ಕಾಯ್ದುಕೊಂಡಿದ್ದಾರೆ. ಇದರ ಮಧ್ಯೆ ಇದೀಗ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಮಧುಗಿರಿ ಕ್ಷೇತ್ರದ ಜೆಡಿಎಸ್ ಶಾಸಕ ವೀರಭದ್ರಯ್ಯ ಘೋಷಣೆ ಮಾಡಿದ್ದಾರೆ. ಇದು ಒಂದು ರೀತಿಯಲ್ಲಿ ಜೆಡಿಎಸ್‌ಗೆ ಬಿಗ್ ಶಾಕ್ ಕೊಟ್ಟಂತಾಗಿದೆ.


IAS ಅಧಿಕಾರಿಯಾಗಿದ್ದ ವೀರಭದ್ರಯ್ಯನವರು 2013ರ ವಿಧಾನಸಭಾ ಚುನಾವಣೆ ವೇಳೆಗೆ ರಾಜೀನಾಮೆ ನೀಡಿ ಜೆಡಿಎಸ್‌ನಿಂದ ಕಣಕ್ಕಿಳಿದಿದ್ದರು. ಆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ.ಎನ್ ರಾಜಣ್ಣ ಎದುರು ಸೋಲುಂಡಿದ್ದರು. ಬಳಿಕ 2018ರ ಚುನಾವಣೆಯಲ್ಲಿ ರಾಜಣ್ಣ ಅವರನ್ನು ಮಣಿಸಿ ಸೇಡು ತೀರಿಸಿಕೊಂಡಿದ್ದರು.

ಫ್ರೆಂಚ್ ಲೇಖಕಿ ಅನ್ನಿ ಎರ್ನಾಕ್ಸ್‌ಗೆ ನೊಬೆಲ್ ಸಾಹಿತ್ಯ ಪ್ರಶಸ್ತಿ



ನವದೆಹಲಿ: 2022ನೇ ಸಾಲಿನ ಸಾಹಿತ್ಯ ವಿಭಾಗದ ನೊಬೆಲ್ ಪ್ರಶಸ್ತಿಗೆ ಫ್ರೆಂಚ್‌ನ ಬರಹಗಾರ್ತಿ ಅನ್ನಿ ಎರ್ನಾಕ್ಸ್ ಭಾಜನರಾಗಿದ್ದಾರೆ. 82 ವರ್ಷದ ಅನ್ನಿ ಎರ್ನಾಕ್ಸ್, 30ಕ್ಕೂ ಹೆಚ್ಚು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಬರವಣಿಗೆಯಲ್ಲಿ ಎರ್ನಾಕ್ಸ್ ಲಿಂಗ, ಭಾಷೆ ಮತ್ತು ವರ್ಗಕ್ಕೆ ಸಂಬಂಧಿಸಿದಂತೆ ಬಲವಾದ ಅಸಮಾನತೆಗಳಿಂದ ಗುರುತಿಸಲಾದ ಜೀವನವನ್ನು ಸ್ಥಿರವಾಗಿ ಮತ್ತು ವಿವಿಧ ಕೋನಗಳಿಂದ ಶೋಧಿಸುತ್ತಾರೆ ಎಂದು ನೊಬೆಲ್ ಸಮಿತಿ ಹೇಳಿದೆ. ಸ್ವೀಡಿಷ್ ಅಕಾಡೆಮಿಯ ಖಾಯಂ ಕಾರ್ಯದರ್ಶಿ ಮ್ಯಾಟ್ಸ್ ಮಾಲ್ಮ್ ನೊಬೆಲ್ ಸಾಹಿತ್ಯ ವಿಭಾಗದ ವಿಜೇತರನ್ನು ಅ.6ರಂದು ಸ್ವೀಡನ್‌ನ ಸ್ಟಾಕ್‌ಹೋಮ್‌ನಲ್ಲಿ ಘೋಷಿಸಿದರು. ಎರ್ನಾಕ್ಸ್ ತಮ್ಮ ಬರವಣಿಗೆ ಮೂಲಕ ಸಾಮಾಜಿಕ ಅಸಮಾನತೆಯ ಬಗ್ಗೆ ನಮ್ಮ ಕಣ್ಣುಗಳನ್ನು ತೆರೆಸುತ್ತಾರೆ ಎಂದು ನೊಬೆಲ್ ಸಮಿತಿ ಪ್ರಶಂಸೆ ವ್ಯಕ್ತಪಡಿಸಿದೆ. ಸ್ವೀಡಿಷ್ ಅಕಾಡೆಮಿಯಿಂದ ನೀಡಲಾಗುವ ಈ ಪ್ರಶಸ್ತಿ 10 ಮಿಲಿಯನ್ ಸ್ವೀಡಿಷ್ ಕ್ರೌನ್ಸ್ ($914,704) ಮೌಲ್ಯ ಹೊಂದಿದೆ.

ಕಾಂಗ್ರೆಸ್ ಅಧ್ಯಕ್ಷೀಯ ಚುನಾವಣೆ: ಹಲವು ಪಿಸಿಸಿಗಳಿಂದ ಮಲ್ಲಿಕಾರ್ಜುನ ಖರ್ಗೆಗೆ ಬಹಿರಂಗ ಬೆಂಬಲ




ನವದೆಹಲಿ: ಕಾಂಗ್ರೆಸ್ ಅಧ್ಯಕ್ಷೀಯ ಚುನಾವಣೆಗೂ ಮುನ್ನ ಪಕ್ಷದಲ್ಲಿ ಬಿರುಕು ಕಾಣಿಸಿಕೊಂಡಿದ್ದು, ಹಲವು ಪ್ರದೇಶ ಕಾಂಗ್ರೆಸ್ ಸಮಿತಿಗಳು (ಪಿಸಿಸಿ) ಶಶಿ ತರೂರ್ ಅವರ ವಿರುದ್ಧ ಸ್ಪರ್ಧಿಸಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬೆಂಬಲ ಘೋಷಿಸಿವೆ.

ತಿರುವನಂತಪುರಂ ಸಂಸದ ಶಶಿ ತರೂರ್ ಅವರು ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯಲ್ಲಿ ಹಿರಿಯ ನಾಯಕರ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಕಣಕ್ಕಿಳಿದಿದ್ದು, ಅಕ್ಟೋಬರ್ 17 ರಂದು ಚುನಾವಣೆ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಅಕ್ಟೋಬರ್ 8 ಕೊನೆಯ ದಿನವಾಗಿದೆ. ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರವು, ಪಕ್ಷದ ಯಾವುದೇ ಪದಾಧಿಕಾರಿಗಳು ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪರ ಪ್ರಚಾರ ಮಾಡದಂತೆ ಮಾರ್ಗಸೂಚಿಗಳನ್ನು ಹೊರಡಿಸಿದ್ದರೂ, ತೆಲಂಗಾಣ ಮತ್ತು ಕೇರಳದ ಪಿಸಿಸಿಗಳು ಖರ್ಗೆ ಅವರಿಗೆ ಬಹಿರಂಗವಾಗಿ ಬೆಂಬಲ ಘೋಷಿಸಿವೆ.

ಸೋಮವಾರ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ ಸಿಇಸಿ, ಅಭ್ಯರ್ಥಿಗಳ ಪರ ಪ್ರಚಾರ ಮಾಡಲು ಬಯಸುವವರು ತಮ್ಮ ಸಾಂಸ್ಥಿಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಹೇಳಿದೆ. ತೆಲಂಗಾಣ ಪಿಸಿಸಿ ಸೋಮವಾರ ತರೂರ್ ಅವರನ್ನು ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಒತ್ತಾಯಿಸಿದರೆ, ಕರ್ನಾಟಕ ಪಿಸಿಸಿ ನಾಯಕರು ಖರ್ಗೆ ಅವರ ಉಮೇದುವಾರಿಕೆಗೆ ಬೆಂಬಲ ನೀಡಿದ್ದಾರೆ. ಈ ಕುರಿತು ಮಾಧ್ಯಮಗಳ ಜೊತೆ ಮಾತನಾಡಿದ ಅಸ್ಸಾಂನ ಹಿರಿಯ ಕಾಂಗ್ರೆಸ್ ನಾಯಕರೊಬ್ಬರು, ಖರ್ಗೆ ಅವರಿಗೆ ಮತ ಹಾಕುವಂತೆ ಹೈಕಮಾಂಡ್‌ನಿಂದ ಯಾವುದೇ ಅಧಿಕೃತ ಆದೇಶ ಬಂದಿಲ್ಲವಾದರೂ, ಮೇಲಿನಿಂದ ಬಂದ ಸಂಕೇತಗಳು ಅವರ ಆದ್ಯತೆಯನ್ನು ಸೂಚಿಸುತ್ತವೆ ಎಂದು ಹೇಳಿದ್ದಾರೆ. ನಮ್ಮ ಬಹುತೇಕ ಪ್ರತಿನಿಧಿಗಳು ಖರ್ಗೆ ಅವರು ಹೈಕಮಾಂಡ್‌ನ ಆಯ್ಕೆ ಎಂದು ತಿಳಿದಿರುವುದರಿಂದ ಅವರಿಗೆ ಬೆಂಬಲ ನೀಡುತ್ತಿದ್ದಾರೆ. ನಾಮಪತ್ರ ಸಲ್ಲಿಸಿದ ದಿನದಂದು ಹಿರಿಯ ನಾಯಕರು ಅವರ ಸುತ್ತ ಒಟ್ಟುಗೂಡಿದ ರೀತಿಯಿಂದ ಇದು ಸ್ಪಷ್ಟವಾಗಿದೆ ಎಂದು ಅವರು ತಿಳಿಸಿದ್ದಾರೆ. ಇನ್ನು, ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ತರೂರ್ ಮನವೊಲಿಸುವಂತೆ ರಾಹುಲ್ ಗಾಂಧಿ ಅವರಿಗೆ ಕೇಳಿಕೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಕೆಲವು ಪಕ್ಷದ ನಾಯಕರು ನನ್ನ ನಾಮಪತ್ರ ಹಿಂತೆಗೆದುಕೊಳ್ಳುವಂತೆ ಮನವೊಲಿಸಲು ಕೇಳಿಕೊಂಡಿದ್ದಾರೆ ಎಂದು ರಾಹುಲ್ ಗಾಂಧಿ ನನಗೆ ಹೇಳಿದರು. ಆದರೆ ಅವರು ಹಾಗೆ ಮಾಡಲು ನಿರಾಕರಿಸಿದರು. ನಾನು ಚುನಾವಣೆಗೆ ಸ್ಪರ್ಧಿಸಬೇಕು ಎಂದರು. ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ನಡೆಸಬೇಕು ಎಂದು 10 ವರ್ಷಗಳಿಂದ ಹೇಳುತ್ತಾ ಬಂದಿದ್ದನ್ನು ನಾನು ಅವರಿಗೆ ನೆನಪಿಸಿದೆ ಎಂದು ಕೇರಳದಲ್ಲಿ ಚುನಾವಣಾ ಪ್ರಚಾರದಲ್ಲಿರುವ ತರೂರ್ ಹೇಳಿದ್ದಾರೆ.

ಅಲ್ಪಸಂಖ್ಯಾತರಿಗೆ ಭಾರತದಲ್ಲಿ ಅಪಾಯವಿಲ್ಲ: ಮೋಹನ್ ಭಾಗ್ವತ್



ನಾಗ್ಪುರ, ಅ.6- ಹಿಂದೂಗಳಿಂದಾಗಿ ಭಾರತದಲ್ಲಿ ಅಲ್ಪಸಂಖ್ಯಾತರಿಗೆ ಅಪಾಯವಿದೆ ಎಂದು ಹೇಳುವ ಮೂಲಕ ಕೆಲವರು ಹೆದರಿಸುವ ಕೆಲಸ ಮಾಡುತ್ತಿದ್ದಾರೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘ ಚಾಲಕ ಮೋಹನ್ ಭಾಗ್ವತ್ ಹೇಳಿದ್ದಾರೆ.

ಅವರು ನಾಗ್ಪುರದಲ್ಲಿ ತಮ್ಮ ವಾರ್ಷಿಕ ವಿಜಯ ದಶಮಿ ಭಾಷಣದಲ್ಲಿ, ಸಂಘವು ಸಹೋದರತ್ವ ಸೌಹಾರ್ದತೆ ಮತ್ತು ಶಾಂತಿಯ ಪರವಾಗಿ ನಿಲ್ಲಲು ನಿರ್ಧರಿಸುತ್ತದೆ. ಹಿಂದೂ ರಾಷ್ಟ್ರ ಅಥವಾ ಹಿಂದೂ ರಾಷ್ಟ್ರದ ಪರಿಕಲ್ಪನೆಯನ್ನು ಈಗ ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಅನೇಕ ಜನರು ಈ ಪರಿಕಲ್ಪನೆಯನ್ನು ಒಪ್ಪುತ್ತಾರೆ. ಆದರೆ ಹಿಂದೂ ಪದವನ್ನು ವಿರೋಧಿಸುತ್ತಾರೆ ಮತ್ತು ಅವರು ಇತರ ಪದಗಳನ್ನು ಬಳಸಲು ಬಯಸುತ್ತಾರೆ ಎಂದು ಅವರು ಹೇಳಿದರು. ನಮಗೆ ಅದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಪರಿಕಲ್ಪನೆಯ ಸ್ಪಷ್ಟತೆಗಾಗಿ, ನಾವು ನಮಗಾಗಿ ಹಿಂದೂ ಪದವನ್ನು ಬಳಸಿಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥರು ಸಮಾಜವನ್ನು ವಿಭಜಿಸುವ ಪ್ರಯತ್ನಗಳು ನಡೆಯುತ್ತಿರುವಾಗ, ನಾವು ಒಟ್ಟಿಗೆ ಇರಬೇಕು ಎಂದು ಒತ್ತಿ ಹೇಳಿದ್ದಾರೆ. ಆರ್‌ಎಸ್‌ಎಸ್ ಬಗ್ಗೆ ತಪ್ಪು ಮಾಹಿತಿ ನೀಡಲಾಗುತ್ತಿದೆ ಎಂದು ಹೇಳಿರುವ ಮೋಹನ್ ಭಾಗ್ವತ್ ಅವರು, ಭಯೋತ್ಪಾದಕ ಶಕ್ತಿಗಳಿಂದ ದೇಶವನ್ನು ರಕ್ಷಿಸಲು ನಮ್ಮ ಸಂಘಟನೆ ಕೆಲಸ ಮಾಡುತ್ತದೆ. ಇನ್ನೊಬ್ಬರ ಮೇಲೆ ಪ್ರಾಬಲ್ಯ ಸಾಧಿಸಬೇಕು ಎಂದು ಎಂದಿಗೂ ಬಯಸಿಲ್ಲ ಎಂದರು.

ನಾವು ಶಕ್ತಿಯನ್ನು ಪಡೆಯಲು ಯಾವುದನ್ನಾದರೂ ವಶಪಡಿಸಿಕೊಳ್ಳಬೇಕು ಎಂದು ಬಯಸುವುದಿಲ್ಲ.

ಉದಯಪುರ ಘಟನೆಯ ನಂತರ, ಮುಸ್ಲಿಮರ ಕೆಲವು ಪ್ರಮುಖ ವ್ಯಕ್ತಿಗಳು ಘಟನೆಯ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಈ ರೀತಿಯ ಪ್ರತಿಭಟನೆಗಳು ಮುಸ್ಲಿಂ ಸಮಾಜದೊಳಗೆ ಒಂದು ಪ್ರತ್ಯೇಕ ವಿದ್ಯಮಾನವಾಗಬಾರದು. ಬದಲಿಗೆ ಅದು ಅವರ ದೊಡ್ಡ ವರ್ಗಗಳ ಸ್ವರೂಪವಾಗಬೇಕು. ಹತ್ಯೆಗಳಿಗೆ ಇಡೀ ಸಮುದಾಯವನ್ನು ದೂಷಿಸಲಾಗುವುದಿಲ್ಲ ಮತ್ತು ಇಂತಹ ಘಟನೆಗಳ ವಿರುದ್ಧ ಎಲ್ಲರೂ ಧ್ವನಿ ಎತ್ತಬೇಕಾಗಿದೆ ಎಂದು ಭಾಗ್ವತ್ ಹೇಳಿದ್ದಾರೆ.

ಜನಸಂಖ್ಯಾ ನೀತಿ ಅಗತ್ಯವಿದೆ: ಹೆಚ್ಚುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸಲು ಭಾರತವು ಸಮಗ್ರ ನೀತಿಯನ್ನು ಹೊಂದಿರಬೇಕು ಮತ್ತು ಅದು ಎಲ್ಲಾ ಸಮುದಾಯಗಳಿಗೆ ಸಮಾನವಾಗಿ ಅನ್ವಯಿಸಬೇಕು ಎಂದು ಭಾಗ್ವತ್ ಹೇಳಿದರು. 50 ವರ್ಷಗಳ ಹಿಂದೆ ಇದರ ಅಸಮತೋಲನ ಉಂಟಾದಾಗ, ನಾವು ಗಂಭೀರ ಪರಿಣಾಮಗಳನ್ನು ಅನುಭವಿಸಿದ್ದೇವೆ. ಇದು ನಮಗೆ ಮಾತ್ರ ಸಂಭವಿಸಿಲ್ಲ. ಇಂದಿನ ಸಮಯದಲ್ಲಿ, ಪೂರ್ವ ಟಿಮೋರ್, ದಕ್ಷಿಣ ಸುಡಾನ್ ಮತ್ತು ಕೊಸೊವೊದಂತಹ ಹೊಸ ದೇಶಗಳನ್ನು ರಚಿಸಲಾಗಿದೆ. ಆದ್ದರಿಂದ, ಜನಸಂಖ್ಯೆಯು ಅಸಮತೋಲನ ಉಂಟಾದಾಗ, ಹೊಸ ದೇಶಗಳು ಸೃಷ್ಟಿಯಾಗುತ್ತವೆ. ದೇಶಗಳು ವಿಭಜನೆಗೊಂಡಿವೆ. ಸೀಮಿತ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಜನಸಂಖ್ಯಾ ನೀತಿಯನ್ನು ರೂಪಿಸಬೇಕು ಎಂದು ಭಾಗವತ್ ಹೇಳಿದರು. ಭಾರತದಲ್ಲಿ 57 ಕೋಟಿ ಯುವ ಜನಸಂಖ್ಯೆಯೊಂದಿಗೆ, ನಾವು ಮುಂದಿನ 30 ವರ್ಷಗಳವರೆಗೆ ಯುವ ರಾಷ್ಟ್ರವಾಗಿ ಉಳಿಯುತ್ತೇವೆ ಎಂದು ಅವರು ಹೇಳಿದರು. ಆದಾಗ್ಯೂ, 50 ವರ್ಷಗಳ ನಂತರ ಭಾರತಕ್ಕೆ ಏನಾಗುತ್ತದೆ? ಜನಸಂಖ್ಯೆಯನ್ನು ಪೋಷಿಸಲು ನಮಗೆ ಸಾಕಷ್ಟು ಆಹಾರವಿದೆಯೇ? ಎಂದು ಪ್ರಶ್ನೆ ಮಾಡಿದ್ದಾರೆ.

ಎಲ್ಲರಿಗೂ ಸರ್ಕಾರಿ ನೌಕರಿಯೇ ಬೇಕು ಎಂದರೆ ಕಷ್ಟ

ನಾಗ್ಪುರ, ಅ.6- ದೇಶದಲ್ಲಿ ನಿರುದ್ಯೋಗ ಸಮಸ್ಯೆ ಇರುವುದು ನಿಜವಾದರೂ, ಎಲ್ಲರೂ ನಮಗೆ ಸರ್ಕಾರಿ ನೌಕರಿಯೇ ಬೇಕು ಎಂದು ಬೇಡಿಕೆ ಇಡುವುದು ಸರಿಯಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗ್ವತ್ ಅಭಿಪ್ರಾಯಪಟ್ಟಿದ್ದಾರೆ. ಎಲ್ಲರೂ ಸರ್ಕಾರಿ ನೌಕರಿ ಬೇಕು ಎಂದರೆ ಯಾವುದೇ ಸರ್ಕಾರಕ್ಕೂ ಅದನ್ನು ಪೂರೈಸುವುದು ಕಷ್ಟವಾಗಲಿದೆ. ಸಮಾಜದಲ್ಲಿ, ಸರ್ಕಾರಿ ಮತ್ತು ಖಾಸಗಿಯಾಗಿ ಗರಿಷ್ಠ ಶೇ.10 ರಿಂದ ಶೇ. 30ರಷ್ಟು ಉದ್ಯೋಗಗಳು ಅಸ್ತಿತ್ವದಲ್ಲಿವೆ. ಇದನ್ನು ಹೊರತುಪಡಿಸಿ ಉಳಿದವರು ತಮ್ಮ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಕೆಲಸ ಮಾಡಬೇಕು ಎಂದು ಮೋಹನ್ ಭಾಗವತ್ ಸಲಹೆ ನೀಡಿದರು.

ಜನಸಂಖ್ಯೆಗೆ ಸಂಪನ್ಮೂಲಗಳು ಬೇಕಾಗುತ್ತವೆ. ಸಂಪನ್ಮೂಲಗಳನ್ನು ಕೊರತೆಯ ನಡುವೆ ಜನಸಂಖ್ಯೆ ಬೆಳೆದರೆ ಅದು ಖಂಡಿತವಾಗಿಯೂ ಸಮಾಜಕ್ಕೆ ಹೊರೆಯಾಗುತ್ತದೆ. ಜನಸಂಖ್ಯೆಯನ್ನು ಆಸ್ತಿ ಎಂದು ಪರಿಗಣಿಸುವ ಮತ್ತೊಂದು ದೃಷ್ಟಿಕೋನವಿದೆ. ಎರಡೂ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಾವು ಜನಸಂಖ್ಯಾ ನೀತಿಯನ್ನು ರೂಪಿಸಬೇಕಿದೆ ಎಂದು ಮೋಹನ್ ಭಾಗ್ವತ್ ನುಡಿದರು. ವೃತ್ತಿಜೀವನಕ್ಕೆ ಇಂಗ್ಲಿಷ್ ಮುಖ್ಯ ಎಂಬುದು ಸುಳ್ಳು ನಂಬಿಕೆ. ಹೊಸ ಶಿಕ್ಷಣ ನೀತಿಯು ವಿದ್ಯಾರ್ಥಿಗಳು ಹೆಚ್ಚು ಸುಸಂಸ್ಕೃತರಾಗಲು ಕಾರಣವಾಗಬೇಕು. ನಮ್ಮ ಭವಿಷ್ಯದ ಮಕ್ಕಳು ದೇಶ ಪ್ರೇಮದಿಂದ ಪ್ರೇರೇಪಿಸಲ್ಪಟ್ಟ ಉತ್ತಮ ಮನುಷ್ಯರಾಗಬೇಕು. ಇದು ಪ್ರತಿಯೊಬ್ಬರ ಬಯಕೆಯಾಗಿದೆ. ಸಮಾಜ ಇದನ್ನು ಸಕ್ರಿಯವಾಗಿ ಬೆಂಬಲಿಸಬೇಕು ಎಂದು ಮೋಹನ್ ಭಾಗ್ವತ್ ಕರೆ ನೀಡಿದರು.

ಭಾರತದ ಏಕತೆ ಮತ್ತು ಪ್ರಗತಿಗೆ ಪ್ರತಿಕೂಲವಾದ ಶಕ್ತಿಗಳಿಂದ ನಮ್ಮ ಸನಾತನ ಧರ್ಮಕ್ಕೆ ಅಡ್ಡಿಯುಂಟು ಮಾಡಲಾಗುತ್ತಿದೆ. ಅವರು ಭಾರತದ ವಿರುದ್ಧ ನಕಲಿ ನಿರೂಪಣೆಗಳನ್ನು ಹರಡುತ್ತಿದ್ದಾರೆ. ಅರಾಜಕತೆಯನ್ನು ಪ್ರೋತ್ಸಾಹಿಸುವ ಮೂಲಕ, ಅಪರಾಧ ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಭಯೋತ್ಪಾದನೆ, ಸಂಘರ್ಷ ಮತ್ತು ಸಾಮಾಜಿಕ ಅಶಾಂತಿಯನ್ನು ಹುಟ್ಟುಹಾಕುವುದೇ ಈ ದುಷ್ಟ ಶಕ್ತಿಗಳ ಕೆಲಸವಾಗಿದೆ ಎಂದು ಮೋಹನ್ ಭಾಗ್ವತ್ ಅಸಮಾಧಾನ ಹೊರಹಾಕಿದರು.

ದೈವಿ ಲೋಕವನ್ನೇ ಧರೆಗಿಳಿಸಿದ ದಶಮಂಟಪದ ಶೋಭಾಯಾತ್ರೆ



ಮೊದಲನೇ ಬಹುಮಾನ ಪಡೆದ ಮಂಟಪ

ಬನ್ನಿ ಕಡಿಯುವ ಮೂಲಕ ವೈಭವದ ದಸರೆಗೆ ತೆರೆ

ಮಡಿಕೇರಿ, ಅ.6– ಮಡಿಕೇರಿ ದಸರಾ ಜನೋತ್ಸವದ ವೈಭವಯುತ ದಶಮಂಟಪ ಶೋಭಾಯಾತ್ರೆಗೆ ಗುರುವಾರ ಬೆಳಗೆ ಬನ್ನಿ ಕಡಿಯುವ ಮೂಲಕ ತೆರೆ ಬಿದ್ದಿದೆ. ಮಂಜು ಮುಸುಕಿದ ವಾತಾವರಣ ನಡುವೆ ದೈವೀ ಲೋಕವನ್ನು ಧರೆಗಿಳಿಸುವ ಮೂಲಕ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಪ್ರೇಕ್ಷಕರ ಮನಸೂರೆಗೊಳಿಸುವಲ್ಲಿ ದಶಮಂಟಪಗಳು ಯಶಸ್ವಿಯಾದವು.

ಇದೇ ಮೊದಲ ಬಾರಿಗೆ ದಶಮಂಟಪಗಳು ನಿಗದಿತ ಸಮಯಕ್ಕೆ ಸರಿಯಾಗಿ ಪ್ರದರ್ಶನ ನೀಡುವ ಮೂಲಕ ತೀರ್ಪುಗಾರರ ಮೆಚ್ಚುಗೆಗೂ ಪಾತ್ರವಾದವು. ಮಾತ್ರವಲ್ಲದೇ, ಜನೋತ್ಸವವಾಗಿ ಆಚರಿಸಲ್ಪಡುವ ದಶಮಂಟಪಗಳ ಶೋಭಾಯಾತ್ರೆಯಲ್ಲಿ ಪ್ರೇಕ್ಷಕರಿಗೂ ನಿರಾಶೆಯಾಗದಂತೆ ಕನಿಷ್ಠ 4 ಪ್ರದರ್ಶನಗಳನ್ನು ನೀಡುವ ಮೂಲಕ ಅವರ ಮನಗೆಲ್ಲುವಲ್ಲಿಯೂ ಸಫಲವಾದವು.

ಬುಧವಾರ ರಾತ್ರಿ 9 ಗಂಟೆಗೆ ಪೌರಾಣಿಕ ಹಿನ್ನೆಲೆ ಹೊಂದಿರುವ ಪೇಟೆ ಶ್ರೀರಾಮ ಮಂದಿರ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಶೋಭಾಯಾತ್ರೆ ನಡೆಸುವ ಮೂಲಕ ಶಕ್ತಿ ದೇವತೆಗಳ ಮಂಟಪಗಳು ಹಾಗೂ ಇನ್ನುಳಿದ ಮಂಟಪಗಳನ್ನು ಶೋಭಾಯಾತ್ರೆಗೆ ಆಹ್ವಾನಿಸಿತು. ಗುರುವಾರ ಬೆಳಗಿನ ಜಾವ 7 ಗಂಟೆಯವರೆಗೂ ದಶಮಂಟಪಗಳು ಶೋಭಾಯಾತ್ರೆಯ ಮೂಲಕ ಬನ್ನಿ ಮಂಟಪಕ್ಕೆ ತೆರಳಿ ಬನ್ನಿ ಕಡಿದು ದಸರಾ ಉತ್ಸವಕ್ಕೆ ತೆರೆ ಎಳೆದವು.

ಬಹುಮಾನ: ದಶಮಂಟಪಗಳ ಶೋಭಾಯಾತ್ರೆ ಬಹುಮಾನಕ್ಕಾಗಿ ಒಟ್ಟು 4 ವಿಭಾಗಗಳನ್ನು ಅಳವಡಿಸಲಾಗಿತ್ತು ಈ ಪೈಕಿ ಶ್ರೀಕೋಟೆ ಮಹಾಗಣಪತಿ ದೇವಾಲಯದ 'ಮಹಾಗಣಪತಿಗೆ ಸಿಂಧೂರ ಗಣಪತಿ ನಾಮ ಪ್ರಾಪ್ತಿ' ಎಂಬ ಕಥಾ ಸಾರಾಂಶವನ್ನು ಒಳಗೊಂಡಿದ್ದ ಮಂಟಪ 82 ಅಂಕಗಳನ್ನು ಪಡೆದುಕೊಂಡು ಮೊದಲ ಸ್ಥಾನ ಅಲಂಕರಿಸಿತು.

'ಭೂಲೋಕ ರಕ್ಷಣೆಗಾಗಿ ಪಾರ್ವತಿಯ ಶಾಖಾಂಭರಿ ರೂಪ' ಎಂಬ ಕಥಾಭಾಗವನ್ನು ಮಂಟಪದಲ್ಲಿ ಅಳವಡಿಸಿಕೊಂಡು ಶೋಭಾಯಾತ್ರೆ ನಡೆಸಿದ್ದ ಶ್ರೀ ದಂಡಿನ ಮಾರಿಯಮ್ಮ ದೇವಾಲಯ ಮಂಟಪ 79 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದುಕೊಂಡಿತು.

'ಸೀತಾಪಹರಣ ರಾವಣನ ಸಂಹಾರ' ಎಂಬ ಶ್ರೀಕೋಟೆ ಮಾರಿಯಮ್ಮ ದೇವಾಲಯ ಹಾಗೂ 'ಅಂಧಕಾಸುರನ ವಧೆ' ಎಂಬ ಪೌರಾಣಿಕ ಕಥಾ ಹಂದರವನ್ನು ಹೊಂದಿದ್ದ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ಮಂಟಪಗಳು ತಲಾ 78 ಅಂಕಗಳನ್ನು ಪಡೆಯುವ ಮೂಲಕ 3ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡವು.





ಮೂರನೇ ಬಹುಮಾನ ಪಡೆದ ಮಂಟಪಗಳು.

ನಗರದ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ಗುರುವಾರ ಬೆಳಗಿನ ಜಾವ ನಡೆದ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಶಾಸಕ ಕೆ.ಜಿ. ಬೋಪಯ್ಯ ಅವರು ಮಂಟಪ ಸಮಿತಿಗಳಿಗೆ ಬಹುಮಾನ ವಿತರಿಸಿದರು. ಮೊದಲನೇ ಬಹುಮಾನವಾಗಿ 24 ಗ್ರಾಂ ಚಿನ್ನದ ನಾಣ್ಯ ಒಳಗೊಂಡ ಪಾರಿತೋಷಕ, 2ನೇ ಬಹುಮಾನವಾಗಿ 20 ಗ್ರಾಂ ಹಾಗೂ 3ನೇ ಬಹುಮಾನವಾಗಿ 16 ಗ್ರಾಂ ಚಿನ್ನದ ಪಾರಿತೋಷಕಗಳನ್ನು ದಶಮಂಟಪಗಳಿಗೆ ವಿತರಿಸಲಾಯಿತು. ಬಹುಮಾನ ಪಡೆದ ಮಂಟಪಗಳ ಸಮಿತಿಯ ನೂರಾರು ಸದಸ್ಯರು ವೇದಿಕೆ ಮೇಲೇರಿ ಬಹುಮಾನ ಸ್ವೀಕರಿಸಿ ಸಂಭ್ರಮಿಸಿದರು.



ಎರಡನೇ ಬಹುಮಾನ ಪಡೆದ ಮಂಟಪ

ಇಂದು ಕೊಡವ ಪಡಿಪು ಪಾಠ ಪುಸ್ತಕ ಬಿಡುಗಡೆ

ಕೊಡವ ಭಾಷೆ ಕಲಿಯುವವರಿಗೆ ಪುಸ್ತಕದಿಂದ ಅನುಕೂಲ

ಮಡಿಕೇರಿ, ಅ.6–ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ನಾಳೆ(ಅ.7) ರಂದು ಪೊನ್ನಂಪೇಟೆ ಕೊಡವ ಸಮಾಜದ ಸಹಯೋಗದೊಂದಿಗೆ ಪೊನ್ನಂಪೇಟೆ ಕೊಡವ ಸಮಾಜದಲ್ಲಿ 'ಕೊಡವ ಪಡಿಪು ಪಾಠ ಪುಸ್ತಕ' ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಕೊಡವ ಪಡಿಪು ಪಾಠ ಪುಸ್ತಕ–02,03,04,05 ಬಿಡುಗಡೆಗೊಳ್ಳಲಿದೆ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ.ಅಮ್ಮಾಟಂಡ ಪಾರ್ವತಿ ಅಪ್ಪಯ್ಯ ಅವರು ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಪೊನ್ನಂಪೇಟೆ ಕೊಡವ ಸಮಾಜದ ಅಧ್ಯಕ್ಷರಾದ ಕಾಳಿಮಾಡ ಮೋಟಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಚೆರಿಯಪಂಡ ರಾಜ ನಂಜಪ್ಪ, ಸಮಾಜ ಸೇವಕ ಮಾಚಿಮಾಡ ರವೀಂದ್ರ, ಪೊನ್ನಂಪೇಟೆ ಕೊಡವ ಸಮಾಜದ ಮಾಜಿ ಅಧ್ಯಕ್ಷರಾದ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ, ಕೊಡಗು ಹೆಗ್ಗಡೆ ಸಮಾಜದ ನಿರ್ದೇಶಕರಾದ ಪಡಿಞರಂಡ ಪ್ರಭುಕುಮಾರ್ ಅವರು ಭಾಗವಹಿಸಲಿದ್ದಾರೆ.

ಕೊಡವ ಪಡಿಪು ಪಾಠ ಪುಸ್ತಕವನ್ನು 2ನೇ, 3ನೇ, 4ನೇ, 5ನೇ ತರಗತಿಗಳಿಗೆ ಬೋಧಿಸಬಹುದಾಗಿದ್ದು, ಮಡಿಕೇರಿ, ವಿರಾಜಪೇಟೆ, ಸೋಮವಾರಪೇಟೆ, ಪೊನ್ನಂಪೇಟೆ, ಕುಶಾಲನಗರ ತಾಲ್ಲೂಕಿನ ಶಾಲೆಗಳಲ್ಲಿ ಕೊಡವ ಭಾಷೆಯನ್ನು ಸ್ವಇಚ್ಛೆಯಿಂದ ಕಲಿಯಲು ಆಸಕ್ತಿಯುಳ್ಳ ಮಕ್ಕಳಿಗೆ ಈ ಪಾಠ ಪುಸ್ತಕಗಳನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಆದ್ದರಿಂದ ಶಾಲೆಯ ಉಪನ್ಯಾಸಕರು ಅಕ್ಟೋಬರ್, 07 ರಂದು ಪೊನ್ನಂಪೇಟೆ ಕೊಡವ ಸಮಾಜದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಿ "ಕೊಡವ ಪಡಿಪು ಪಾಠ ಪುಸ್ತಕ–02, 03, 04, 05 ನ್ನು ಪಡೆದುಕೊಳ್ಳುವಂತೆ ತಿಳಿಸಿದೆ.

ಕಲಿಯಲು ಇಚ್ಛಿಸುವ ಮಕ್ಕಳ ಮಾಹಿತಿಯನ್ನು ಪತ್ರಮುಖೇನ ಸೂಚಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ದೂ.ಸಂ.08272–229074ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಕೊಡವ ಅಕಾಡೆಮಿ ಅಧ್ಯಕ್ಷ ಡಾ.ಅಮ್ಮಾಟಂಡ ಪಾರ್ವತಿ ಅಪ್ಪಯ್ಯ ಅವರು ತಿಳಿಸಿದ್ದಾರೆ.

'ಅಮೃತ ಜ್ಯೋತಿ' ಯೋಜನೆ ಸದುಪಯೋಗಕ್ಕೆ ಮನವಿ

ಮಡಿಕೇರಿ, ಅ.6– ಕೊಡಗು ಜಿಲ್ಲಾ ವ್ಯಾಪ್ತಿಯ ಎಲ್‌ಟಿ2(ಎ) ಗೃಹ ಬಳಕೆ ಜಕಾತಿಯಲ್ಲಿ ವಿದ್ಯುತ್ ಸಂಪರ್ಕ ಪಡೆದ ಬಿಪಿಎಲ್ ಕಾರ್ಡ್ ಹೊಂದಿರುವ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗ್ರಾಹಕರು ಕರ್ನಾಟಕ ರಾಜ್ಯ ಸರ್ಕಾರದ "ಅಮೃತ ಜ್ಯೋತಿ" ಯೋಜನೆಯಡಿ 75 ಯೂನಿಟ್‌ಗಳ ವರೆಗಿನ ವಿದ್ಯುತ್ ಶುಲ್ಕವನ್ನು ಡಿಬಿಟಿ ಯೋಜನೆಯಡಿ ಮರು ಪಾವತಿ ಮಾಡುವ ಸೌಲಭ್ಯ ಪಡೆಯಲು ಕೂಡಲೇ ಸೇವಾ ಸಿಂಧು, ಕೆ1, ಎ01, ಬಿ1 ಆನ್‌ಲೈನ್ ತಂತ್ರಾಶದಲ್ಲಿ, ಗ್ರಾಮ 1 ಅಥವಾ ಸೇವಾ ಸಿಂಧು ಕೇಂದ್ರಗಳಲ್ಲಿ ಅರ್ಜಿ ನೋಂದಾಯಿಸಿಕೊಂಡು ಸಂಬಂಧಿಸಿದ ಸೆಸ್ಕ್ ವ್ಯಾಪ್ತಿಯ ಉಪ ವಿಭಾಗಕ್ಕೆ ಮಾಹಿತಿ ನೀಡಲು ಕೋರಿದೆ.

ಅಕೌಂಟ್ ಐಡಿ, ಆಧಾರ್ ಸಂಖ್ಯೆ ಆರ್‌ಡಿ ನಂಬರ್ ಪ್ರತಿ, ಬಿಪಿಎಲ್ ಕಾರ್ಡ್ ಪ್ರತಿ, ಆಧಾರ್‌ಗೆ ಜೋಡಣೆಯಾಗಿರುವ ಮೊಬೈಲ್ ನಂಬರ್ ಈ ಮಾಹಿತಿಗಳೊಂದಿಗೆ ಅರ್ಜಿ ನೋಂದಾಯಿಸಿಕೊಳ್ಳುವಂತೆ ಸೆಸ್ಕ್ ಇಇ ಅನಿತಾ ಬಾಯಿ ಕೋರಿದ್ದಾರೆ.

ಆಚಾರ ವಿಚಾರಗಳಿಗೆ ಧಕ್ಕೆಯಾಗದಂತೆ ನಾಡಹಬ್ಬ ಆಚರಣೆ

ವಿರಾಜಪೇಟೆ ಖಾಸಗಿ ಬಸ್ ಕಾರ್ಮಿಕರ ಸಂಘದಿಂದ ಆಯುಧ ಪೂಜೆ

ವಿರಾಜಪೇಟೆ, ಅ.6–ಐತಿಹಾಸಿಕ ನಾಡಹಬ್ಬವನ್ನು ಆಚಾರ ವಿಚಾರಗಳಿಗೆ ಧಕ್ಕೆ ಬಾರದಂತೆ ಭಕ್ತಿಯಿಂದ ಧರ್ಮದಂತೆಯೇ ಆಚರಿಸಲಾಗುತ್ತಿದೆ ಎಂದು ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದ್ದಾರೆ.

ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ 15ನೇ ವರ್ಷದ ಅದ್ದೂರಿಯ ಆಯುಧ ಪೂಜೆ ಅಂಗವಾಗಿ ವಿರಾಜಪೇಟೆ ಖಾಸಗಿ ಬಸ್ ನಿಲ್ದಾಣದಲ್ಲಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಕೊರೊನಾ ಕಾರಣದಿಂದ ಉತ್ಸವಗಳನ್ನು ನಡೆಸಲು ಸಾಧ್ಯವಾಗಿರಲಿಲ್ಲ. ಈ ವರ್ಷ ಯಾವುದೇ ಅತಂಕಗಳಿಲ್ಲದೆ ಹಬ್ಬವನ್ನು ಆಚರಿಸುತ್ತಿದೆ ಎಂದರು.

ನವರಾತ್ರಿ ಉತ್ಸವ ತನ್ನದೆ ಆದ ವೈಶಿಷ್ಟತೆ ಹೊಂದಿದೆ. 9 ದಿನಗಳ ಕಾಲ ಶ್ರದ್ಧಾ ಭಕ್ತಿಯಿಂದ ನಡೆಯುವ ಪೂಜಾ ಕಾರ್ಯಗಳು ಶ್ರೀ ದುರ್ಗಾದೇವಿ ಲೋಕ ಕಲ್ಯಾಣಕ್ಕಾಗಿ ಅವತಾರವೆತ್ತಿ ದುಷ್ಟಶಕ್ತಿಗಳನ್ನು ಸಂಹಾರಮಾಡಲೆಂದು ಜಗನ್ಮಾತೆ ಅವತಾರ ಎತ್ತಬೇಕಾಯಿತು. ಎಂದ ಬೋಪಯ್ಯ ಚಾಮುಂಡೇಶ್ವರಿ ದೇವಿ ಐಶ್ವರ್ಯ ಆರೋಗ್ಯ ನೀಡುವುದರೊಂದಿಗೆ ಎಲ್ಲರಿಗೂ ಒಳ್ಳೆಯದನ್ನು ಉಂಟು ಮಾಡಲಿ ಎಂದರು.



ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಅವರು ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಆಯುಧ ಪೂಜೆ ಮತ್ತು ನಾಡಹಬ್ಬ ದಸರಾ ಹಿಂದೂ ಸಂಸ್ಕೃತಿಯ ಹಬ್ಬವಾಗಿದ್ದು, ಕೊಡಗಿನ ಎಲ್ಲಾ ಕಡೆಗಳಲ್ಲಿ ಆಚರಿಸಿಕೊಂಡು ಬರುತ್ತಿದ್ದು ದೇವರು ಎಲ್ಲರಿಗೂ ಸುಖಶಾಂತಿ ನೆಮ್ಮದಿ ನೀಡುವಂತಾಗಲಿ ಎಂದರು. ಬಿಜೆಪಿಯ ತೇಲಪಂಡ ಶಿವಕುಮಾರ್ ಮಾತನಾಡಿ, ಕೊಡಗಿನಲ್ಲಿ ಹೆಚ್ಚು ಜನರು ಖಾಸಗಿ ಬಸ್ಸುಗಳನ್ನೆ ನಂಬಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಖಾಸಗಿ ಬಸ್ ಕಡಿಮೆಯಾಗಿದ್ದು, ಕೆಲಸಗಳಿಲ್ಲದೆ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ ಅದರಿಂದ ಸರ್ಕಾರ ಬಸ್ ಕಾರ್ಮಿಕರಿಗೆ ಸಹಕಾರ ನೀಡುವಂತಾಗಬೇಕು ಎಂದರು.

ಕೊಡಗು ಖಾಸಗಿ ಬಸ್ ಕಾರ್ಮಿಕ ಸಂಘದ ಅಧ್ಯಕ್ಷ ಕುಂಬೆಯಂಡ ಸುರೇಶ್ ದೇವಯ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಪಂ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ನಿವೃತ್ತ ಸೈನಿಕರಾದ ಪಟ್ಟಚೇರಿರ ಪೂಣಚ್ಚ, ಚೆಂಬೆ ಬೆಳ್ಳೂರು ಗ್ರಾಪಂ ಸದಸ್ಯ ವಿ.ಪಿ.ಡಾಲು, ವಿನಾಯಕ ಟೂರ್ಸ್‌ನ ಬಿ.ವಿ. ಹೇಮಂತ್, ಉದ್ಯಮಿ ವಿ.ಎನ್.ದಿನೇಶ್ ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಜೂಡಿವಾಜ್ ವಾರ್ಷಿಕ ವರದಿ ಮಂಡಿಸಿದರೆ, ಮಾಜಿ ಅಧ್ಯಕ್ಷ ದಿನೇಶ್ ನಾಯರ್ ಸ್ವಾಗತಿಸಿ, ವಂದಿಸಿದರು. ಸಂಘದ ಹಿರಿಯ ಕಾರ್ಮಿಕರಿಗೆ ಮತ್ತು ಎಸ್‌ಎಸ್‌ಎಲ್‌ಸಿ–ಪಿಯುಸಿ ಮತ್ತು ಡಿಗ್ರಿಯಲ್ಲಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳನ್ನು ಸನ್ಮಾನಿಸಲಾಯಿತು. ವಿದುಷಿ ಹೇಮಾವತಿ ನಾಟ್ಯಂಜಲಿ ನೃತ್ಯ ಸಂಸ್ಥೆಯ ವಿದ್ಯಾರ್ಥಿಗಳ ತಂಡ ದುರ್ಗಾದೇವಿಯ ನೃತ್ಯ, ಅಮ್ಮತ್ತಿ ರಾಜೇಶ್ ಅವರಿಂದ ಮ್ಯಾಜಿಕ್ ಶೋ ಹಾಗೂ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಹಾಗೂ ರಸ ಮಂಜರಿ ಕಾರ್ಯಕ್ರಮಗಳು ನಡೆಯಿತು. ಇದಕ್ಕೂ ಮೊದಲು ಸಿಡಿಮದ್ದು ಪ್ರದರ್ಶನ ಏರ್ಪಡಿಸಿದ್ದು, ಬೆಳಿಗ್ಗೆ ಆಯುಧ ಪೂಜಾ ಕಾರ್ಯಕ್ರಮ ನಡೆಸಲಾಗಿತ್ತು.

ಮೂಡುಗೂರು ಶ್ರೀ ಕಾಳಿಕಾಂಬ, ಶ್ರೀ ಬಸವೇಶ್ವರ ದೇವರ ಉತ್ಸವ

ಗುಂಡ್ಲುಪೇಟೆ, ಅ.6– ತಾಲೂಕಿನ ಮೂಡುಗೂರು ಗ್ರಾಮದಲ್ಲಿ ವಿಜಯದಶಮಿಯ ಹಿನ್ನೆಲೆಯಲ್ಲಿ ತಾಯಿ ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ಶ್ರೀ ಬಸವೇಶ್ವರ ದೇವರ ಉತ್ಸವ ಕಾರ್ಯಕ್ರಮವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು.



ವಿಜಯ ದಶಮಿಯ ಹಿನ್ನೆಲೆಯಲ್ಲಿ ಗ್ರಾಮದಲ್ಲಿರುವ ಶ್ರೀ ಕಾಳಿಕಾಂಬ ದೇವಸ್ಥಾನ ಮತ್ತು ಶ್ರೀ ಬಸವೇಶ್ವರ ದೇವಸ್ಥಾನ ಸೇರಿದಂತೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ತಳಿರು ತೋರಣಗಳಿಂದ ಸಿಂಗರಿಸಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಪ್ರತಿವರ್ಷ ವಿಜಯ ದಶಮಿಯಂದು ಈ ವಿಶೇಷ ಪೂಜೆ ಹಿನ್ನೆಲೆಯಲ್ಲಿ ತಾಯಿ ಕಾಳಿಕಾಂಬ ಮಾತೆಗೆ ವಿಶೇಷ ಹೂವಿನ ಅಲಂಕಾರ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ಭಕ್ತಿ ಭಾವದಿಂದ ನಡೆಯಿತು. ನಂತರ ಖಡ್ಗಗಳನ್ನು ಹಿಡಿದ ಮಕ್ಕಳು ಮತ್ತು ಯುವಕರು ವೀರಗಾಸೆ ಹಾಗೂ ಮಂಗಳವಾದ್ಯಗಳೊಂದಿಗೆ ಶ್ರೀ ಬಸವೇಶ್ವರ ಮೂರ್ತಿಯ ಉತ್ಸವವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ನಂತರ ಹೊರವಲಯದಲ್ಲಿರುವ ಬನ್ನಿಮರಕ್ಕೆ ವಿಶೇಷ ಪ್ರಾರ್ಥನೆ ಪೂಜೆ ಸಲ್ಲಿಸುವುದರೊಂದಿಗೆ ವಿಜಯೋತ್ಸವವನ್ನು ಆಚರಣೆ ಮಾಡಲಾಯಿತು.

ಉತ್ಸವಮೂರ್ತಿಯ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗುತ್ತ, ಗ್ರಾಮದ ಯುವಕರು, ಮುಖಂಡರ ಕತ್ತಿ ವರಸೆ, ನೃತ್ಯಯೊಂದಿಗೆ ಕುದುರೆಯನ್ನು ಮೆರವಣಿಗೆಯಲ್ಲಿ ಕರೆತಂದು ದೇವಾಲಯದ ಮುಂಭಾಗದಲ್ಲಿ ಖಡ್ಗ ಹಿಡಿದಿದ್ದ ಮಕ್ಕಳಿಗೆ ಆರತಿ ಬೆಳಗುವುದರೊಂದಿಗೆ ದೇವತಾಕಾರ್ಯವನ್ನು ಮುಕ್ತಾಯಗೊಳಿಸಲಾಯಿತು. ಇದೇ ಸಂದರ್ಭದಲ್ಲಿ ಸಾವಿರಾರು ಮಂದಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಈ ಪೂಜಾ ಕಾರ್ಯಕ್ರಮದಲ್ಲಿ ಮೂಡುಗೂರು ಉದ್ಧಾನೇಶ್ವರ ಮಠಾಧ್ಯಕ್ಷರಾದ ಇಮ್ಮಡಿ ಉದ್ಧಾನಸ್ವಾಮೀಜಿ ಸೇರಿದಂತೆ ಗ್ರಾಮದ ಮತ್ತು ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಆಗಮಿಸಿ ವಿಶೇಷ ಪ್ರಾರ್ಥನೆ ಹಾಗೂ ಪೂಜೆ ಸಲ್ಲಿಸಿದರು.

ಹೈಕೋರ್ಟ್ ನೂತನ ನ್ಯಾಯಮೂರ್ತಿಗೆ ಸನ್ಮಾನ



ಚಾಮರಾಜನಗರದ ಹರಳುಕೋಟೆ ಜನಾರ್ಧನ ಸ್ವಾಮಿ ದೇವಾಲಯಕ್ಕೆ ಆಗಮಿಸಿದ್ದ ಕರ್ನಾಟಕ ಉಚ್ಚ ನ್ಯಾಯಾಲಯದ ನೂತನ ನ್ಯಾಯಮೂರ್ತಿ ಜಿ.ಬಸವರಾಜ ಅವರನ್ನು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಅಭಿನಂದಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕ ಮಲ್ಲಿಕಾರ್ಜುನಸ್ವಾಮಿ, ರೂಪ ಬಸವರಾಜು, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಎಸ್.ಮಂಜು ಹರವೆ, ಪ್ರಧಾನ ಕಾರ್ಯದರ್ಶಿ ಎನ್.ಕೆ.ವಿರೂಪಾಕ್ಷ ಸ್ವಾಮಿ, ಖಜಾಂಚಿ ಆರ್.ಗಿರೀಶ್, ಜಂಟಿ ಕಾರ್ಯದರ್ಶಿ ಮಲ್ಲು ಇದ್ದಾರೆ.

ಮಂಡ್ಯ ಜಿಲ್ಲೆ ಅಂಬಿಗರಹಳ್ಳಿಯಲ್ಲಿ ಕುಂಭಮೇಳ ಹಿನ್ನೆಲೆ

ಮಲೈ ಮಹದೇಶ್ವರಬೆಟ್ಟದಲ್ಲಿ ಜ್ಯೋತಿ ರಥಯಾತ್ರೆಗೆ ಸಚಿವರಿಂದ ಚಾಲನೆ





ಚಾಮರಾಜನಗರ, ಅ.6– ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ಅಂಬಿಗರಹಳ್ಳಿಯಲ್ಲಿ ಅ.13 ರಿಂದ 16 ರವರೆಗೆ ಕುಂಭಮೇಳ ನಡೆಯಲಿರುವ ಹಿನ್ನೆಲೆಯಲ್ಲಿ ಇಂದು ಚಾಮರಾಜನಗರ ಜಿಲ್ಲೆಯ ಮಲೈ ಮಹದೇಶ್ವರ ಬೆಟ್ಟದಲ್ಲಿ 3 ಜ್ಯೋತಿ ರಥಯಾತ್ರೆಗೆ ಚಾಲನೆ ನೀಡಲಾಯಿತು.

ಮಲೈ ಮಹದೇಶ್ವರ ದೇವಾಲಯದ ಆವರಣದಲ್ಲಿ ಅಬಕಾರಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಗೋಪಾಲಯ್ಯ ಹಾಗೂ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ. ನಾರಾಯಣ ಗೌಡ ಅವರು ಮಹದೇಶ್ವರ ಜ್ಯೋತಿ ರಥಯಾತ್ರೆಗೆ ಹಸಿರು ನಿಶಾನೆ ತೋರಿದರು.

ಮೊದಲಿಗೆ ದೇವರಿಗೆ ಪೂಜೆ ಸಲ್ಲಿಸಲಾಯಿತು. ಮೂರು ರಥಗಳಿಗೂ ಪೂಜೆ ನೆರವೇರಿಸಿದ ಬಳಿಕ ರಥಯಾತ್ರೆಗೆ ವಿಧ್ಯುಕ್ತವಾಗಿ ಸಚಿವರು ಚಾಲನೆ ನೀಡಲಾಯಿತು.

ಇದೇ ವೇಳೆ ಮಾತನಾಡಿದ ರೇಷ್ಮೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ. ನಾರಾಯಣಗೌಡ ಕೆ.ಆರ್. ಪೇಟೆಯ ಅಂಬಿಗರಹಳ್ಳಿಯಲ್ಲಿ ಅ.13 ರಿಂದ 16ರ ವರೆಗೆ ನಡೆಯಲಿರುವ ಕುಂಭಮೇಳದಲ್ಲಿ 6 ಲಕ್ಷಕ್ಕೂ ಹೆಚ್ಚಿನ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಲಕ್ಷ್ಮಣ ತೀರ್ಥ, ಹೇಮಾವತಿ ಹಾಗೂ ಕಾವೇರಿ ಮೂರು ನದಿಗಳು ಸೇರುವ ತ್ರಿವೇಣಿ ಸಂಗಮಕ್ಕೆ ಮಹದೇಶ್ವರರು ಬಂದು ಹೋಗಿದ್ದರು ಎಂದು ಹಿರಿಕರು ಹೇಳುತ್ತಾರೆ. ಈ ತ್ರಿವೇಣಿ ಸಂಗಮದಲ್ಲಿ ನಡೆಯುವ ಪುಣ್ಯಸ್ನಾನ ಕಾರ್ಯಕ್ರಮಕ್ಕೆ ಹೆಚ್ಚಿನ ಜನರು ಆಗಮಿಸಬೇಕಾಗಿ ಸಚಿವ ಡಾ. ಕೆ.ಸಿ. ನಾರಾಯಣಗೌಡ ಅವರು ಕೋರಿದರು.

ಅ.13 ರಂದು ತ್ರಿವೇಣಿ ಸಂಗಮದಲ್ಲಿ ಮಹದೇಶ್ವರ ದೇಸ್ಥಾನದ ಉದ್ಘಾಟನೆ ನಡೆಯಲಿದೆ. ಅ.14 ರಂದು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಅವರು, ಅ.16ರಂದು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ 35 ರಿಂದ 40 ಸಮುದಾಯದ ಸ್ವಾಮೀಜಿಗಳು ಭಾಗವಹಿಸಲಿದ್ದಾರೆ ಎಂದರು.

ಚಾಲನೆ ನೀಡಿರುವ ಜ್ಯೋತಿಯಾತ್ರೆ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸಂಚರಿಸಲಿದೆ. ಈ ಯಾತ್ರೆಯನ್ನು ಜನರಿಗೆ ಶಾಂತಿ, ಸುಖ, ಆರೋಗ್ಯ ನೀಡಲಿ ಎಂದು ನಡೆಸಲಾಗುತ್ತಿದೆ ಎಂದು ಸಚಿವ ಡಾ. ಕೆ.ಸಿ. ನಾರಾಯಣ ಗೌಡ ತಿಳಿಸಿದರು. ಅಬಕಾರಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ಮಾತನಾಡಿ, ಕೆ.ಆರ್. ಪೇಟೆ ತಾಲೂಕಿನ ಅಂಬಿಗರಹಳ್ಳಿಯ ತ್ರಿವೇಣಿ ಸಂಗಮದಲ್ಲಿ ಅ.13ರಿಂದ 16ರವರೆಗೆ ಮಹಾ ಕುಂಭಮೇಳ ಕಾರ್ಯಕ್ರಮವು ಡಾ. ನಿರ್ಮಲಾನಂದ ಮಹಾಸ್ವಾಮಿಗಳು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ನೇತೃತ್ವದಲ್ಲಿ ನಡೆಯಲಿದೆ ಎಂದರು.

ಕೆ.ಆರ್. ಪೇಟೆ ತಾಲ್ಲೂಕಿನ ಕಾವೇರಿ, ಹೇಮಾವತಿ, ಲಕ್ಷ್ಮಣ ತೀರ್ಥ ನದಿಗಳು ಸೇರುವ ತ್ರಿವೇಣಿ ಸಂಗಮಕ್ಕೆ ಶ್ರೀ ಮಲೈ ಮಹದೇಶ್ವರ ಸ್ವಾಮಿ ಬಂದು ಹೋಗಿರುವುದು ಎಲ್ಲರಿಗೂ ತಿಳಿದಿದೆ. ಈ ಪುಣ್ಯ ಭೂಮಿಯಲ್ಲಿ ಕುಂಭಮೇಳ ಆಚರಣೆ ಮಾಡುತ್ತೇವೆ ಎಂದು ಹೇಳಿದರು.

ಮಹಾ ಕುಂಭಮೇಳ ಕಾರ್ಯಕ್ರಮದಲ್ಲಿ ಸಾಧುಸಂತರು, ಸ್ವಾಮೀಜಿಗಳು ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳು ಹಾಗೂ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ. ಬರುವಂತಹ ಭಕ್ತಾದಿಗಳಿಗೆ ಊಟೋಪಚಾರದ ವ್ಯವಸ್ಥೆ ಹಾಗೂ ಮೂಲ ಸೌಲಭ್ಯಗಳನ್ನು ಕಲ್ಪಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ ಎಂದರು.

ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳಿಗೆ ಸಂಚರಿಸುವ ಮೂರು ಜ್ಯೋತಿ ರಥಗಳಿಗೆ ಇಂದು ಶ್ರೀ ಮಲೈ ಮಹದೇಶ್ವರ ಬೆಟ್ಟದಲ್ಲಿ ಚಾಲನೆಯನ್ನು ನೀಡಲಾಗಿದೆ. ಜ್ಯೋತಿ ರಥಗಳು ಮೂರು ಜಿಲ್ಲೆಗಳಲ್ಲಿ ಸಂಚರಿಸಿ ಗ್ರಾಮದ ದೇವಸ್ಥಾನ, ಮಠ ಹಾಗೂ ಜನತೆಗೆ ಕುಂಭಮೇಳ ಕಾರ್ಯಕ್ರಮದ ಬಗ್ಗೆ ತಿಳಿಸುವಂತಹ ಕೆಲಸವನ್ನು ಮಾಡುತ್ತದೆ. ಈ ಕಾರ್ಯಕ್ರಮಕ್ಕೆ ಸಹಕರಿಸುತ್ತಿರುವ ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ ಎಂದು ಸಚಿವ ಕೆ. ಗೋಪಾಲಯ್ಯ ಅವರು ತಿಳಿಸಿದರು.

ಹನೂರು ವಿಧಾನಸಭಾ ಕ್ಷೇತ್ರದ ಶಾಸಕ ಆರ್. ನರೇಂದ್ರ ಮಾತನಾಡಿ, ಕುಂಭಮೇಳದ ಅಂಗವಾಗಿ ನಡೆಯುತ್ತಿರುವ ಜ್ಯೋತಿ ಯಾತ್ರೆ ಯಶಸ್ವಿಯಾಗಲಿ. ಮಹದೇಶ್ವರರ ಆಶೀರ್ವಾದ ಎಲ್ಲರ ಮೇಲಿರಲಿ ಎಂದರು.

ಕಾರ್ಯಕ್ರಮದಲ್ಲಿ ಸಾಲೂರು ಮಠದ ಶ್ರೀಗಳಾದ ಶಾಂತಾ ಮಲ್ಲಿಕಾರ್ಜುನ ಸ್ವಾಮೀಜಿ, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು, ಮಂಡ್ಯ ಜಿಲ್ಲಾಧಿಕಾರಿ ಎಸ್.ಅಶ್ವತಿ, ಚಾಮರಾಜನಗರ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಮಲೈಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರಾದ ಎಸ್. ಕಾತ್ಯಾಯಿನಿದೇವಿ, ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶಾಂತಾ ಎಲ್. ಹುಲ್ಮನಿ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಹೆಚ್.ಎಲ್. ನಾಗರಾಜು, ಉಪವಿಭಾಗಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ, ಹನೂರು ತಹಶೀಲ್ದಾರ್‌ರಾದ ಆನಂದಯ್ಯ, ಮಂಡ್ಯ ಜಿಲ್ಲೆಯ ತಹಶೀಲ್ದಾರರಾದ ರೂಪ, ಸಣ್ಣಸ್ವಾಮಿಗೌಡ, ರಂಗನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕೊಳ್ಳೇಗಾಲ ನಗರಸಭೆಯ ಏಳು ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ: ವೇಳಾಪಟ್ಟಿ ಪ್ರಕಟ

ಚಾಮರಾಜನಗರ, ಅ.6– ಜಿಲ್ಲೆಯ ಕೊಳ್ಳೇಗಾಲ ನಗರಸಭೆಯಲ್ಲಿ ತೆರವಾಗಿರುವ 7 ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ. ಕೊಳ್ಳೇಗಾಲ ನಗರಸಭೆಯ 2, 6, 7, 13, 21, 25 ಹಾಗೂ 26ನೇ ವಾರ್ಡ್ ಸದಸ್ಯ ಸ್ಥಾನಗಳಿಗೆ ಉಪಚುನಾವಣೆ ನಿಗದಿಯಾಗಿದೆ.

ಅ.10ರಂದು ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆ ಹೊರಡಿಸುವರು. ನಾಮಪತ್ರ ಸಲ್ಲಿಸಲು ಅ.17 ಕಡೆಯ ದಿನವಾಗಿದೆ. ಅ.18ರಂದು ನಾಮಪತ್ರಗಳ ಪರಿಶೀಲನೆ ಕಾರ್ಯ ನಡೆಯಲಿದೆ. ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಅ.20 ಕಡೆಯ ದಿನ. ಮತದಾನ ಅವಶ್ಯವಿದ್ದರೆ ಅ.28ರಂದು ಬೆಳಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುತ್ತದೆ. ಮರು ಮತದಾನ ಅವಶ್ಯವಿದ್ದಲ್ಲಿ ಅ.30 ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುತ್ತದೆ. ಮತಗಳ ಎಣಿಕೆ ಕಾರ್ಯವು ತಾಲೂಕಿನ ಕೇಂದ್ರ ಸ್ಥಳದಲ್ಲಿ ಅ.31ರಂದು ಬೆಳಿಗ್ಗೆ 8 ಗಂಟೆಗೆ ಆರಂಭವಾಗಲಿದೆ. ಅ.31ರಂದು ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗಲಿದೆ.

ಸದಾಚಾರ ಸಂಹಿತೆಯು ಉಪ ಚುನಾವಣಾ ನಡೆಯುವ ವಾರ್ಡುಗಳ ವ್ಯಾಪ್ತಿಯಲ್ಲಿ ಮಾತ್ರ ಅ.10 ರಿಂದ 31 ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಎಂದು ಚುನಾವಣಾ ಆಯೋಗ ತಿಳಿಸಿದೆ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ತಿಳಿಸಿದ್ದಾರೆ.

ಮೂರು ಗ್ರಾಪಂ ಸ್ಥಾನಗಳಿಗೆ ಉಪ ಚುನಾವಣೆ: ವೇಳಾಪಟ್ಟಿ ಪ್ರಕಟ

ಚಾಮರಾಜನಗರ, ಅ.6– ಜಿಲ್ಲೆಯ ಮೂರು ಗ್ರಾಮ ಪಂಚಾಯತ್‌ಗಳಲ್ಲಿ ತೆರವಾಗಿರುವ ಒಟ್ಟು 3 ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ.


ಚಾಮರಾಜನಗರ ತಾಲೂಕಿನ ಪುಣಜನೂರು ಗ್ರಾಮ ಪಂಚಾಯಿತಿಯ ಕ್ಯಾತದೇವರಗುಡಿ ಕ್ಷೇತ್ರ, ಯಳಂದೂರು ತಾಲೂಕಿನ ಅಂಬಳೆ ಗ್ರಾಮ ಪಂಚಾಯತಿಯ ವೈ.ಕೆ.ಮೋಳೆ ಕ್ಷೇತ್ರ ಹಾಗೂ ಹನೂರು ತಾಲೂಕಿನ ಸೂಳೇರಿಪಾಳ್ಯ ಗ್ರಾಮ ಪಂಚಾಯಿತಿಯ ಗಂಗನದೊಡ್ಡಿ ಕ್ಷೇತ್ರದ ತಲಾ ಒಂದು ಸ್ಥಾನಗಳಿಗೆ ಉಪಚುನಾವಣೆ ನಿಗದಿಯಾಗಿದೆ. ಒಟ್ಟಾರೆ ಮೂರು ಸ್ಥಾನಗಳಿಗೆ ಚುನಾವಣಾ ನಿಗದಿಯಾಗಿದೆ.

ಅ.13ರಂದು ಜಿಲ್ಲಾಧಿಕಾರಿಯವರು ಚುನಾವಣಾ ಅಧಿಸೂಚನೆ ಹೊರಡಿಸುವರು. ನಾಮಪತ್ರ ಸಲ್ಲಿಸಲು ಅ.18 ಕಡೆಯ ದಿನವಾಗಿದೆ. ಅ.19ರಂದು ನಾಮಪತ್ರಗಳ ಪರಿಶೀಲನೆ ಕಾರ್ಯ ನಡೆಯಲಿದೆ. ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಅ.21 ಕಡೆಯ ದಿನ. ಮತದಾನ ಅವಶ್ಯವಿದ್ದರೆ ಅ.28ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುತ್ತದೆ. ಮರು ಮತದಾನ ಅವಶ್ಯವಿದ್ದಲ್ಲಿ ಅ.30ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುತ್ತದೆ. ಮತಗಳ ಎಣಿಕೆ ಕಾರ್ಯವು ತಾಲೂಕು ಕೇಂದ್ರದಲ್ಲಿ ಅ.31 ರಂದು ಬೆಳಿಗ್ಗೆ 8 ಗಂಟೆಗೆ ಆರಂಭವಾಗಲಿದೆ. ಅ.31 ರಂದು ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗಲಿದೆ.

ಚುನಾವಣಾ ನೀತಿ ಸಂಹಿತೆಯು ಚುನಾವಣಾ ನಡೆಯುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅ.13 ರಿಂದ 31 ರವರೆಗೆ ಜಾರಿಯಲ್ಲಿರುತ್ತದೆ ಎಂದು ಚುನಾವಣಾ ಆಯೋಗ ತಿಳಿಸಿದೆ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ತಿಳಿಸಿದ್ದಾರೆ.

ನಾಗಮ್ಮ ನಿಧನ

ಚಾಮರಾಜನಗರ, ಅ.6– ತಾಲೂಕಿನ ಹರವೆ ಗ್ರಾಮದ ನಿವಾಸಿ ಬಸಪ್ಪ ಅವರ ಧರ್ಮಪತ್ನಿ ಶ್ರೀಮತಿ ನಾಗಮ್ಮ(70) ಗುರುವಾರ ನಿಧನರಾದರು.



ಮೃತರು ಪತಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ, ಅಳಿಯಂದಿರು, ಮೊಮ್ಮಕ್ಕಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಸ್ವಗ್ರಾಮದ ಜಮೀನಿನಲ್ಲಿ ನೆರವೇರಿತು.

ಒಂದನೇ ಪುಟದಿಂದ

ಪ್ರತ್ಯಕ್ಷವಾಗಿ 15 ಲಕ್ಷ ಜನ ವೀಕ್ಷಿಸಿದ್ದಾರೆ

ನವರಾತ್ರಿ ಉತ್ಸವದ ಯಶಸ್ಸಿಗೆ ಕಾರಣರಾದ ಸಚಿವರು, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಶಾಸಕರಾದ ಎಲ್. ನಾಗೇಂದ್ರ, ಎಸ್.ಎ. ರಾಮದಾಸ್, ಜಿ.ಟಿ. ದೇವೇಗೌಡ ಹಾಗೂ ಇತರರು, ಮೇಯರ್ ಶಿವಕುಮಾರ್, ಉಪಮೇಯರ್ ಡಾ. ಆರ್. ರೂಪಾ, ಪಾಲಿಕೆ ಸದಸ್ಯರು, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು, ದಸರಾ ಉಪ ಸಮಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಜನಪ್ರತಿನಿಧಿಗಳು, ಅಧಿಕಾರಿಗಳು, ಮಾಧ್ಯಮ ಪ್ರತಿನಿಧಿಗಳು ಹಾಗೂ ಮೈಸೂರಿನ ಮಹಾ ಜನತೆಗೆ ಕೃತಜ್ಞತೆ ಸಲ್ಲಿಸುವುದಾಗಿ ಸಚಿವರು ನುಡಿದರು. ಇದೇ ಪ್ರಥಮ ಬಾರಿಗೆ ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸಿ ನಾಡ ಹಬ್ಬಕ್ಕೆ ಮತ್ತಷ್ಟು ಮೆರಗು ನೀಡಿದ್ದಾರೆ. ಎಲ್ಲಾ ಕಾರ್ಯಕ್ರಮಗಳನ್ನು ಆಯಾ ಉಪ ಸಮಿತಿ ಪದಾಧಿಕಾರಿಗಳು ಸುವ್ಯವಸ್ಥಿತವಾಗಿ ಆಯೋಜನೆ ಮಾಡಿದ್ದರು. ನಾನು ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಿದ್ದೇನೆ. ಒಟ್ಟಾರೆ ಈ ಬಾರಿಯ ದಸರಾ ಉತ್ಸವ ಸಂಪೂರ್ಣ ಯಶಸ್ವಿಯಾಗಿದೆ ಎಂಬ ತೃಪ್ತಿ ನನಗಿದೆ ಎಂದು ಎಸ್.ಟಿ. ಸೋಮಶೇಖರ್ ನುಡಿದರು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಿ ದಸರಾ ಮಹೋತ್ಸವ ಆಚರಿಸುವ ಅವಕಾಶ ಕಲ್ಪಿಸಿಕೊಟ್ಟ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಪಕ್ಷದ ಎಲ್ಲಾ ನಾಯಕರಿಗೂ ಧನ್ಯವಾದ ಅರ್ಪಿಸುತ್ತೇನೆ ಎಂದು ಅವರು ಇದೇ ಸಂದರ್ಭ ನುಡಿದರು.

ಬುಧವಾರ ನಡೆದ ಜಂಬೂ ಸವಾರಿ ಮೆರವಣಿಗೆಯಲ್ಲಿ 49 ಸ್ತಬ್ಧ ಚಿತ್ರಗಳು, ವಿವಿಧ ಜಿಲ್ಲೆಗಳ 66 ಜಾನಪದ ಕಲಾ ತಂಡಗಳು ತಮ್ಮ ಜಿಲ್ಲೆಯ ಸಾಂಸ್ಕೃತಿಕ ವೈಭವವನ್ನು ನಾಡಿನ ಜನರಿಗೆ ಪರಿಚಯಿಸಿದ್ದಾರೆ. ಐತಿಹಾಸಿಕ ವಿಜಯದಶಮಿ ಮೆರವಣಿಗೆಯಲ್ಲಿ 15 ಲಕ್ಷಕ್ಕೂ ಅಧಿಕ ಮಂದಿ ಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದರು. ಸಣ್ಣ ಪುಟ್ಟ ನೂಕು ನುಗ್ಗಲು ಹೊರತುಪಡಿಸಿ ಉಳಿದಂತೆ ಮೆರವಣಿಗೆ ಮತ್ತು ಪಂಜಿನ ಕವಾಯಿತು ಪ್ರದರ್ಶನ ಸುಸೂತ್ರವಾಗಿ ನಡೆದಿದೆ. ಅದಕ್ಕೆ ತಾಯಿ ಚಾಮುಂಡೇಶ್ವರಿ ಕೃಪೆ, ಅಧಿಕಾರಿಗಳು, ಜನಪ್ರತಿನಿಧಿಗಳ ಶ್ರಮ ಹಾಗೂ ಜನರ ಸಹಕಾರ ಪ್ರಮುಖ ಕಾರಣ ಎಂದು ಜಿಲ್ಲಾ ಉಸ್ತುವಾರಿ ಸಚಿವರು ನುಡಿದರು.

ಕೋವಿಡ್-19 ಪರಿಸ್ಥಿತಿಯಿಂದಾಗಿ ಕಳೆದ ಎರಡು ವರ್ಷಗಳಿಂದ ಜನರು ಅದ್ಧೂರಿ ದಸರಾ ವೀಕ್ಷಿಸಲು ಸಾಧ್ಯವಾಗಿರಲಿಲ್ಲ. ಆದರೆ, ಈ ಬಾರಿ ಯುವ ದಸರಾ, ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ರೈತ ದಸರಾ, ಕವಿಗೋಷ್ಠಿ, ಯುವ ಸಂಭ್ರಮ, ಯೋಗ ದಸರಾ, ಸಾಂಸ್ಕೃತಿಕ ಕಾರ್ಯಕ್ರಮ, ಕ್ರೀಡೆ, ದಸರಾ ದರ್ಶನ, ಆರೋಗ್ಯ ದಸರಾ ಸೇರಿದಂತೆ ಹಲವು ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಜನರು ಉತ್ಸಾಹದಿಂದ ಪಾಲ್ಗೊಂಡು ಈ ನಾಡಿನ ಕಲೆ, ಸಂಸ್ಕೃತಿ, ಪರಂಪರೆಯನ್ನು ವೀಕ್ಷಿಸಿದ್ದಾರೆ ಎಂದು ಅವರು ತಿಳಿಸಿದರು. ಯುವ ದಸರಾದಲ್ಲಿ ಅಪ್ಪು ನಮನ ಕಾರ್ಯಕ್ರಮಕ್ಕೆ ಸಾಕಷ್ಟು ಪ್ರಶಂಸೆ ವ್ಯಕ್ತವಾಗಿದೆ. ಫಲಪುಷ್ಪ ಪ್ರದರ್ಶನದಲ್ಲಿ ಸಾವಿರಾರು ಬಗೆಯ ಫಲ-ಪುಷ್ಪಗಳನ್ನು ಪ್ರದರ್ಶಿಸಲಾಗಿದೆ. ಮೈಸೂರು ನಗರದ 96 ವೃತ್ತಗಳೂ ಸೇರಿ ಒಟ್ಟು 124 ಕಿ.ಮೀ.ವರೆಗೆ ವಿದ್ಯುದ್ದೀಪಾಲಂಕಾರ ಮಾಡಲಾಗಿದೆ. ಪ್ರಮುಖ 28 ವೃತ್ತಗಳಲ್ಲಿ ಪ್ರತಿಕೃತಿಗಳನ್ನು ನಿರ್ಮಿಸಲಾಗಿದೆ. ಇನ್ನೂ 10 ದಿನಗಳ ಕಾಲ ವಿದ್ಯುದ್ದೀಪಾ ಲಂಕಾರವನ್ನು ವಿಸ್ತರಿಸುವಂತೆ ತಿಳಿಸಲಾಗಿದೆ. ಸೆಸ್ಕ್ ಅಧಿಕಾರಿಗಳು 6 ದಿನಗಳವರೆಗೆ ವಿಸ್ತರಿಸುತ್ತೇವೆ ಎನ್ನುತ್ತಿದ್ದಾರೆ. ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ನುಡಿದರು.

ಇದೀಗ ದಸರಾ ಮುಗಿದಿರುವುದರಿಂದ ಬುಧವಾರ ರಾತ್ರಿ 11 ಗಂಟೆಯಿಂದ ಪೌರಕಾರ್ಮಿಕರು ನಗರದಾದ್ಯಂತ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದಾರೆ. ದಸರಾ ವಿಶೇಷಾಧಿಕಾರಿಯಾಗಿ ಹಗಲು-ರಾತ್ರಿ ದುಡಿದ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಎಡಿಸಿ ಡಾ. ಮಂಜುನಾಥಸ್ವಾಮಿ, ಪಾಲಿಕೆ ಆಯುಕ್ತ ಜಿ. ಲಕ್ಷ್ಮಿಕಾಂತ ರೆಡ್ಡಿ, ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಎಸ್ಪಿ ಆರ್. ಚೇತನ್ ಸೇರಿದಂತೆ ದಸರಾ ಯಶಸ್ಸಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಧನ್ಯವಾದ ಹೇಳುವುದಾಗಿಯೂ ಅವರು ನುಡಿದರು.

ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಎಡಿಸಿ ಡಾ. ಬಿ.ಎಸ್. ಮಂಜುನಾಥಸ್ವಾಮಿ, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಎಸ್ಪಿ ಆರ್. ಚೇತನ್, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ರಾಜ್ಯಾಧ್ಯಕ್ಷ ಎಂ. ಶಿವಣ್ಣ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ಇದೇ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಹಾಗೂ ದಸರಾ ಮುಂಚೂಣಿ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.

ದಾಖಲೆ ಪ್ರಮಾಣದಲ್ಲಿ ಅರಮನೆ ವೀಕ್ಷಣೆ

ಅ.4ರಂದು(ಮಧ್ಯಾಹ್ನ 2ರಿಂದ) 12,876 ಸೇರಿ 9 ದಿನದಲ್ಲಿ ಒಟ್ಟು 98,142 ವೀಕ್ಷಕರು ಅರಮನೆಗೆ ಭೇಟಿ ನೀಡಿದ್ದಾರೆ ಎಂದು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ತಿಳಿಸಿದ್ದಾರೆ. ಇದರಲ್ಲಿ 309 ವಿದೇಶಿಯರು, 7,335 ವಿದ್ಯಾರ್ಥಿಗಳು, 11,702 ಮಕ್ಕಳು ಹಾಗೂ 78,796 ವಯಸ್ಕರು ಟಿಕೆಟ್ ಪಡೆದು ಅರಮನೆ ಸೌಂದರ್ಯವನ್ನು ಕಣ್ತುಂಬಿಕೊಂಡಿದ್ದಾರೆ. ಇದರಲ್ಲಿ 67,299 ಮಂದಿ ಕಳೆದ ನಾಲ್ಕು ದಿನಗಳಲ್ಲಿ ಅರಮನೆಗೆ ಭೇಟಿ ನೀಡಿರುವುದು ಗಮನಾರ್ಹ. ಇನ್ನು ಹೊರ ಆವರಣದಿಂದ ಅರಮನೆ ವೀಕ್ಷಿಸಿ, ಸಂಭ್ರಮಿಸಿದವರ ಲೆಕ್ಕವಿಲ್ಲ. ನವರಾತ್ರಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಜೊತೆಗೆ ಹೊಂಬೆಳಕಲ್ಲಿ ಕಂಗೊಳಿಸುತ್ತಿದ್ದ ಅರಮನೆ ನೋಡಲು ನಿತ್ಯ ಜನಸಮೂಹವೇ ಹರಿದು ಬಂದಿತ್ತು. ಅರಮನೆ ಎದುರಿನ ಉದ್ಯಾನದಲ್ಲಿ ಅರಮನೆ ಮಂಡಳಿ ವತಿಯಿಂದ ಏರ್ಪಡಿಸಿದ್ದ 'ಫಲ-ಪುಷ್ಪ' ಪ್ರದರ್ಶನವನ್ನು ಲಕ್ಷೋಪಲಕ್ಷ ಜನ ಕಣ್ತುಂಬಿಕೊಂಡರು. ಕೆಂಪು ಕೋಟೆ, ರಾಜಮಹಾರಾಜರು, ಸ್ವಾತಂತ್ರ್ಯ ಹೋರಾಟಗಾರರು, ವೀರ ಯೋಧರು ಸೇರಿದಂತೆ ಅನೇಕ ಮಹನೀಯರ ಪ್ರತಿಕೃತಿಗಳು, ಬಣ್ಣ ಬಣ್ಣದ ಹೂಗಳು, ಔಷಧೀಯ ಗಿಡಗಳು ಸೇರಿ ಎಲ್ಲಾ ಬಗೆಯ ಸಸಿಗಳು ಸೇರಿದಂತೆ ವೈವಿಧ್ಯಮಯವಾಗಿದ್ದ 'ಫಲ-ಪುಷ್ಪ' ಪ್ರದರ್ಶನವನ್ನು ವೀಕ್ಷಿಸಿದ ಜನ ಮೆಚ್ಚುಗೆ ಮಾತನಾಡಿದರು.

ಮುಂಜಾನೆಯೇ ಲಕ್ಷ್ಮಿ, ಶ್ರೀದತ್ತಾತ್ರೇಯ ಮರಳಿ ಮನೆಗೆ

ಲಾರಿಯಲ್ಲಿ ಮುಂಜಾನೆಯೇ ಅರಮನೆಯಿಂದ ಬಂಡೀಪುರದ ರಾಂಪುರ ಕ್ಯಾಂಪ್‌ಗೆ ಕಳುಹಿಸಲು ನಿರ್ಧರಿಸಲಾಗಿದೆ. ಆನೆ ಮರಿಗಾಗಿ ಮಣ್ಣು ಹಾಗೂ ಒಣಹುಲ್ಲಿನಿಂದ ದಿಬ್ಬವೊಂದನ್ನು ನಿರ್ಮಿಸಿ, ಅದರಲ್ಲಿ ಸುರಕ್ಷಿತವಾಗಿ ಮರಿಯನ್ನು ನಿಲ್ಲಿಸಿ ಕರೆದೊಯ್ಯಲು ಕ್ರಮ ಕೈಗೊಳ್ಳಲಾಗಿದೆ. ಗಜಪಡೆ ಬೀಳ್ಕೊಡುಗೆ ವೇಳೆ ಜನಜಂಗುಳಿ ಮರಿಯನ್ನು ನೋಡಲು ಮುಗಿ ಬೀಳಬಹುದು ಎಂಬ ಕಾರಣಕ್ಕೆ ಮುಂಜಾನೆಯೇ ತಾಯಿ ಲಕ್ಷ್ಮಿ ಹಾಗೂ ಮಗ ಶ್ರೀ ದತ್ತಾತ್ರೇಯ ಕಾಡಿನತ್ತ ಪ್ರಯಾಣ ಬೆಳೆಸಲಿವೆ.

24X7 ಗುಣಮಟ್ಟದ ವಿದ್ಯುತ್ ಪೂರೈಕೆ

ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಈಗ ಟಿಆರ್‌ಎಸ್ ರಾಷ್ಟ್ರೀಯ ಪಕ್ಷವಾಗಿ ಬಿಆರ್‌ಎಸ್ ಹೆಸರಿನಲ್ಲಿ ಹೊರಹೊಮ್ಮಿರುವುದನ್ನು ನಮ್ಮ ಪಕ್ಷ ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತದೆ. ಮುಂದಿನ ದಿನಗಳಲ್ಲಿ ನಾವು ಕೆಸಿಆರ್ ಅವರೊಂದಿಗೆ ಕೆಲಸ ಮಾಡುತ್ತೇವೆ ಎಂದರು ಕುಮಾರಸ್ವಾಮಿ. ತೆಲಂಗಾಣದಲ್ಲಿ ಜಾರಿ ಮಾಡಲಾಗಿರುವ ರೈತಬಂಧು, ದಲಿತ ಬಂಧು ಯೋಜನೆಗಳನ್ನು ರಾಜ್ಯದಲ್ಲಿಯೂ ಜಾರಿಗೆ ತರಲಾಗುವುದು ಎಂದು ಹೇಳಿದ ಕುಮಾರಸ್ವಾಮಿ, ಅಲ್ಲಿ ರೈತಬಂಧು ಯೋಜನೆಯಡಿ 24 ಗಂಟೆ ಉಚಿತ ವಿದ್ಯುತ್, ಪ್ರತಿ ವರ್ಷ ಎಕರೆಗೆ ಹತ್ತು ಸಾವಿರ ಸಹಾಯಧನ ಕೊಡುತ್ತಿದ್ದಾರೆ. ರೈತ ಆಕಸ್ಮಿಕ ಮರಣಕ್ಕೀಡಾದರೆ ತಕ್ಷಣ 5 ಲಕ್ಷ ರೂಪಾಯಿ ವಿಮಾ ಪರಿಹಾರ ತಲುಪುತ್ತಿದೆ. ರೈತರಿಗೆ ವಿಮೆಯನ್ನು ಭಾರತೀಯ ಜೀವ ವಿಮಾ ನಿಗಮದ(ಎಲ್‌ಐಸಿ) ಮೂಲಕ ಮಾಡಿಸಿದ್ದಾರೆ ಎಂದು ಕುಮಾರಸ್ವಾಮಿ ಅವರು ಮಾಹಿತಿ ನೀಡಿದರು.

ದಲಿತರಿಗೆ ಕುಟುಂಬದಲ್ಲಿಯೇ ಸ್ವ-ಉದ್ಯೋಗ ಮಾಡಲು ಹತ್ತು ಲಕ್ಷ ರೂಪಾಯಿ ನೆರವನ್ನು ನೀಡುತ್ತಿದೆ ತೆಲಂಗಾಣ ಸರ್ಕಾರ. ನೇರವಾಗಿ ಅವರ ಖಾತೆಗೆ ಹಣ ಜಮಾ ಮಾಡುವ ದಲಿತಬಂಧು ಯೋಜನೆ ಮಾಡಲಾಗಿದೆ. ಪ್ರತಿ ಜಿಲ್ಲೆಯಿಂದ ಕೆಲ ಸಂಘಟನೆ, ಪ್ರಗತಿ ಪರ ರೈತರು, ದಲಿತ ಸಂಘಟನೆ ಮುಖಂಡರನ್ನು ತೆಲಂಗಾಣಕ್ಕೆ ಅಧ್ಯಯನ ಪ್ರವಾಸಕ್ಕೆ ಕಳಿಸಿ. ಈ ಮೂಲಕ ನಿಮ್ಮ ಚುನಾವಣಾ ಪ್ರಚಾರಕ್ಕೆ ಈ ಅಂಶಗಳನ್ನು ಅಳವಡಿಸಿಕೊಳ್ಳಿ ಎಂದು ಕೆಸಿಆರ್ ಸಲಹೆ ನೀಡಿದ್ದಾರೆ ಎಂದು ಅವರು ಹೇಳಿದರು. ನಾನು ರಾಷ್ಟ್ರಮಟ್ಟದ ರಾಜಕೀಯಕ್ಕೆ ಹೋಗಲು ನಮ್ಮದು ಸಣ್ಣ ಪಕ್ಷ. ನಮಗೆ ಸಾಗುವ ಚೀಟಿ ಸಿಕ್ಕಿರುವುದು ಕರ್ನಾಟಕದಲ್ಲಿ ಮಾತ್ರ. ಹೀಗಾಗಿ ನಾವು ಹೊಂದೆ ಬಿಆರ್‌ಎಸ್ ಜಾಗ ಹುಡುಕುವುದಕ್ಕೆ ಆಗುತ್ತಾ ಎಂದ ಕುಮಾರಸ್ವಾಮಿ ಅವರು, ಕರ್ನಾಟಕ ಚುನಾವಣೆಯಲ್ಲಿ ನಮ್ಮ ಪಕ್ಷದ ಪ್ರಭಾವ ಇರಬೇಕು ಎಂದರು.

ರಾಜ್ಯದಲ್ಲಿ 15-20 ಕ್ಷೇತ್ರಗಳ ಮೇಲೆ ಕೆಸಿಆರ್ ಪ್ರಭಾವ ಇರಬಹುದು. ಅವರ ಅನೇಕ ಶಾಸಕರುಗಳಿಗೆ ಆ ಭಾಗದಲ್ಲಿ ನೆಂಟಸ್ತನ ಇದೆ. ಹೈದರಾಬಾದ್ ಕರ್ನಾಟಕದಲ್ಲಿ ನಾವು ನಾಲ್ಕು ಸ್ಥಾನ ಗೆದ್ದಿದ್ದೇವೆ. ಮುಂದಿನ ಚುನಾವಣೆಯಲ್ಲಿ ಕನಿಷ್ಠ ನಾವು 15-20 ಕ್ಷೇತ್ರ ಇಲ್ಲಿಂದ ಗೆಲ್ಲಬಹುದು. ಅಲ್ಲಿ ನಮ್ಮ ಪಕ್ಷದ ಸಂಘಟನೆ ಉತ್ತಮವಾಗಿದೆ ಎಂದು ಕುಮಾರಸ್ವಾಮಿ ಅವರು ಹೇಳಿದರು. ಭಾರತ್ ಜೋಡೋ ಯಾಕೆ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸುಮ್ಮನೆ ಹೋಗ್ತಿದ್ದಾರೆ ಎಂದು ಅವರು ಹೇಳಿದ್ದಾರೆ. ರಾಹುಲ್ ಗಾಂಧಿ ಅವರ ಹೇಳಿಕೆ ನೋಡಿದರೆ ಭಾರತ್ ಜೋಡೋಗಿಂತ ಕಾಂಗ್ರೆಸ್ ಜೋಡೋ ಮಾಡುವ ರೀತಿ ಇದೆ. ಕರ್ನಾಟಕಕ್ಕೆ ಭಾರತ್ ಜೋಡೋ ಯಾತ್ರೆ ಪ್ರವೇಶಿಸಿದಾಗ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಕೈ ಹಿಡಿದು ರಾಹುಲ್ ಗಾಂಧಿ ನಗಾರಿ ಬಾರಿಸಿದ್ದಾರೆ. ಎಲ್ಲರೂ ಒಗ್ಗಟ್ಟಾಗಿ ಹೋಗಿ ಅಂತ ಪದೇ ಪದೇ ಹೇಳ್ತಿದ್ದಾರೆ. ಈ ಪಾದಯಾತ್ರೆ ಮೇಲೆ ಚುನಾವಣೆ ನಡೆಯುವುದಿಲ್ಲ ಎಂದು ವ್ಯಂಗ್ಯವಾಡಿದರು.

ಆರ್‌ಜೆಡಿ ಬೆಂಬಲ

ಪಕ್ಷಗಳು ಅಧಿಕಾರದಲ್ಲಿವೆ. ಉಳಿದಿರುವ ಕರ್ನಾಟಕದಲ್ಲೂ ಪ್ರಾದೇಶಿಕ ಪಕ್ಷವೇ ಮುಂದಿನ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಬೇಕು. ರೈತರು, ದಲಿತರು ಮತ್ತು ಅಲ್ಪಸಂಖ್ಯಾತರ ಪರ ಧ್ವನಿ ಎತ್ತಲು ಬಿಆರ್‌ಎಸ್ ರಾಷ್ಟ್ರೀಯ ಪಕ್ಷ ಟೊಂಕ ಕಟ್ಟಿ ನಿಲ್ಲಲಿದೆ. ಇದಕ್ಕೆ ಉತ್ತರ ಪ್ರದೇಶದಲ್ಲಿ ಅಖಿಲೇಶ್ ಯಾದವ್, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ಒಡಿಶಾದ ಬಿಜೆಡಿ ನವೀನ್ ಪಟ್ನಾಯಕ್, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬೆಂಬಲ ನೀಡಲಿದ್ದಾರೆ ಎಂದು ಕುಮಾರಸ್ವಾಮಿಗೆ ತಿಳಿಸಿದ್ದಾರೆ.

ಜಂಬೂಸವಾರಿ ಯಶಸ್ವಿ

ಅರಮನೆ ಅಂಗಳದಲ್ಲಿ ಆನೆಗಳು ರಿಲ್ಯಾಕ್ಸ್

● ಮಾವುತರು, ಕಾವಾಡಿಗಳಿಗೂ ಆರಾಂ ● ಆನೆಗಳ ನಡೆಗೆ ಭಾರೀ ಪ್ರಶಂಸೆ



ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಂಡ ಕುಮ್ಕಿ ಆನೆ ಕಾವೇರಿ, ಸಾಲಾನೆ ಮಹೇಂದ್ರನಿಗೆ ಮಜ್ಜನ



ಅಂಬಾರಿ ಆನೆ ಅಭಿಮನ್ಯುವಿನೊಂದಿಗೆ ಮಕ್ಕಳೊಂದಿಗೆ ಫೋಟೊ ತೆಗೆಸಿಕೊಳ್ಳಲು ಮುಗಿಬಿದ್ದ ಜನರು

ಮೈಸೂರು,ಸೆ.6(ಎಂಟಿವೈ)- ನಾಡಹಬ್ಬ ದಸರಾ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆಯಲ್ಲಿ ಯಶಸ್ವಿಯಾಗಿ ಹೆಜ್ಜೆ ಹಾಕಿದ ದಸರಾ ಗಜಪಡೆ ಗುರುವಾರ ದಿನ ವಿಡೀ ಮೈಸೂರು ಅರಮನೆ ಆವರಣ ದಲ್ಲಿ ರಿಲ್ಯಾಕ್ಸ್ ಮೂಡ್‌ನಲ್ಲಿ ಕಳೆದವು.

ಜಂಜೂಸವಾರಿಯ ಯಶಸ್ಸಿನ ಹೀರೋ ಗಳೆನಿಸಿರುವ ದಸರಾ ಗಜಪಡೆಯ ನಾಯಕ ಅಭಿಮನ್ಯು, ಅಂಬಾರಿ ಹೊತ್ತಿದ್ದರಿಂದ, ಅದರ ಆಯಾಸ ನೀಗಲು ಬಿಸಿ ನೀರು ಮಜ್ಜನ ಮಾಡಿಸಲಾಯಿತು. ಅಂಬಾರಿ ಕಟ್ಟಲು ಪಕ್ಕೆಲುಬು ಹಾಗೂ ಹೊಟ್ಟೆ ಭಾಗದಲ್ಲಿ ಲೆದರ್ ಬೆಲ್ಟ್ ಬಿಗಿದಿದ್ದರಿಂದ ಪಕ್ಕೆಲುಬಿಗೆ ಹರಳೆಣ್ಣೆ ಹಚ್ಚಲಾಯಿತು. ಯಶಸ್ವಿ ಜಂಬೂಸವಾರಿಯಿಂದ ಮಾವುತರು, ಕಾವಾಡಿಗಳು ನಿರಾಳರಾಗಿದ್ದರು.

ಜನಜಂಗುಳಿ: ದಸರಾ ಮಹೋತ್ಸವಕ್ಕೆ ವಿವಿಧೆಡೆಯಿಂದ ಮೈಸೂರಿಗೆ ಆಗಮಿಸಿದ್ದ ಪ್ರವಾಸಿಗರು ಇಂದು ಬೆಳಗಿನಿಂದ ಮೈಸೂರು ಅರಮನೆ ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಅರಮನೆಗೆ ಬಂದ ಪ್ರವಾಸಿಗರು ಅಲ್ಲಿರುವ ದಸರಾ ಗಜಪಡೆಯ ದೂರದಿಂದಲೇ ವೀಕ್ಷಿಸುತ್ತಿದ್ದರು. ಅಲ್ಲದೇ, ಅಂಬಾರಿ ಆನೆ ಅಭಿಮನ್ಯು ಬಗ್ಗೆ ಅಕ್ಕರೆಯಿಂದ ಫೋಟೊ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಮಾವುತರು, ಕಾವಾಡಿಗಳಲ್ಲಿ ನೆಮ್ಮದಿ: ಜಂಬೂಸವಾರಿ ಯಶಸ್ವಿಯಾದ ಹಿನ್ನೆಲೆಯಲ್ಲಿ ದಸರಾ ಗಜಪಡೆಯ ಮಾವುತ, ಕಾವಾಡಿಗಳು ಇಂದು ಇಡೀ ದಿನ ನೆಮ್ಮದಿಯಿಂದ ಕಾಲಕಳೆದರು. ಆನೆಗಳನ್ನು ದಿನವಿಡೀ ಆರೈಕೆ ಮಾಡುವ ಮೂಲಕ ಅವುಗಳ ಯಶಸ್ಸಿನ ನಡೆಗೆ ಪ್ರಶಂಸೆ ವ್ಯಕ್ತಪಡಿಸುತ್ತಿದ್ದರು.


ಮದವೇರಿದ್ದರೂ ಅರ್ಜುನನ ಶಾಂತ ನಡೆ: ಜಂಬೂಸವಾರಿ ಮೆರವಣಿಗೆಯಲ್ಲಿ ಮುಂಚೂಣಿಯಲ್ಲಿ ನಿಶಾನೆ ಆನೆಯಾಗಿ ಸಾಗಿದ ಅರ್ಜುನ ಕಳೆದ 10 ದಿನಗಳಿಂದ ಮದವೇರಿದ್ದ. ನಿರಂತರವಾಗಿ ಪೌಷ್ಠಿಕ ಆಹಾರ ಸೇವಿಸಿದ ಹಿನ್ನೆಲೆಯಲ್ಲಿ ಮದದ ಲಕ್ಷಣ ಕಂಡು ಬಂದಿತ್ತು. ಹಾಗಾಗಿ ಕಳೆದ ಒಂದು ವಾರದಿಂದ ಅರ್ಜುನನಿಗೆ ಬಾಳೆ ಕಂದು ಸೇರಿದಂತೆ ನೈಸರ್ಗಿಕ ಆಹಾರ ನೀಡಿ, ಮದ ನಿಯಂತ್ರಿಸಲು ನಿರಂತರವಾಗಿ ಪ್ರಯತ್ನ ನಡೆಸಲಾಗಿತ್ತು. ಆದರೂ, ಅರ್ಜುನ ಶಾಂತ ರೀತಿ ಸಾಗುವ ಮೂಲಕ ಅಧಿಕಾರಿಗಳು ನಿಟ್ಟುಸಿರು ಬಿಡುವಂತಾಯಿತು. ಜನರಿಂದಲೂ ಗಜಪಡೆ ನಡೆಗೆ ಭಾರೀ ಪ್ರಶಂಸೆ ವ್ಯಕ್ತವಾಗಿದೆ.

ಅಭಿಮನ್ಯು ನಮ್ಮ ಭರವಸೆ ಹುಸಿ ಮಾಡಲಿಲ್ಲ

ಡಿಸಿಎಫ್ ಕರಿಕಾಳನ್ ಅತೀವ ಸಂತಸ

ಮೈಸೂರು, ಅ.6(ಎಂಟಿವೈ)- ದಸರಾ ಜಂಬೂ ಸವಾರಿ ಮೆರವಣಿಗೆ ಯಶಸ್ವಿಯಾಗಿದ್ದು, ಕ್ಯಾಪ್ಟನ್ ಅಭಿಮನ್ಯು ತನ್ನ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾನೆ ಎಂದು ಡಿಸಿಎಫ್ ಡಾ.ಕರಿಕಾಳನ್ ತಿಳಿಸಿದರು.

ಮೈಸೂರು ಅರಮನೆ ಆವರಣದಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚಿನ್ನದ ಅಂಬಾರಿ ಹೊತ್ತು ಅಭಿಮನ್ಯು ಅರಮನೆಯ ಬಲ ರಾಮ ದ್ವಾರದ ಮೂಲಕ ಹೊರಟು ಬನ್ನಿಮಂಟಪದ ಪಂಜಿನ ಕವಾಯತು ಮೈದಾನವನ್ನು 2.15 ಗಂಟೆಯಲ್ಲಿ ತಲುಪಿಸಿದ್ದಾನೆ. ಮಾರ್ಗದುದ್ದಕ್ಕೂ ಎರಡೂ ಬದಿಯಲ್ಲೂ ಲಕ್ಷಾಂತರ ಮಂದಿ ಜಂಬೂಸವಾರಿ ಯನ್ನು ವೀಕ್ಷಿಸಿದ್ದಾರೆ. ಜನರ ಕಿರುಚಾಟ, ಕೂಗಾಟ, ಸಾಂಸ್ಕೃತಿಕ ಕಲಾ ತಂಡಗಳ ಭಾರಿ ಸದ್ದಿನ ನಡುವೆಯೂ ಅಂಬಾರಿ ಹೊತ್ತಿದ್ದ ಅಭಿಮನ್ಯು ಸ್ವಲ್ಪವೂ ವಿಚಲಿತನಾಗದೆ ನಮ್ಮ ನಿರೀಕ್ಷೆಗೂ ಮೀರಿ ಸಂಯಮದಿಂದ ಹೆಜ್ಜೆ ಹಾಕಿದ್ದಾನೆ. ಅಂಬಾರಿ ಹೊತ್ತು 10 ಕಿ.ಮೀ. ಸಾಗುವ ಸಾಮರ್ಥ್ಯ ಅಭಿಮನ್ಯುವಿಗೆ ಇದೆ. ಮೆರವಣಿಗೆಯಲ್ಲಿ ಸಾಗಿದ ಎಲ್ಲಾ 9 ಆನೆಗಳು ಯಶಸ್ವಿಯಾಗಿ ಹೆಜ್ಜೆ ಹಾಕಿವೆ. ಗಜಪಡೆಯ ಮಾವುತರು, ಕಾವಾಡಿಗಳು ಕಳೆದ 60 ದಿನಗಳ ಕಾಲ ನೀಡಿದ ತರಬೇತಿ ಸಾರ್ಥಕವಾಗಿದೆ. ಸುಲಲಿತವಾಗಿ ಜಂಬೂಸವಾರಿ ನೆರವೇರಿದೆ ಎಂದರು.



ದಸರಾ ಆನೆಗಳಿಗೆ ಬೇರೆ, ಬೇರೆ ರೀತಿ ತರಬೇತಿ ನೀಡಿದ್ದರೂ ಜನ ಸಂದಣಿ ಹೆಚ್ಚಾಗಿದ್ದಾಗ ಆನೆಗಳು ಹೇಗೆ ಸಾಗುತ್ತವೋ ಎಂಬ ಆತಂಕ ನಮ್ಮನ್ನು ಕಾಡುತ್ತಿತ್ತು. ಬುಧವಾರದ ಮೆರವಣಿಗೆ ಪೂರ್ಣ ಗೊಂಡ ಮೇಲೆ ನಮ್ಮ ಚಿಂತೆ ದೂರವಾಯಿತು. ನಾಡಹಬ್ಬವನ್ನು ಯಶಸ್ವಿಗೊಳಿಸಬೇಕು ಎಂದು ನಾವು ಶತ ಪ್ರಯತ್ನ ಮಾಡಿದ್ದೆವು. ಜತೆಗೆ ತಾಯಿ ಚಾಮುಂಡೇಶ್ವರಿ ಕೃಪೆಯೂ ಇದೆ. ಇದು ನಿಜಕ್ಕೂ ಖುಷಿಯ ವಿಚಾರವಾಗಿದೆ ಎಂದರು.

ಲಕ್ಷ್ಮಿ ಮತ್ತು ಅದರ ಮರಿ ಆನೆ ಚೆನ್ನಾಗಿದೆ. ಶುಕ್ರವಾರ ಲಕ್ಷ್ಮಿಯನ್ನು ಮರಿಯೊಂದಿಗೆ ಕ್ಯಾಂಪ್‌ಗೆ ಕಳಿಸಲಾಗುತ್ತದೆ. ಮರಿ ಆನೆಯ ಓಡಾಟ ಹೆಚ್ಚಾಗಿದೆ. ಯಾರೇ ಮುಂದೆ ಬಂದರೂ ಅವರತ್ತ ಮುನ್ನುಗ್ಗಿ ಬರುತ್ತಿದೆ. ಒಂದೆಡೆ ನಿಲ್ಲುವಂತಿಲ್ಲ. ಆನೆ ವೈದ್ಯರ ಅಭಿಪ್ರಾಯ ಪಡೆದು ಮುಂದಿನ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದರು.


ಮಹೇಂದ್ರ, ಭೀಮಾ ಭವಿಷ್ಯದ ಆನೆಗಳು: ಜಂಬೂಸವಾರಿಯಲ್ಲಿ ಹೊಸ ಆನೆಗಳಾದ ಮಹೇಂದ್ರ ಮತ್ತು ಭೀಮಾ ಭರವಸೆ ಹೆಚ್ಚಿಸಿವೆ. ಭವಿಷ್ಯದಲ್ಲಿ ಈ ಎರಡು ಆನೆಗಳು ಅಂಬಾರಿ ಆನೆಗಳಾಗುವ ಲಕ್ಷಣ ಹೊಂದಿವೆ. ಈ ಹಿಂದೆ ಅರ್ಜುನ ಮತ್ತು ಅಭಿಮನ್ಯು ಬಗ್ಗೆ ಇರುವಂತೆ ಮುಂದಿನ ವರ್ಷಗಳಲ್ಲಿ ದಸರಾದಲ್ಲಿ ಮಹೇಂದ್ರ ಮತ್ತು ಭೀಮ ಬಗ್ಗೆಯೂ ಜನರಲ್ಲಿ ಭರವಸೆ ಇದೆ. ಪಾರ್ಥಸಾರಥಿ, ಸುಗ್ರೀವ, ಶ್ರೀರಾಮ ತಾಲೀಮಿನಲ್ಲಿ ಸಶಕ್ತವಾಗಿದ್ದವು. ಮೊದಲ ದಸರೆಯಾದ ಕಾರಣ ಮೆರವಣಿಗೆಗೆ ಕರೆ ತಂದಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ದಸರಾ ಆನೆಗಳಿಗೆ ಅ.7ರಂದು ಬೀಳ್ಕೊಡಲಾಗುತ್ತದೆ. ಬೆಳಗ್ಗೆ 9.30ರಿಂದ 10ರವರೆಗೂ ಪೂಜಾ ಕಾರ್ಯಕ್ರಮ ನಡೆಯಲಿದೆ. ಕತ್ತಲೆ ಆಗುವ ಒಳಗೆ ಆನೆಗಳನ್ನು ಕ್ಯಾಂಪ್‌ಗಳಿಗೆ ಕಳಿಸುವ ಕೆಲಸ ಮಾಡಲಾಗುತ್ತದೆ. ಲಕ್ಷ್ಮೀ ಮತ್ತು ಮರಿ ಆನೆಯನ್ನೂ ಶುಕ್ರವಾರ ಕ್ಯಾಂಪ್‌ಗೆ ಕಳಿಸಲಾಗುತ್ತದೆ ಎಂದರು.



ದಸರಾ ದೀಪಾಲಂಕಾರ ವಿಸ್ತರಣೆ: ಸಂಜೆ 4ರಿಂದ ರಾತ್ರಿ 11ರವರೆಗೆ ಕೆಲವೆಡೆ ಏಕಮುಖ ಸಂಚಾರ

ಹಲವೆಡೆ ವಾಹನ ನಿಲುಗಡೆಗೆ ನಿಷೇಧ



ಮೈಸೂರು, ಅ.6(ಎಸ್‌ಬಿಡಿ)- ದಸರಾ ಮಹೋತ್ಸವದ ದೀಪಾಲಂಕಾರವನ್ನು ಅ.10ರವರೆಗೆ ವಿಸ್ತರಿಸಿರುವ ಹಿನ್ನೆಲೆಯಲ್ಲಿ ಆ ದಿನಗಳಲ್ಲಿ ಸಂಜೆ 4ರಿಂದ 11ರವರೆಗೆ ಅನ್ವಯವಾಗುವಂತೆ ಕೆಲ ರಸ್ತೆಗಳಲ್ಲಿ ಏಕಮುಖ ಸಂಚಾರ ಹಾಗೂ ವಾಹನ ನಿಲುಗಡೆ ನಿಷೇಧವನ್ನು ವಿಸ್ತರಣೆ ಮಾಡಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಆದೇಶಿಸಿದ್ದಾರೆ.

ಏಕಮುಖ ಸಂಚಾರ: ಅರಮನೆ ಸುತ್ತ ಗನ್‌ಹೌಸ್ ವೃತ್ತ ಬಿ.ಎನ್.ರಸ್ತೆ ಜಯಚಾಮರಾಜ ಒಡೆಯರ್ ವೃತ್ತ(ಹಾರ್ಡಿಂಜ್), ಚಾಮರಾಜ ಒಡೆಯರ್ ವೃತ್ತ, ಕೆ.ಆರ್. ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ, ಬಸವೇಶ್ವರ ವೃತ್ತ ಮಾರ್ಗದಲ್ಲಿ ಏಕಮುಖವಾಗಿ ಸಂಚರಿಸಬೇಕು. ಕೆ.ಆರ್.ವೃತ್ತದಿಂದ ಸಯ್ಯಾಜಿರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಇರ್ವಿನ್ ರಸ್ತೆ, ನೆಹರು ವೃತ್ತ, ಅಶೋಕ ರಸ್ತೆ, ಚಾಮರಾಜ ಒಡೆಯರ್ ವೃತ್ತದಿಂದ ಕೆ.ಆರ್.ವೃತ್ತದ ಕಡೆಗೆ ಸಂಚರಿಸಬಹುದು. ಅಶೋಕ ರಸ್ತೆ ದಾವೂದ್‌ಖಾನ್ ರಸ್ತೆ ಜಂಕ್ಷನ್(ಗಾಂಧಿ ಮೆಡಿಕಲ್ಸ್)ನಿಂದ ನೆಹರು ವೃತ್ತದವರೆಗೆ ದಕ್ಷಿಣಕ್ಕೆ, ಚಾಮರಾಜ ಜೋಡಿ ರಸ್ತೆಯಿಂದ ಬನುಮಯ್ಯ ವೃತ್ತದ ಕಡೆಗೆ, ತ್ಯಾಗರಾಜ ರಸ್ತೆಯಲ್ಲಿ ಅಗ್ರಹಾರ ವೃತ್ತದಿಂದ ಚಾಮರಾಜ ಜೋಡಿ ರಸ್ತೆಗೆ, ಲೋಕರಂಜನ್ ರಸ್ತೆಯಲ್ಲಿ ಸರ್ಕಸ್ ಮೈದಾನದ ಜಂಕ್ಷನ್‌ನಿಂದ ಹಾರ್ಡಿಂಜ್ ವೃತ್ತದ ಕಡೆಗೆ, ಮೃಗಾಲಯ ರಸ್ತೆಯಲ್ಲಿ ಚಿರಾಗ್ ಹೋಟೆಲ್ ಜಂಕ್ಷನ್‌ನಿಂದ ಎಫ್.ಕೆ.ಇರಾನಿ ವೃತ್ತದ ಕಡೆಗೆ ಹಾಗೂ ಚಂದ್ರಗುಪ್ತ ರಸ್ತೆಯಲ್ಲಿ ಅಶೋಕ ರಸ್ತೆಯಿಂದ ಬಿ.ಎನ್.ರಸ್ತೆ ಕಡೆಗೆ ಮಾತ್ರ ಸಂಚರಿಸಬಹುದಾಗಿದೆ.

ನಿಲುಗಡೆ ನಿಷೇಧ: ಅರಮನೆ ಸುತ್ತಲಿನ ಬಿ.ಎನ್.ರಸ್ತೆ ಎ.ವಿ.ರಸ್ತೆ ಸಯ್ಯಾಜಿರಾವ್ ರಸ್ತೆ ಪುರಂದರ ರಸ್ತೆ, ರಮಾವಿಲಾಸ ರಸ್ತೆ ಮುಡಾ ಜಂಕ್ಷನ್‌ನಿಂದ ಬನುಮಯ್ಯ ಕಾಲೇಜು ಜಂಕ್ಷನ್‌ವರೆಗೆ ಸೇರಿದಂತೆ ದಸರಾ ಸಂದರ್ಭದಲ್ಲಿದ್ದಂತೆ ಸುಮಾರು 20 ರಸ್ತೆಗಳ ಇಕ್ಕೆಲದಲ್ಲಿ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ.

ಪರಿಶಿಷ್ಟರ ಮೀಸಲಾತಿ ಹೆಚ್ಚಿಸಲು ಅನಿರ್ದಿಷ್ಟಾವಧಿ ಸತ್ಯಾಗ್ರಹದ ಹಿನ್ನೆಲೆ

ಅ.9ರಂದು ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ



ಮೈಸೂರು,ಅ.6(ಪಿಎಂ)- ಪರಿಶಿಷ್ಟ ಜಾತಿಗೆ ಶೇ.17 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಸತ್ಯಾಗ್ರಹ ಅ.9ಕ್ಕೆ 241ಕ್ಕೆ ಕಾಲಿಡುತ್ತಿದ್ದು, ಅಂದು ಫ್ರೀಡಂಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಿವೃತ್ತ ನ್ಯಾ.ಹೆಚ್.ಎನ್.ನಾಗಮೋಹನದಾಸ್ ಆಯೋಗದ ವರದಿಯಂತೆ ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಿಸಲು ಆಗ್ರಹಿಸಿ ಶ್ರೀಗಳು ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಸತ್ಯಾಗ್ರಹ ಇಂದಿಗೆ 238 ದಿನಗಳನ್ನು ಪೂರೈಸಿದ್ದು, 241ಕ್ಕೆ ಕಾಲಿಡುವ ಅ.9ರಂದು ಬೃಹತ್ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ 5 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಪರಿಶಿಷ್ಟ ಸಮಾಜದ ಜನತೆ ಸಮಾವೇಶಗೊಂಡು ಭಾರೀ ಹೋರಾಟದ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ಸಂದೇಶ ರವಾನಿಸಲಿದ್ದಾರೆ. ಶ್ರೀಗಳೊಂದಿಗೆ ಸರ್ಕಾರ ಕೇವಲ ಚರ್ಚೆ ಮಾಡಿದ್ದು ಬಿಟ್ಟರೆ ಬೇಡಿಕೆ ಈಡೇರಿಸಲು ಮುಂದಾಗಿಲ್ಲ. ಶ್ರೀಗಳ ಹೋರಾಟವನ್ನು ಸರ್ಕಾರ ಲಘುವಾಗಿ ಪರಿಗಣಿಸಿದೆ. ನಮ್ಮ ಹಕ್ಕಿಗಾಗಿ ಬೇಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಎಸ್‌ಪಿಯ ಎಲ್ಲಾ ಸಂಘಟಕರು ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದು, ವಿವಿಧ ಪಕ್ಷಗಳ ಮುಖಂಡರು ಪಕ್ಷಾತೀತವಾಗಿ ಭಾಗವಹಿಸಲಿದ್ದಾರೆ. ಮೈಸೂರು, ಚಾಮರಾಜನಗರ ಜಿಲ್ಲೆಗಳಿಂದ ಕನಿಷ್ಠ 30 ಸಾವಿರ ಮಂದಿ ಪಾಲ್ಗೊಳ್ಳುತ್ತಿದ್ದು, ರಾಜ್ಯದಲ್ಲಿ ಪರಿಶಿಷ್ಟರ ಜನಸಂಖ್ಯೆ ಒಂದೂವರೆ ಕೋಟಿ ಇದ್ದು, ನಮ್ಮ ಬೇಡಿಕೆಗೆ ಸರ್ಕಾರ ಸ್ಪಂದಿಸದೇ ಇದ್ದರೆ ಮುಂದಿನ ದಿನಗಳಲ್ಲಿ ತಕ್ಕ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಎರಡು-ಮೂರು ವರ್ಗಗಳ ಮಾತ್ರವೇ ಹೆಚ್ಚಾಗಿ ರಾಜಕೀಯ ಅಧಿಕಾರ ಪಡೆದುಕೊಳ್ಳುತ್ತಿವೆ. ಲಿಂಗಾಯತ, ಒಕ್ಕಲಿಗ ಮತ್ತು ಬ್ರಾಹ್ಮಣ ಸಮುದಾಯಗಳಿಗೆ ಮಾತ್ರ ಮುಖ್ಯಮಂತ್ರಿ ಸ್ಥಾನ ಅಲಂಕರಿಸಲು ಸಾಧ್ಯವಾಗಿದೆ. ಆದರೆ ನಾವು ಅತೀ ಹೆಚ್ಚು ಜನಸಂಖ್ಯೆ ಇದ್ದರೂ ಆ ಸ್ಥಾನ ಅಲಂಕರಿಸಲು ಇಂದಿಗೂ ಸಾಧ್ಯವಾಗಿಲ್ಲ ಎಂದರು.

ಪರಿಶಿಷ್ಟ ಜಾತಿ, ಪಂಗಡದ ಅಭ್ಯರ್ಥಿಗಳು ಯಾವುದೇ ಪಕ್ಷದಿಂದ ಆಯ್ಕೆಯಾದರೂ ಅವರಿಗೆ ಸ್ವತಂತ್ರವಿಲ್ಲ. ಕಾರಣ ಅವರವರ ಕ್ಷೇತ್ರಗಳಲ್ಲಿ ಬೇರೆ ಸಮುದಾಯದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿರುವ ಕಾರಣ ಅವರ ಕೈಕಟ್ಟಿ ಹಾಕಿದಂತಾಗುತ್ತದೆ. ಹಾಗಾಗಿ ನಮ್ಮ ಸಮುದಾಯ ಯಾವುದೇ ಶಾಸಕರು, ಸಂಸದರು ಕೇವಲ ತಮ್ಮ ಕುಟುಂಬದ ಹಿತಕಾಯಲಷ್ಟೇ ಸೀಮಿತಗೊಂಡಿದ್ದಾರೆ. ಇದನ್ನು ತಪ್ಪಿಸುವ ಸಲುವಾಗಿಯೇ ಡಾ.ಅಂಬೇಡ್ಕರ್ ದಲಿತ ಸಮುದಾಯಕ್ಕೆ ಪ್ರತ್ಯೇಕ ಮತದಾನದ ಹಕ್ಕು ಬೇಕೆಂದು ಪ್ರತಿಪಾದಿಸಿದ್ದರು ಎಂದು ಪ್ರಶ್ನೆಗಳಿಗೆ ಉತ್ತರಿಸಿದರು. ಪ್ರಗತಿಪರ ಚಿಂತಕರಾದ ವಿಷಕಂಠ, ಸೋಮಯ್ಯ ಮಲೆಯೂರು, ಅಹಿಂದ ಮುಖಂಡ ಚಿಕ್ಕ ಜವರಪ್ಪ ಗೋಷ್ಠಿಯಲ್ಲಿದ್ದರು.

ಅ.9ರಂದು ಮೈಸೂರು ಜಿಲ್ಲಾ ಕದಳಿ ಮಹಿಳಾ ಸಮಾವೇಶ



ಮೈಸೂರು, ಅ.6(ಪಿಎಂ)- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕದಳಿ ಮಹಿಳಾ ವೇದಿಕೆ ಮೈಸೂರು ಘಟಕದ ವತಿಯಿಂದ ಅ.9ರಂದು ಮೈಸೂರು ಜಿಲ್ಲಾ ಕದಳಿ ಮಹಿಳಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಜಿಲ್ಲಾಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಕದಳಿ ಮಹಿಳಾ ವೇದಿಕೆ ಸ್ಥಾಪನೆಗೊಂಡು 22 ವರ್ಷಗಳಾಗಿದ್ದು, ನಗರದ ವಿವಿಧ ಬಡಾವಣೆಗಳಲ್ಲಿ 19 ಮಹಿಳಾ ಬಳಗಗಳು ವೇದಿಕೆಯಡಿ ಕಾರ್ಯನಿರ್ವಹಿಸುತ್ತಿವೆ. ಇದೇ ಪ್ರಥಮ ಬಾರಿಗೆ ವೇದಿಕೆಯ ಜಿಲ್ಲಾ ಸಮಾವೇಶ ಆಯೋಜಿಸಲಾಗಿದೆ ಎಂದರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗದಗದ ಶ್ರೀ ತೋಂಟದಾರ್ಯ ಮಠದ ಡಾ.ಶ್ರೀ ತೋಂಟದ ಸಿದ್ಧರಾಮ ಸ್ವಾಮೀಜಿ ಸಾನಿಧ್ಯದಲ್ಲಿ ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಡಾ.ತೇಜಸ್ವಿನಿ ಅನಂತಕುಮಾರ್ ಸಮಾವೇಶ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಪರಿಷತ್ತಿನ ಗೌರವ ಸಲಹೆಗಾರ ಡಾ.ಗೊ.ರು.ಚನ್ನಬಸಪ್ಪ ಸಮಾವೇಶದ ಸ್ಮರಣಿಕೆ 'ಧಾರಿಣಿ' ಬಿಡುಗಡೆ ಮಾಡಲಿದ್ದು, ಪರಿಷತ್ತಿನ ಅಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ವೇದಿಕೆಯ ರಾಜ್ಯ ಸಂಚಾಲಕಿ ಸುಶೀಲಾ ಸೋಮಶೇಖರ್ ಉಪಸ್ಥಿತರಿರುವರು. ಮಧ್ಯಾಹ್ನ 12ಕ್ಕೆ 'ಆಧುನಿಕ ಜೀವನ ಪ್ರವಾಹ ; ಮಹಿಳೆ' ಕುರಿತು ಚಿಂತನಗೋಷ್ಠಿ ನಡೆಯಲಿದ್ದು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕಿ ಡಾ.ಎಂ.ಎಸ್.ಆಶಾದೇವಿ, ಬೆಂಗಳೂರು ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕಿ ಸುಮಂಗಲ ಎಸ್.ಮುಮ್ಮಿಗಟ್ಟಿ ವಿಚಾರ ಮಂಡಿಸಲಿದ್ದಾರೆ ಎಂದರು.

ಮಧ್ಯಾಹ್ನ 3ಕ್ಕೆ 'ಕಾಯಕ ಜೀವಿಗಳು ಮತ್ತು ಮಹಿಳೆಯರು' ಕುರಿತು ಹಿರಿಯ ಸಾಹಿತಿ ಡಾ.ಸಿ.ವೀರಣ್ಣ ಉಪನ್ಯಾಸ ನೀಡಲಿದ್ದಾರೆ. ಸಂಜೆ 4ಕ್ಕೆ ಬೆಂಗಳೂರಿನ ಶ್ರೀಬೇಲಿ ಮಠದ ಶಿವರುದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ಸುದ್ದಿವಾಹಿನಿ ಸಂಪಾದಕ ಅಜಿತ್ ಹನುಮಕ್ಕನವರ್ ಸಮಾರೋಪ ಭಾಷಣ ಮಾಡಲಿದ್ದಾರೆ. ರಾಜ್ಯ ಸರ್ಕಾರದ ಪರಿಸರ ರಾಯಭಾರಿ ಡಾ.ಸಾಲುಮರದ ತಿಮ್ಮಕ್ಕ ಅತಿಥಿಯಾಗಿ ಭಾಗವಹಿಸಲಿದ್ದು, ಮಾಜಿ ಸಚಿವೆ ಡಾ.ಗೀತಾ ಮಹದೇವ ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಚಾಮರಾಜನಗರ ಡಿವೈಎಸ್‌ಪಿ ಪ್ರಿಯದರ್ಶಿನಿ ಈಶ್ವರ್ ಸಾಣಿಕೊಪ್ಪ ಹಾಗೂ ಕೃಷಿ ಜಂಕ್ಷನ್ ಸಂಸ್ಥಾಪಕಿ ಡಾ.ಚೈತ್ರ ಭರತ್ ಅವರನ್ನು ಸನ್ಮಾನಿಸಲಾಗುವುದು. ಸಂಜೆ 6ಕ್ಕೆ 'ಅನುಭಾವದೊಳು ವಚನ' ನೃತ್ಯ ರೂಪಕ ಪ್ರದರ್ಶನ ಇರಲಿದೆ ಎಂದು ವಿವರಿಸಿದರು. ಪರಿಷತ್ತಿನ ನಗರಾಧ್ಯಕ್ಷ ಮ.ಗು.ಸದಾನಂದಯ್ಯ, ಜಿಲ್ಲಾಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಕದಳಿ ಮಹಿಳಾ ವೇದಿಕೆಯ ನೀಲಾಂಬಿಕಾ, ಜಯಾಗೌಡ, ವಾಗ್ದೇವಿ ಗೋಷ್ಠಿಯಲ್ಲಿದ್ದರು.



ಅ. 9 ರಂದು ವಿದ್ವಾನ್ ಬಿ.ಎನ್.ಎಸ್. ಮುರಳಿ ಅವರಿಂದ ಗಾಯನ

ಮೈಸೂರು, ಅ.6- ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ಅ. 9 ರಂದು ಸಂಜೆ 6 ಗಂಟೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ-247ರ ಅಂಗವಾಗಿ ವಿದ್ವಾನ್ ಬಿ.ಎನ್.ಎಸ್. ಮುರಳಿ ಅವರಿಂದ ಗಾಯನ ಏರ್ಪಡಿಸಲಾಗಿದೆ. ವಿದ್ವಾನ್ ಎಂ.ವಿ. ಶಾಂತಕುಮಾರ್ ಮತ್ತು ವಿದ್ವಾನ್ ಎಂ.ಆರ್. ಮಂಜುನಾಥ್ ಪಕ್ಕವಾದ್ಯದಲ್ಲಿ ಸಹಕಾರ ನೀಡಲಿದ್ದಾರೆ.

ದಸರಾ ಫಲಪುಷ್ಪ ಪ್ರದರ್ಶನಕ್ಕೆ 10 ದಿನದಲ್ಲಿ 6 ಲಕ್ಷಕ್ಕೂ ಅಧಿಕ ಮಂದಿ ಭೇಟಿ

● ಮತ್ತಷ್ಟು ದಿನ ವಿಸ್ತರಣೆಗೆ ಒತ್ತಾಯ: ಬಿಸಿಲಿನ ಝಳದಲ್ಲೂ ತಾಜಾತನ ಕಾಯ್ದುಕೊಂಡ ಆಯೋಜಕರು ● ಸಮಾರೋಪ ಸಮಾರಂಭದಲ್ಲಿ ಅತ್ಯುತ್ತಮ ಪ್ರದರ್ಶನಕ್ಕೆ ಬಹುಮಾನ

ಮೈಸೂರು, ಅ.6(ಎಂಕೆ)– ಮೈಸೂರಿನ ಕುಪ್ಪಣ ಪಾರ್ಕ್‌ನಲ್ಲಿ ಆಯೋಜಿಸಲಾಗಿದ್ದ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಬಾರೀ ಮೆಚ್ಚುಗೆ ವ್ಯಕ್ತವಾಗಿದ್ದು, 10 ದಿನಗಳಲ್ಲಿ ಸುಮಾರು 6 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದಾರೆ.

ಎರಡು ವರ್ಷಗಳ ನಂತರ ನಡೆದ ಅದ್ಧೂರಿ ದಸರಾ ಉತ್ಸವದಲ್ಲಿ ಪ್ರವಾಸಿಗರ ನೆಚ್ಚಿನ ಆಕರ್ಷಣೆಯಾಗಿದ್ದ ಫಲಪುಷ್ಪ ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ದಸರಾ ರಜೆ ಮುಗಿಯುವವರೆಗೂ ಮುಂದುವರೆಸಿದ್ದರೆ ಚೆನ್ನಾಗಿರುತ್ತಿತ್ತು ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.

ಹೂಗಳಿಂದ ಅಲಂಕರಿಸಲಾಗಿದ್ದ ದಿವಂಗತ ನಟ ಪುನೀತ್ ರಾಜ್‌ಕುಮಾರ್ ಪುತ್ಥಳಿ, 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಗಾಜಿನ ಮನೆಯೊಳಗೆ 20 ಅಡಿ ಎತ್ತರದ ರಾಷ್ಟ್ರಪತಿ ಭವನದ ಮಾದರಿ, 7 ಅಡಿ ಎತ್ತರದ ಜೇನುಹುಳು, 12 ಅಡಿ ಎತ್ತರದ ಜಿರಾಫೆ, 7 ಅಡಿ ಎತ್ತರದ ದಪ್ಪ ಮೆಣಸಿನ ಕಾಯಿಯಿಂದ ಸಿಂಗರಿಸಿದ್ದ ಮನೆ, ಡೈರಿ ಡೇ, ಸುಂದರ ಹೂ ತೋಟ ಇತ್ಯಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಣೆ ಮಾಡಿದವು.

ಜನರ ದಂಡು: ಫಲಪುಷ್ಪ ಪ್ರದರ್ಶನ ಮುಕ್ತಾಯಗೊಂಡಿದ್ದರೂ ಗುರುವಾರ ಕುಪ್ಪಣ ಪಾರ್ಕ್‌ಗೆ ಜನರ ದಂಡೇ ಹರಿದು ಬಂದಿತ್ತು. ಬೆಳಿಗ್ಗೆಯಿಂದ ಸಂಜೆವರೆಗೂ ಪಾರ್ಕ್‌ನ ಎಲ್ಲೆಡೆ ಜನರೇ ಎದ್ದು ಕಾಣುತ್ತಿದ್ದರು. ತಿಂಡಿ–ತಿನಿಸುಗಳ ಮಾರಾಟವೂ ಜೋರಾಗಿತ್ತು. ಮನೆಮಂದಿಯೊಂದಿಗೆ ಆಗಮಿಸುತ್ತಿರುವ ಜನರು, ಕಲಾಕೃತಿಗಳ ಬಳಿ ನಿಂತು ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು. ಶಾಲಾ ಮಕ್ಕಳಿಗೆ ಇನ್ನೂ ದಸರಾ ರಜೆ ಮುಗಿದಿಲ್ಲ. ಫಲಪುಷ್ಪ ಪ್ರದರ್ಶನವನ್ನು ಇನ್ನೂ ಎರಡ್ಮೂರು ದಿನ ವಿಸ್ತರಣೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎನ್ನುತ್ತಿದ್ದ ಹಲವರು, ಮನರಂಜನೆಗಾಗಿ ಹುಡುಕಾಟ ನಡೆಸುತ್ತಿದ್ದರು.

ಬಿಸಿಲಿಗೆ ಬಾಡಿದ ಹೂಗಳು: ಪ್ರತಿವರ್ಷ ದಸರಾ ಸಂದರ್ಭದಲ್ಲಿ ಕಾಡುತ್ತಿದ್ದ ಮಳೆ ಈ ವರ್ಷ ಬಿಡುವು ನೀಡಿದ್ದು ಸಂತಸದ ವಿಚಾರವಾದರೆ, ಫಲಪುಷ್ಪ ಪ್ರದರ್ಶನಕ್ಕೆ ತೊಂದರೆಯಾಯಿತು. ಬಿಸಿಲಿನ ತಾಪದಿಂದಾಗಿ ಹೂಗಳಿಂದ ಅಲಂಕೃತಗೊಂಡಿದ್ದ ವಿವಿಧ ಕಲಾಕೃತಿಗಳು ಎರಡೇ ದಿನಕ್ಕೆ ಬಾಡಿದಂತೆ ಕಾಣುತ್ತಿದ್ದವು. ನೋಡಲು ಸುಂದರವಾಗಿಯೇ ಕಾಣುತ್ತಿದ್ದರೂ ಹೂಗಳ ಪರಿಮಳ ಕಡಿಮೆಯಾಗುತ್ತಿತ್ತು. 10 ದಿನಗಳಲ್ಲಿ 2 ದಿನ ಮಾತ್ರ ಮಳೆ ಬಂದಿದ್ದು ಬಿಟ್ಟರೆ ಉಳಿದ ಎಲ್ಲಾ ದಿನವೂ ಬಿಸಿಲಿತ್ತು.

2 ಬಾರಿ ಬದಲಾವಣೆ: ಬಿಸಿಲಿನಿಂದಾಗಿ ಈ ವರ್ಷ ಕಲಾಕೃತಿಗಳಿಗೆ ಎರಡು ಬಾರೀ ಹೂಗಳನ್ನು ಬದಲಾವಣೆ ಮಾಡಲಾಗಿದೆ. ಎರಡೇ ದಿನಕ್ಕೆ ಕೆಲವೊಂದು ಕಲಾಕೃತಿಗಳು ಬಾಡಿದಂತೆ ಕಾಣುತ್ತಿದ್ದವು. ಟಿಕೆಟ್ ಖರೀದಿಸಿ ಬರುವ ಜನರಿಗೆ ಬೇಸರವಾಗಬಾರದು, ಮತ್ತೆ ಮತ್ತೆ ಭೇಟಿ ನೀಡುವಂತಾಗಬೇಕು ಎಂಬ ಉದ್ದೇಶದಿಂದ ಹೂಗಳನ್ನು ಎರಡು ಬಾರಿ ಬದಲಾವಣೆ ಮಾಡಿದ್ದೇವೆ. ಆದ್ದರಿಂದಲೇ ಈ ವರ್ಷ ನಿರೀಕ್ಷೆಗೂ ಮೀರಿ ಜನರು ಭೇಟಿ ನೀಡಿದ್ದಾರೆ ಎಂದು ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕಿ ಬಿ.ಎನ್.ಸುವೇದ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ದಸರಾ ಫಲಪುಷ್ಪ ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಜೆ.ಕೆ. ಟೈರ್ಸ್ ಅಂಡ್ ಇಂಡಸ್ಟ್ರೀಸ್ ಕೈಗಾರಿಕಾ ಸಂಸ್ಥೆಗೆ ಅಡ್ಮಿನ್ ಗಾರ್ಡನ್ ಲಾನ್, ಮೆಕ್ಸಿಕನ್ ಲಾನ್, ಆರ್ನಮೆಂಟಲ್ ಪಾಟ್ಸ್, ರೋಸ್ ಗಾರ್ಡನ್ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಆರ್.ಬಿ.ಐ.ನ ವ್ಯವಸ್ಥಾಪಕ ನಿರ್ದೇಶಕರಾದ ಮನಾಸ್ ರಂಜನ್ ಮೊಹಂತಿ ವಿತರಿಸಿದರು. ಚಿತ್ರದಲ್ಲಿ ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಎಚ್.ಎಂ. ನಾಗರಾಜ್, ಉಪನಿರ್ದೇಶಕ ಕೆ. ರುದ್ರೇಶ್, ಹಿರಿಯ ಸಹಾಯಕ ನಿರ್ದೇಶಕಿ ಬಿ.ಎನ್. ಸುವೇದ ಕೃಷ್ಣಕುಮಾರ್, ಶಶಿಕಲಾ ನಾಗರಾಜ್, ವಿಜಯಕುಮಾರಿ, ದಾಸಪ್ಪ ಇದ್ದಾರೆ.



> ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಪ್ರವಾಸಿಗರು, ಮೈಸೂರಿಗರು ಈ ವರ್ಷದ ಫಲಪುಷ್ಪ ಪ್ರದರ್ಶನಕ್ಕೆ ಬಾರೀ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 6 ಲಕ್ಷಕ್ಕೂ ಹೆಚ್ಚು ಜನರು ಭೇಟಿ ನೀಡಿದ್ದಾರೆ. ಹಲವು ಕೈಗಾರಿಕೆಗಳು, ಸಂಸ್ಥೆಗಳು ಹಾಗೂ ಮಹಿಳೆಯರು ಫಲಪುಷ್ಪ ಪ್ರದರ್ಶನದ ಅಂಗವಾಗಿ ನಡೆಸಿದ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ಪರಿಸರ ಕಾಳಜಿ ತೋರಿದ್ದಾರೆ.
>
> **- ಬಿ.ಎನ್.ಸುವೇದ,** ಹಿರಿಯ ಸಹಾಯಕ ನಿರ್ದೇಶಕಿ, ತೋಟಗಾರಿಕೆ ಇಲಾಖೆ

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ನಡೆದ ಫಲಪುಷ್ಪ ಪ್ರದರ್ಶನಕ್ಕೂ ಮೆಚ್ಚುಗೆ...

ಮೈಸೂರು ವಿಶ್ವ ವಿದ್ಯಾನಿಲಯದ ವತಿಯಿಂದ ಕುಕ್ಕರಹಳ್ಳಿ ಕೆರೆ ಆವರಣ, ಕ್ರಾಫರ್ಡ್ ಹಾಲ್ ಹಾಗೂ ಮಾನಸಗಂಗೋತ್ರಿಯಲ್ಲಿನ ವಿವಿಧ ವಿಭಾಗಗಳ ಎದುರು 6 ಸಾವಿರಕ್ಕೂ ಹೆಚ್ಚು ಹೂಗಿಡಗಳಿಂದ ಸಿಂಗರಿಸಿದ್ದ ಫಲಪುಷ್ಪ ಪ್ರದರ್ಶನಕ್ಕೂ ಮೆಚ್ಚುಗೆ ವ್ಯಕ್ತವಾಗಿದೆ. ಕುಕ್ಕರಹಳ್ಳಿ ಕೆರೆಗೆ ವಾಯುವಿಹಾರಕ್ಕೆ ಬರುವವರು ಫಲಪುಷ್ಪ ಪ್ರದರ್ಶನ ಕಂಡು ಹರ್ಷ ವ್ಯಕ್ತಪಡಿಸಿದ್ದಾರೆ.

15ಕ್ಕೂ ಹೆಚ್ಚು ಮಳಿಗೆಗಳು: ಸಾವಯವ ಕೃಷಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ 15ಕ್ಕೂ ಹೆಚ್ಚು ಮಳಿಗೆಗಳನ್ನು ಹಾಕಲಾಗಿತ್ತು. ಮಳಿಗೆಗಳಲ್ಲಿ ರೈತರು ಬೆಳೆದ ಸಾವಯವ ಆಹಾರ ಪದಾರ್ಥಗಳ ಮಾರಾಟ ಸೇರಿದಂತೆ ಇತರೆ ತಿಂಡಿ–ತಿನಿಸುಗಳ ಮಾರಾಟಕ್ಕೂ ಅವಕಾಶ ಮಾಡಿಕೊಡಲಾಗಿತ್ತು. ಅಲ್ಲದೆ ಜಾಯಿಂಟ್ ವೀಲ್ ಇದ್ದಿದ್ದರಿಂದ ಮಕ್ಕಳಿಗೂ ಮನರಂಜನೆ ದೊರೆಯಿತು ಎಂದರು.

ವಿಜೇತರಿಗೆ ಬಹುಮಾನ ವಿತರಣೆ: ಮನೆ, ಕಚೇರಿ, ಫ್ಯಾಕ್ಟರಿ, ಆಸ್ಪತ್ರೆ, ಪೆಟ್ರೋಲ್ ಬಂಕ್, ಶಾಲಾ–ಕಾಲೇಜು ಎದುರು ಫಲಪುಷ್ಪ ಪ್ರದರ್ಶನದ ಅಲಂಕಾರಿಕ ತೋಟಗಳ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಬೃಹತ್, ಮಧ್ಯಮ ಹಾಗೂ ಸಣ್ಣ ಪ್ರಮಾಣದಲ್ಲಿ ಅಡ್ಮಿನ್ ಗಾರ್ಡನ್ ಲಾನ್, ಮೆಕ್ಸಿಕನ್ ಲಾನ್, ಆರ್ನಮೆಂಟಲ್ ಪಾಟ್ಸ್, ರೋಸ್ ಗಾರ್ಡನ್ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಜೆ.ಕೆ.ಟೈರ್ಸ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ಪಡೆದುಕೊಂಡಿತು.

ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈ.ಲಿ., ಇನ್ಫೋಸಿಸ್, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವಿಸ್ ಲಿಮಿಟೆಡ್, ಬ್ಯಾಂಕರ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಸೇರಿದಂತೆ ಹಲವು ಕೈಗಾರಿಕೆಗಳು, ಸಂಸ್ಥೆಗಳು ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದುಕೊಂಡವು. ಪುಷ್ಪಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಅನೇಕ ಮಹಿಳೆಯರು ಬಹುಮಾನ ಗೆದ್ದರು.





ಮೈಸೂರು ಮೂಲದ ಚಿತ್ರ ನಿರ್ದೇಶಕನಿಗೆ ರಾಷ್ಟ್ರೀಯ ಪ್ರಶಸ್ತಿ



ನವದೆಹಲಿಯ ವಿಜ್ಞಾನ ಭವನದಲ್ಲಿ ಸೆ.30ರಂದು ನಡೆದ 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ 'ತಲೆದಂಡ' ನಿರ್ದೇಶಕ ಪ್ರವೀಣ್ ಕೃಪಾಕರ್ ಪ್ರಶಸ್ತಿ ಸ್ವೀಕರಿಸಿದರು. ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಸಿಂಗ್ ಚಿತ್ರದಲ್ಲಿದ್ದಾರೆ.

ಮೈಸೂರು, ಅ.6(ಎಸ್‌ಬಿಡಿ)– ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾದ 'ತಲೆದಂಡ' ಚಿತ್ರದ ನಿರ್ದೇಶಕ ಹಾಗೂ ನಿರ್ದೇಶಕ ಪ್ರವೀಣ್ ಕೃಪಾಕರ್ ಇತ್ತೀಚೆಗೆ ಪುರಸ್ಕಾರ ಸ್ವೀಕರಿಸಿದರು.

'ತಲೆದಂಡ' ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ–2020ನೇ ಸಾಲಿನ ಪರಿಸರ ಸಂರಕ್ಷಣೆ ವಿಭಾಗದ ಅತ್ಯುತ್ತಮ ಚಿತ್ರವೆಂದು 2022ರ ಜುಲೈ 22ರಂದು ಘೋಷಿಸಲಾಗಿತ್ತು. ಸೆ.30ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರವೀಣ್ ಕೃಪಾಕರ್‌ಗೆ ಪ್ರಶಸ್ತಿ ಪ್ರದಾನ ಮಾಡಿದರು.



'ಕೃಪಾನಿಧಿ ಕ್ರಿಯೇಷನ್ಸ್' ಬ್ಯಾನರ್‌ನಲ್ಲಿ ನಿರ್ಮಾಣವಾದ 'ತಲೆದಂಡ', ದಿವಂಗತ ಸಂಚಾರಿ ವಿಜಯ್ ಅವರ ಕೊನೆಯ ಚಿತ್ರ. ಮಾನಸಿಕ ಅಶಕ್ತನಾಗಿ ನೈಜ ನಟನೆಯೊಂದಿಗೆ ಸಮರ್ಥವಾಗಿ ಪಾತ್ರ ನಿರ್ವಹಿಸಿರುವ ಸಂಚಾರಿ ವಿಜಯ್‌ಗೆ ಚಿತ್ರ ನಿರ್ದೇಶಕ ಪ್ರವೀಣ್ ಕೃಪಾಕರ್ ಪ್ರಶಸ್ತಿ ಸಮರ್ಪಿಸಿದರು.

ಚಿತ್ರದಲ್ಲಿ ಮಾನಸಿಕ ಅಶಕ್ತ ವ್ಯಕ್ತಿ ಮರಗಳನ್ನು ಉಳಿಸಲು ಹೋರಾಟವನ್ನೇ ನಡೆಸುತ್ತಾನೆ. ಆ ಪಾತ್ರವನ್ನು ಸಂಚಾರಿ ವಿಜಯ್ ಅತ್ಯದ್ಭುತವಾಗಿ ನಟಿಸಿದ್ದಾರೆ. ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ಸಿಗುವ ವಿಶ್ವಾಸವಿತ್ತು. ಆದರೆ ಅವರ ಮರಣಾನಂತರ ಈ ಪ್ರಶಸ್ತಿ ಸ್ವೀಕರಿಸಲು ಮನಸ್ಸು ಭಾರವೆನಿಸಿದೆ. ಈ ಪ್ರಶಸ್ತಿಯನ್ನು ಸಂಚಾರಿ ವಿಜಯ್‌ಗೆ ಅರ್ಪಿಸುತ್ತೇನೆ ಎಂದು ಅವರು ನುಡಿದರು.

ಚಿತ್ರದ ಸಂದೇಶ: 'ತಲೆದಂಡ' ಭಾರತೀಯ ಪನೋರಮಾ ಚಿತ್ರ. ಮಾನಸಿಕ ಅಶಕ್ತ ಯುವಕ 'ಕುನ್ನ' ಈ ಚಿತ್ರದ ಕಥಾನಾಯಕ. ಮಾನಸಿಕ ಸಮಸ್ಯೆ ಇದ್ದರೂ ಆತ ಅಪ್ಪಟ ಪರಿಸರ ಪ್ರೇಮಿ. ಚಿಕ್ಕವಯಸ್ಸಿನಿಂದಲೇ ತಂದೆ ಮೂಲಕ ಪ್ರಕೃತಿ ಮೇಲೆ ಗಟ್ಟಿಯಾದ ಬಾಂಧವ್ಯ ಬೆಸೆದುಕೊಳ್ಳುವ 'ಕುನ್ನ', ತಂದೆ ಕಾಲವಾದ ಬಳಿಕ ತಾಯಿಯ ಆಸರೆಯಲ್ಲಿ ಬೆಳೆಯುತ್ತಾನೆ. ನರ್ಸರಿಯಲ್ಲಿ ದಿನಗೂಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಲೇ ಗಿಡ–ಮರಗಳ ಮೇಲಿನ ಪ್ರೀತಿ ಮತ್ತಷ್ಟು ಗಟ್ಟಿಯಾಗುತ್ತದೆ. ಈ ನಡುವೆ ಆತನ ಗ್ರಾಮಕ್ಕೆ ಹೆದ್ದಾರಿಯಿಂದ ಸಂಪರ್ಕ ರಸ್ತೆ ನಿರ್ಮಾಣಕ್ಕೆ ಸರ್ಕಾರ ಮುಂದಾಗುತ್ತದೆ. ಆದರೆ ಸ್ಥಳೀಯ ಶಾಸಕ ತನ್ನ ಜಮೀನು ಉಳಿಸಿಕೊಳ್ಳುವ ಸಲುವಾಗಿ ರಸ್ತೆಯ ನೀಲನಕ್ಷೆಯನ್ನೇ ಬದಲಿಸುತ್ತಾನೆ. ಪರಿಣಾಮ ಅಪಾರ ಸಂಖ್ಯೆಯ ಮರಗಳಿರುವ ಜಾಗದಲ್ಲಿ ರಸ್ತೆ ನಿರ್ಮಾಣಕ್ಕೆ ನಿರ್ಧರಿಸಲಾಗುತ್ತದೆ. ಇದಕ್ಕೆ ಪರಿಸರ ಪ್ರೇಮಿ 'ಕುನ್ನ' ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಾನೆ. ಆದರೂ ಬಲವಂತವಾಗಿ ಮರಗಳ ಹನನಕ್ಕೆ ಮುಂದಾದ ಸರ್ಕಾರಿ ಅಧಿಕಾರಿಗೆ ಥಳಿಸಿ ತನ್ನ ಆಕ್ರೋಶ ವ್ಯಕ್ತಪಡಿಸುತ್ತಾನೆ. ಆಗ ಕುನ್ನನನ್ನು ಬಂಧಿಸಲಾಗುತ್ತದೆ. ಆತನಿಂದ ಮರಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದೇ? ಎನ್ನುವುದು ಈ ಚಿತ್ರದ ತಿರುಳು.

ಆಕಾಶ ಏರ್ ವಿಮಾನದಲ್ಲಿದೆ ಸಾಕು ಪ್ರಾಣಿಗಳ ಕೊಂಡೊಯ್ಯಲು ಅವಕಾಶ!

ನವದೆಹಲಿ: ನೂತನ ಆಕಾಶ ಏರ್ ವಿಮಾನಯಾನ ಸಂಸ್ಥೆಯ ಬುಕ್ಕಿಂಗ್ ಅಕ್ಟೋಬರ್ 15ರಿಂದ ಆರಂಭವಾಗುತ್ತಿದ್ದು, ಸಾಕು ಪ್ರಾಣಿಗಳನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಿದೆ.

ಆದರೆ ಕ್ಯಾಬಿನ್‌ನಲ್ಲಿ ಸಾಕುಪ್ರಾಣಿಗಳ ಕೆಜಿ 7 ಕೆಜಿಗಿಂತ ಹೆಚ್ಚು ಮೀರುವಂತಿರಬಾರದು. ಉಳಿದವುಗಳನ್ನು ಕಾರ್ಗೋದಲ್ಲಿ ಅನುಮತಿಸಲಾಗುವುದು. ಸಾಕುಪ್ರಾಣಿಗಳಿಗೆ ಅನುಮತಿ ಲಭ್ಯವಿರುವ ಮೊದಲ ಆಕಾಶ ಏರ್ ಫ್ಲೈಟ್ ನವೆಂಬರ್ 1 ರಂದು ಟೇಕ್ ಆಫ್ ಆಗಲಿದೆ. '7 ಕೆಜಿ (ಒಂದು ಸಾಕುಪ್ರಾಣಿ) ವರೆಗಿನ ಸಾಕುಪ್ರಾಣಿಗಳನ್ನು ಕ್ಯಾಬಿನೊಳಗೆ ಅನುಮತಿ ನೀಡಲಾಗಿದೆ. ಉಳಿದವುಗಳನ್ನು ಕಾರ್ಗೋದಲ್ಲಿ ಅನುಮತಿಸಬಹುದು' ಎಂದು ಆಕಾಶ ಏರ್ ಹೇಳಿದೆ. ಪ್ರಯಾಣಿಕರು ತಮ್ಮ ಸಾಕುಪ್ರಾಣಿಗಳೊಂದಿಗೆ ಪ್ರಯಾಣಿಸಲು ಅನುಮತಿಸುವ ಎರಡನೇ ವಾಣಿಜ್ಯ ಭಾರತೀಯ ವಿಮಾನ ಸಂಸ್ಥೆ ಆಕಾಶ ಏರ್. ಇದಕ್ಕೂ ಮೊದಲು, ಏರ್ ಇಂಡಿಯಾ ದೇಶದ ಏಕೈಕ ವಾಣಿಜ್ಯ ವಿಮಾನಯಾನ ಸಂಸ್ಥೆಯಾಗಿದ್ದು, ನಿರ್ದಿಷ್ಟ ತೂಕದೊಂದಿಗೆ ಸಾಕುಪ್ರಾಣಿಗಳನ್ನು ವಿಮಾನದಲ್ಲಿ ಅನುಮತಿಸಿತ್ತು.

ದಸರಾ ಮುಗಿದರೂ ಮೈಸೂರಲ್ಲಿ ಪ್ರವಾಸಿಗರ ಸಂಖ್ಯೆ ಕಡಿಮೆ ಆಗಿಲ್ಲ ಎತ್ತ ನೋಡಿದರೂ ಜನವೋ ಜನ ; ಕಾಲಿಟಲ್ಲಿ ಟ್ರಾಫಿಕ್ ಜಾಮ್

ಮೈಸೂರು, ಅ.6(ಜಿಎ)– ಅದ್ಧೂರಿ ಜಂಬೂಸವಾರಿ ಮೆರವಣಿಗೆ ಯಶಸ್ವಿಯಾಗಿದ್ದು, ಈಗ ನಗರದ ಯಾವ ಪ್ರವಾಸಿ ತಾಣಗಳನ್ನು ನೋಡಿದರು ಜನವೋ ಜನ. ಮೈಸೂರಿನಾದ್ಯಂತ ಪ್ರವಾಸಿಗರೇ ತುಂಬಿ ತುಳುಕುತ್ತಿದ್ದು, ಎತ್ತ ನೋಡಿದರು ಟ್ರಾಫಿಕ್ ಜಾಮ್ ಕಿರಿಕಿರಿ ಗುರುವಾರ ಸಂಜೆಯೂ ಸಾಮಾನ್ಯವಾಗಿತ್ತು.

ಜಂಬೂಸವಾರಿಯ ಮೂಲಕ ದಸರಾ ಮಹೋತ್ಸವ ಸಂಪನ್ನಗೊಂಡಿದೆ. ಆದರೆ, ಇನ್ನೂ ಮೈಸೂರಿನಲ್ಲಿ ದೀಪಾಲಂಕಾರ, ವಸ್ತುಪ್ರದರ್ಶನ ಸೇರಿದಂತೆ ಇತರೆ ಮನರಂಜನಾ ತಾಣಗಳನ್ನು ವೀಕ್ಷಿಸಲು ಪ್ರವಾಸಿಗರು ಉತ್ಸುಕರಾಗಿದ್ದು, ಇದರಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಗುರುವಾರ ಸಂಜೆಯೂ ಟ್ರಾಫಿಕ್ ಜಾಮ್ ಕಂಡುಬಂತು.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ದೀಪಾಲಂಕಾರ, ಆಹಾರ ಮೇಳ, ವಸ್ತುಪ್ರದರ್ಶನ, ಚಲನಚಿತ್ರೋತ್ಸವ, ಯುವ ಸಂಭ್ರಮ, ಯುವ ದಸರಾ, ಫಲಪುಷ್ಪ ಪ್ರದರ್ಶನ ಹಾಗೂ ಜಂಬೂ ಸವಾರಿಯನ್ನು ಕಣ್ತುಂಬಿಕೊಳ್ಳಲು ದೇಶ–ವಿದೇಶಗಳಿಂದ ಲಕ್ಷಾಂತರ ಪ್ರವಾಸಿಗರ ದಂಡೇ ನಗರಕ್ಕೆ ಲಗ್ಗೆ ಇಟ್ಟಿತ್ತು. ನವರಾತ್ರಿಯ ಅಷ್ಟು ದಿನಗಳು ಇಡೀ ಮೈಸೂರಲ್ಲಿ ಟ್ರಾಫಿಕ್ ಜಾಮ್ ಕಾಡಿತ್ತು. ಅದು ಇನ್ನೂ ಮುಂದುವರೆದಿದೆ.


ಪ್ರವಾಸಿಗರು ಬೆಳಗ್ಗೆಯಿಂದ ಅರಮನೆ, ಮೃಗಾಲಯ, ಕಾರಂಜಿ ಕೆರೆ, ಚಾಮುಂಡಿ ಬೆಟ್ಟ ಸೇರಿದಂತೆ ಎಲ್ಲಾ ಪ್ರಮುಖ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ್ದು, ಸಂಜೆ ನಂತರ ಕಾರು, ದ್ವಿಚಕ್ರ ವಾಹನಗಳಲ್ಲಿ ದೀಪಾಲಂಕಾರ ವೀಕ್ಷಿಸುತ್ತಿರುವ ಪರಿಣಾಮ ಅರಮನೆ ಒಳ ಮತ್ತು ಹೊರಭಾಗ, ದೊಡ್ಡ ಗಡಿಯಾರ, ನ್ಯೂ ಸಯಾಜಿರಾವ್ ರಸ್ತೆ, ಹಾರ್ಡಿಂಜ್ ವೃತ್ತದ ಸುತ್ತಲೂ ಕಿ.ಮೀಗಟ್ಟಲೇ ಟ್ರಾಫಿಕ್ ಜಾಮ್‌ನಿಂದ ವಾಹನ ಸವಾರರು ಪರದಾಡುತ್ತಿದ್ದ ದೃಶ್ಯಗಳು ಕಂಡು ಬಂತು.

ದಸರಾ ವಸ್ತು ಪ್ರದರ್ಶನ ಡಿಸೆಂಬರ್ ಅಂತ್ಯದವರೆಗೂ ಇರಲಿದೆ. ದೀಪಾಲಂಕಾರವನ್ನು ಅ.10ರ ವರೆಗೂ ವಿಸ್ತರಣೆ ಮಾಡಿದ್ದು, ಮೈಸೂರಿಗರಿಗೆ ಸಂಜೆ ವೇಳೆ ಟ್ರಾಫಿಕ್ ಜಾಮ್ ಕಿರಿಕಿರಿ ಇನ್ನೂ ಕೆಲವು ದಿನಗಳವರೆಗೂ ಇರಲಿದೆ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ.



ಸಮರೋಪಾದಿ ಸ್ವಚ್ಛತಾ ಕಾರ್ಯ; ಕೆಲವೇ ಗಂಟೆಗಳಲ್ಲಿ ರಾಜಮಾರ್ಗ ಸೌಂದರ್ಯ ಇಮ್ಮಡಿ

ಜಂಬೂ ಸವಾರಿ ನಂತರ ಪೌರಕಾರ್ಮಿಕರ ಸ್ವಚ್ಛತೆಯ ಚಮತ್ಕಾರ





ಎಂ.ಬಿ.ಪವನ್‌ಮೂರ್ತಿ

ಮೈಸೂರು,ಅ.6(ಪಿಎಂ)– ಜಂಬೂ ಸವಾರಿ ಮೆರವಣಿಗೆ ಮುಕ್ತಾಯವಾಗುತ್ತಿದ್ದಂತೆ ಸಮರೋಪದಿ ಸ್ವಚ್ಛತಾ ಕಾರ್ಯದಲ್ಲಿ ನಿರತರಾದ ಪೌರಕಾರ್ಮಿಕರು, ಕೆಲವೇ ಗಂಟೆಗಳಲ್ಲಿ ಇಡೀ ರಾಜಮಾರ್ಗ ಸ್ವಚ್ಛಗೊಳಿಸಿ, ಅದರ ಅಂದ–ಚಂದ ಎಂದಿಗಿಂತಲೂ ಇಮ್ಮಡಿಗೊಳ್ಳುವಂತೆ ಚಮತ್ಕಾರ ಮೆರೆದರು.

ಜಂಬೂ ಸವಾರಿ ಕಣ್ತುಂಬಿಕೊಳ್ಳಲು ಲಕ್ಷಾಂತರ ಜನ ರಾಜಮಾರ್ಗದಲ್ಲಿ ಬೀಡುಬಿಟ್ಟಿದ್ದರಿಂದ ಅಲ್ಲೆಲ್ಲಾ ಚೆಲ್ಲಾಡಿದ್ದ ನಾನಾ ರೀತಿಯ ತ್ಯಾಜ್ಯಕ್ಕೆ ಕೆಲವೇ ಗಂಟೆಗಳಲ್ಲಿ ಪೌರಕಾರ್ಮಿಕರು ಮುಕ್ತಿ ನೀಡಿ ಗಮನ ಸೆಳೆದರು. ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್–ವಿಕ್ಟರ್ ರಸ್ತೆ, ಕೆಆರ್ ವೃತ್ತ, ಸಯ್ಯಾಜಿ ರಾವ್ ರಸ್ತೆ (ಎಲ್ಲಾ ವೃತ್ತಗಳು ಒಳಗೊಂಡಂತೆ), ಹೈವೆ ವೃತ್ತ ಹಾಗೂ ಬನ್ನಿಮಂಟಪ ಮುಖ್ಯ ರಸ್ತೆಯಲ್ಲಿ (ನೆಲ್ಸನ್ ಮಂಡೇಲಾ ರಸ್ತೆ) ಜಂಬೂ ಸವಾರಿ ಮೆರವಣಿಗೆ ಸಾಗಲಿದ್ದು, ಇದನ್ನು ರಾಜಮಾರ್ಗ ಎಂದೇ ಕರೆಯಲಾಗುತ್ತದೆ. ಈ ಮಾರ್ಗದುದ್ದಕ್ಕೂ ರಸ್ತೆಯ ಇಕ್ಕೆಲಗಳಲ್ಲಿ ಲಕ್ಷಾಂತರ ಜನಸ್ತೋಮ ಜಮಾಯಿಸಿ ಜಂಬೂ ಸವಾರಿಯ ಅಂದ ಸವಿಯುವುದು ಪ್ರತಿವರ್ಷದ ಸಂಭ್ರಮ.

ಅಂತೆಯೇ ಈ ಬಾರಿಯೂ ಇಲ್ಲಿ ನೆರೆದಿದ್ದ ಜನ ಸಾಗರ ಬಾಯಾರಿಕೆಗೆ ಬಳಸಿದ ನೀರಿನ ಬಾಟಲಿ, ತಿಂಡಿ ತಿನಿಸುಗಳ ಪ್ಲಾಸ್ಟಿಕ್ ಕವರ್‌ಗಳು ಸೇರಿದಂತೆ ನಾನಾ ರೀತಿಯ ತ್ಯಾಜ್ಯ ರಾಜಮಾರ್ಗದ ಉದ್ದಕ್ಕೂ ಭಾರೀ ಪ್ರಮಾಣದಲ್ಲಿ ಚೆಲ್ಲಾಡಿತ್ತು. ಜಂಬೂ ಸವಾರಿ ಮೆರವಣಿಗೆ ಪೂರ್ಣಗೊಳ್ಳುತ್ತಿದ್ದಂತೆ ಮನೆಗಳಿಗೆ ಹಿಂತಿರುಗಲು ಜನಜಂಗುಳಿಯ ತರಾತುರಿಯಲ್ಲಿ ಪಾದರಕ್ಷೆಗಳು ಎಷ್ಟೋ ಜನರ ಕಾಲ್ತಪ್ಪಿ ಅಲ್ಲಲ್ಲಿ ರಾಶಿ ಹಿಡಿದಿತ್ತು. ಈ ಪೈಕಿ ಕಿತ್ತು ಹರಿದ ಚಪ್ಪಲಿಗಳೂ ಅದೆಷ್ಟೋ ಸಂಖ್ಯೆಯಲ್ಲಿ ತ್ಯಾಜ್ಯಗಳಾಗಿ ಪರಿವರ್ತನೆಯಾಗಿದ್ದವು.



ಇಂತಹ ಒಣತ್ಯಾಜ್ಯಗಳೂ ಮಾತ್ರವಲ್ಲದೆ, ಮಹಿಳೆಯರು ಮುಡಿದಿದ್ದ ಹೂ, ಅರೆಬರೆ ತಿಂದ ತಿಂಡಿ ತಿನಿಸು ಫುಟ್‌ಪಾತ್ (ಪಾದಚಾರಿ ಮಾರ್ಗ) ತುಂಬೆಲ್ಲಾ ಚೆಲ್ಲಾಡಿ ದುರ್ವಾಸನೆಯೂ ಹೊರಹೊಮ್ಮುವ ಅನೈರ್ಮಲ್ಯದ ವಾತಾವರಣಕ್ಕೆ ಎಡೆಮಾಡಿತ್ತು. ಈ ರೀತಿಯ ಸನ್ನಿವೇಶದಲ್ಲಿ ಬುಧವಾರ ರಾತ್ರಿ 11ರ ಸುಮಾರಿಗೆ ರಾಜಮಾರ್ಗದ ಸ್ವಚ್ಛತೆ ಕಾರ್ಯಕ್ಕಿಳಿದ ದಸರಾ ಉತ್ಸವಕ್ಕಾಗಿ ಹೆಚ್ಚುವರಿಯಾಗಿ ನಿಯೋಜನೆಗೊಂಡ 180 ಪೌರಕಾರ್ಮಿಕರು ಸಮರೋಪಾದಿಯಲ್ಲಿ ತ್ಯಾಜ್ಯ ಸಂಗ್ರಹಣೆಗೆ ಮುಂದಾದರು.

ಕಾಂಪ್ಯಾಕ್ಟರ್ ವಾಹನಗಳು ಹಾಗೂ ಆಟೋಟಿಪ್ಪರ್‌ಗಳೊಂದಿಗೆ ರಸ್ತೆಗಿಳಿದು ಸ್ವಚ್ಛತಾ ಕಾರ್ಯಕೈಗೊಂಡು ಬೆಳಗಿನ ಜಾವ 3.45ರವರೆಗೂ ಶ್ರಮಿಸಿದ ಪೌರಕಾರ್ಮಿಕರು, ತ್ಯಾಜ್ಯಗಳು ಚೆಲ್ಲಾಡಿದ್ದ ಗುರುತು ಸಿಗದಂತೆ ಅಚ್ಚುಕಟ್ಟಾಗಿ ಸ್ವಚ್ಛಗೊಳಿಸಿದರು.

3 ಟನ್ ತ್ಯಾಜ್ಯ ಸಂಗ್ರಹ: ರಾಜಮಾರ್ಗ ಹಾಗೂ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಸ್ವಚ್ಛತಾ ಕಾರ್ಯದಿಂದ ಬುಧವಾರ ರಾತ್ರಿ ಸುಮಾರು 3 ಟನ್ ತ್ಯಾಜ್ಯ ಸಂಗ್ರಹಿಸಲಾಯಿತು. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಮಹಾನಗರ ಪಾಲಿಕೆ ಆರೋಗ್ಯಾಧಿಕಾರಿ ಡಾ.ಡಿ.ಜಿ. ನಾಗರಾಜ್, ಜಂಬೂ ಸವಾರಿ ಮೆರವಣಿಗೆ ಮುಗಿಯುತ್ತಿದ್ದಂತೆ ಸ್ವಚ್ಛತಾ ಕೆಲಸ ಆರಂಭಿಸಿ ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡಲಾಗಿದೆ. ಶೇ.80ರಷ್ಟು ಒಣ ತ್ಯಾಜ್ಯ ಸಂಗ್ರಹವಾಗಿದ್ದರೆ, 20ರಷ್ಟು ಹಸಿ ತ್ಯಾಜ್ಯ ಸಂಗ್ರಹವಾಯಿತು. ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರೂ ಬುಧವಾರ ರಾತ್ರಿ ಎರಡು ಬಾರಿ ಸ್ವಚ್ಛತಾ ಕಾರ್ಯ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲದೆ, ಪೌರಕಾರ್ಮಿಕರಿಗೆ ಚಹಾ ಕೊಡಿಸಿ ಉತ್ತೇಜನ ನೀಡಿದರು ಎಂದು ಹೇಳಿದರು.

ಅರಮನೆ ಆವರಣದಲ್ಲಿ ಅರಮನೆ ಮಂಡಳಿ ಸ್ವಚ್ಛತಾ ಸಿಬ್ಬಂದಿ, ಪಾಲಿಕೆ ಪೌರಕಾರ್ಮಿಕರು ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ಬುಧವಾರ ರಾತ್ರಿಯೇ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಗುರುವಾರ ಬೆಳಗ್ಗೆಯೂ ಇಲ್ಲಿ ಸ್ವಚ್ಛತಾ ಕಾರ್ಯ ಮುಂದುವರೆದಿದೆ. ಸುರಕ್ಷಾ ಫೌಂಡೇಷನ್‌ನ ನಾಲ್ವರು ಮಹಿಳೆಯರು ಗುರುವಾರ ಬೆಳಗ್ಗೆ ಸ್ವಯಂ ಪ್ರೇರಿತರಾಗಿ ಪೊರಕೆ ಹಿಡಿದು ಮೂರು ಗಂಟೆ ಕಾಲ ಅರಮನೆ ಸುತ್ತಮುತ್ತಲು ಸ್ವಚ್ಛತಾ ಕಾರ್ಯ ನಡೆಸಿದರು ಎಂದು ತಿಳಿಸಿದರು.

ಮೈಸೂರು 'ಸ್ವಚ್ಛ ನಗರ' ಎಂಬುದುಕ್ಕೆ ಹೆಸರುವಾಸಿಯಾಗಿದೆ ಇದರಲ್ಲಿ ಪೌರಕಾರ್ಮಿಕರ ಪಾತ್ರ ಪ್ರಮುಖ. ದಸರಾ ಉತ್ಸವಕ್ಕಾಗಿ 12 ದಿನಗಳಿಗೆ 365 ಹೆಚ್ಚುವರಿ ಪೌರಕಾರ್ಮಿಕರನ್ನು ಗುತ್ತಿಗೆಯಡಿ ತೆಗೆದುಕೊಳ್ಳಲಾಗಿತ್ತು. ಆಹಾರ ಮೇಳ, ಯುವ ದಸರಾ, ಯುವ ಸಂಭ್ರಮ ಸೇರಿದಂತೆ ದಸರಾ ಕಾರ್ಯಕ್ರಮ ಸ್ಥಳಗಳಲ್ಲಿ ಇವರನ್ನು ಮೂರು ಪಾಳಿಯಲ್ಲಿ ನಿಯೋಜಿಸಿ, 24 ಗಂಟೆ ಕಾಲ ಸ್ವಚ್ಛತೆ ಕಾರ್ಯ ನಡೆಯುವಂತೆ ಕ್ರಮ ವಹಿಸಲಾಯಿತು. ಪಾಲಿಕೆಯ 2,100 ಮಂದಿ ಪೌರಕಾರ್ಮಿಕರು ನಿತ್ಯದ ಸ್ವಚ್ಛತೆಯಲ್ಲಿ ತೊಡಗಿ, ದಸರಾ ಉತ್ಸವ ಸಂದರ್ಭದಲ್ಲಿ ಸ್ವಚ್ಛತೆಗೆ ಹೆಚ್ಚು ಶ್ರಮಿಸಿದ್ದಾರೆ. ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ಸಹಕಾರದೊಂದಿಗೆ ದಸರಾ ಮಹೋತ್ಸವದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು ಎಂದು ತಿಳಿಸಿದರು.

ಅರಮನೆ ಅಂಗಳದಲ್ಲಿ ಜಂಬೂ ಸವಾರಿ ಬಳಿಕ 1 ಟನ್ ತ್ಯಾಜ್ಯ ಸಂಗ್ರಹ

ಅರಮನೆ ಆವರಣದಲ್ಲಿ ಬುಧವಾರ ರಾತ್ರಿ ಸುಮಾರು 1 ಟನ್ ತ್ಯಾಜ್ಯ ಸಂಗ್ರಹಿಸಲಾಗಿದೆ. ಇಲ್ಲಿ ಗುರುವಾರವೂ ಸ್ವಚ್ಛತಾ ಕಾರ್ಯ ಮುಂದುವರೆದಿದೆ. ಜಂಬೂ ಸವಾರಿ ಬಳಿಕವೇ ಬುಧವಾರ ರಾತ್ರಿಯೇ ಸಾಧ್ಯವಾದಷ್ಟು ತ್ಯಾಜ್ಯ ಸಂಗ್ರಹಿಸಲಾಗಿತ್ತು. ಅಲ್ಲದೆ, ಇಲ್ಲಿ ಜಂಬೂ ಸವಾರಿ ವೀಕ್ಷಣೆಗಾಗಿ ಹಾಕಿದ್ದ ಶಾಮಿಯಾನ ತೆರವು ಕಾರ್ಯಾಚರಣೆಯೂ ಮುಂದುವರೆದಿದೆ. ಇಲ್ಲಿ ನೆರೆದಿದ್ದ ಜನಸ್ತೋಮ ಬಳಸಿ ಬಿಸಾಡಿದ ತ್ಯಾಜ್ಯಗಳಲ್ಲಿ ನೀರಿನ ಪ್ಲಾಸ್ಟಿಕ್ ಬಾಟಲಿಗಳ ಸಂಖ್ಯೆಯೇ ಹೆಚ್ಚಿದೆ. ಇವುಗಳನ್ನು ಸಂಗ್ರಹಿಸಿ ಮೂಟೆ ಕಟ್ಟಿ ವಿಲೇವಾರಿ ಮಾಡಲಾಗುತ್ತಿದೆ. ಅಲ್ಲದೆ, ರಾಜಮಾರ್ಗವಾದ ಸಯ್ಯಾಜಿರಾವ್ ರಸ್ತೆಯಲ್ಲಿ ಇಲ್ಲಿನ ಇಕ್ಕೆಲಗಳಲ್ಲಿ ಅಳವಡಿಸಿದ್ದ ಕಬ್ಬಿಣದ ಮೆಸ್, ಬ್ಯಾರಿಕೇಡ್ ಮತ್ತು ಮರದ ಕಂಬಗಳ ತೆರವು ಕಾರ್ಯವೂ ಆರಂಭಗೊಂಡಿದೆ.

ಸಾರ್ವಜನಿಕರು ಲೋಕಾಯುಕ್ತಕ್ಕೆ ದೂರು ನೀಡುವುದನ್ನು ತಪ್ಪಿಸಿ

ಸಮಸ್ಯೆ ಬಗೆಹರಿಸಲು ಮುಂದಾಗುವಂತೆ ಅಧಿಕಾರಿಗಳಿಗೆ ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು ಸೂಚನೆ

ತಿ.ನರಸೀಪುರ, ಅ.6– ಸಾರ್ವಜನಿಕರು ತಮ್ಮ ಸಮಸ್ಯೆ ಬಗೆಹರಿಸಿಕೊಳ್ಳಲು ಲೋಕಾಯುಕ್ತಕ್ಕೆ ದೂರು ನೀಡುವುದನ್ನು ತಪ್ಪಿಸಿ, ಅಧಿಕಾರಿಗಳು ಇಲಾಖಾ ಮಟ್ಟದಲ್ಲೇ ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು ಸೂಚಿಸಿದರು.

ಪಟ್ಟಣದ ಗುರುಭವನದಲ್ಲಿ ಆಯೋಜಿಸಿದ್ದ ಲೋಕಾಯುಕ್ತ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಬೇಕು. ಸಣ್ಣಪುಟ್ಟ ಸಮಸ್ಯೆಗಳಿಗೂ ಲೋಕಾಯುಕ್ತದವರೆಗೂ ಬರುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಜಾಗೃತರಾಗಿ ಕೆಲಸ ಮಾಡಬೇಕು. ಸರ್ಕಾರಿ ಕೆಲಸ ದೇವರ ಕೆಲಸವೆಂಬ ಭಾವನೆಯೊಂದಿಗೆ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಬೇಕು. ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ವಿನಾಕಾರಣ ಕಚೇರಿಗೆ ಅಲೆಸದೇ ಅವರ ಕೆಲಸ ಮಾಡಿ ಕೊಡಬೇಕು. ಸಮಸ್ಯೆ ಅಧಿಕಾರಿ ವರ್ಗದ ವ್ಯಾಪ್ತಿ ಮೀರಿದ್ದರೆ, ಇರುವ ವಿಷಯ ತಿಳಿಸಿ ಅವರಿಗೆ ಮಾರ್ಗದರ್ಶನ ನೀಡುವ ಕೆಲಸ ಮಾಡಬೇಕು ಎಂದರು.

ಡಿವೈಎಸ್ಪಿ ಕೃಷ್ಣಯ್ಯ ಮಾತನಾಡಿ, ಪುರಸಭೆ ಹಾಗೂ ಪಿಡಿಓಗಳ ಮೇಲೆ ಹೆಚ್ಚು ದೂರುಗಳು ಕೇಳಿ ಬರುತ್ತಿವೆ. ಹೆಚ್ಚಾಗಿ ಖಾತೆಗಳನ್ನು ಮಾಡಿ ಕೊಟ್ಟಿಲ್ಲ ಎಂಬ ದೂರುಗಳನ್ನಿಡಿದು ಸಾರ್ವಜನಿಕರು ಕಚೇರಿಗೆ ಬರುತ್ತಿದ್ದಾರೆ. ಹಾಗಾಗಿ ಗ್ರಾಪಂ ಮತ್ತು ಪುರಸಭೆಯವರು ಹೆಚ್ಚಿನ ನಿಗಾವಹಿಸಿ ಸಾರ್ವಜನಿಕರ ಕೆಲಸ ಮಾಡಬೇಕಿದೆ ಎಂದರು.



ತಾಲೂಕಿನ ಅತ್ತಹಳ್ಳಿ ಗ್ರಾಮದ ಮಹಿಳೆ ಜಯಶೀಲ, ಗ್ರಾಮದಲ್ಲಿರುವ ತಮ್ಮ ನಿವೇಶನಕ್ಕೆ ನನ್ನ ಸಂಬಂಧಿಕರೇ ಅಕ್ರಮ ಪ್ರವೇಶ ಮಾಡಿ ದಬ್ಬಾಳಿಕೆ ನಡೆಸಿ ದನಗಳನ್ನು ಕಟ್ಟಿ ತೊಂದರೆ ನೀಡುತ್ತಿದ್ದು, ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದಕ್ಕೆ ನನ್ನ ಮೇಲೆ ಹಲ್ಲೆ ನಡೆಸಲಾಗಿದೆ. ಹಲ್ಲೆ ಸಂಬಂಧ ದೂರು ನೀಡಿದರೂ ಬನ್ನೂರು ಪೊಲೀಸರು ಕ್ರಮಕ್ಕೆ ಮುಂದಾಗಿಲ್ಲ ಎಂದು ದೂರು ನೀಡಿದರು.

ತಾಲೂಕಿನ ಹನುಮನಾಳು ಗ್ರಾಮದ ಸರ್ವೆ ನಂ.26 ಮತ್ತು 36ರ ಸರ್ಕಾರಿ ಖರಾಬನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡುವಲ್ಲಿ ತಹಸೀಲ್ದಾರ್ ಸಿ.ಜೆ.ಗೀತಾ ವಿಫಲರಾಗಿದ್ದಾರೆ ಎಂದು ರೈತ ಮುಖಂಡ ಶಿವನಂಜು ದೂರು ನೀಡಿದರಲ್ಲದೇ ಅತ್ತಹಳ್ಳಿ ಸರ್ಕಾರಿ ಶಾಲೆಯಲ್ಲಿ ಶೌಚಾಲಯಗಳು ಗಬ್ಬು ನಾರುತ್ತಿದ್ದು, ಸ್ವಚ್ಛತೆಗೆ ಗಮನಹರಿಸಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ ಎಂದು ದೂರಿದರು. ಇನ್ನು ಹತ್ತು ದಿನಗಳೊಳಗಾಗಿ ಖರಾಬನ್ನು ತೆರವುಗೊಳಿಸುವಂತೆ ತಹಸೀಲ್ದಾರ್‌ರಿಗೆ ಸೂಚಿಸಿದ ಲೋಕಾಯುಕ್ತ ಎಸ್‌ಪಿ ಶಾಲೆಗೆ ಭೇಟಿ ನೀಡಿ ಶೌಚಾಲಯ ಸ್ವಚ್ಛತೆ ಮಾಡಿಸುವಂತೆ ಬಿಇಓ ಮರಿಸ್ವಾಮಿ ಅವರಿಗೆ ಸೂಚನೆ ನೀಡಿದರು.

ಪತ್ರಕರ್ತ ಹಾಗೂ ಮೂಗೂರು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸಿದ್ದರಾಜು ಪಟ್ಟಣದ ಆರ್‌ಎಂಸಿ ಎದುರಿಗೆ ಇರುವ ಉಪ ಬಂಧಿಖಾನೆಗೆ ಸೇರಿದ ಜಾಗವನ್ನು ಖಾಸಗಿ ವ್ಯಕ್ತಿಗಳು ಅತಿಕ್ರಮ ಪ್ರವೇಶ ಮಾಡಿ ವಾಣಿಜ್ಯ ಕಟ್ಟಡ ನಿರ್ಮಿಸಿದ್ದಾರೆ. ಈ ಬಗ್ಗೆ ಸಂಬಂಧಿಸಿದ ಇಲಾಖೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಬಂಧಿಖಾನೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಹೋದರಾದರೂ ಯಾವುದೇ ಕ್ರಮ ಜರುಗಿಸಿಲ್ಲ ಎಂದು ಮೌಖಿಕ ದೂರು ನೀಡಿದರು. ಇದಕ್ಕೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ದೂರು ನೀಡಿದಲ್ಲಿ ಪರಿಶೀಲಿಸಿ ಕ್ರಮ ಜರುಗಿಸಲು ಸಂಬಂಧಿಸಿದ ಇಲಾಖೆಗೆ ಶಿಫಾರಸ್ಸು ಮಾಡಲಾಗುತ್ತದೆ ಎಂದರು.

ಅಹವಾಲು ಸಲ್ಲಿಕೆ ಕಾರ್ಯಕ್ರಮದಲ್ಲಿ ರೆವಿನ್ಯೂ, ಸರ್ವೆ ಹಾಗೂ ನೋಂದಣಿ ಕಚೇರಿಗಳ ಮೇಲೆ ಸಾರ್ವಜನಿಕ ದೂರು ಸಲ್ಲಿಕೆಯಾದವು.

ಈ ವೇಳೆ ಲೋಕಾಯುಕ್ತ ಇನ್ಸ್‌ಪೆಕ್ಟರ್ ಜಯರತ್ನ, ಸಿಪಿಐ ಕೃಷ್ಣಪ್ಪ, ಎಸ್‌ಐ ತಿರುಮಲ್ಲೇಶ್, ತಹಸೀಲ್ದಾರ್ ಸಿ.ಜೆ.ಗೀತಾ, ತಾಪಂ ಇಓ ಸಿ.ಕೃಷ್ಣಕುಮಾರ್, ಸಿಡಿಪಿಓ ಭವ್ಯ, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಬಿಇಓ ಮರಿಸ್ವಾಮಿ, ಸಹಾಯಕ ಕೃಷಿ ನಿರ್ದೇಶಕಿ ಸುಹಾಸಿನಿ, ಎಇಇ ಸುಹಾಸ್ ಮತ್ತಿತರರಿದ್ದರು.

ಮಾಹಿತಿ ಕೊರತೆ: ಕೇವಲ 7 ದೂರು ಸಲ್ಲಿಕೆ

ಲೋಕಾಯುಕ್ತ ಅಹವಾಲು ಸ್ವೀಕಾರ ಕಾರ್ಯಕ್ರಮದ ಬಗ್ಗೆ ಪ್ರಚಾರದ ಕೊರತೆ ಇದ್ದ ಹಿನ್ನೆಲೆಯಲ್ಲಿ ಕೇವಲ 7 ದೂರು ಮಾತ್ರವೇ ಸಲ್ಲಿಕೆಯಾದವು. ಕೆಲವು ಅಧಿಕಾರಿಗಳು ಅಹವಾಲು ಸಲ್ಲಿಕೆ ಮುಗಿದು ಲೋಕಾಯುಕ್ತ ಅಧಿಕಾರಿಗಳು ನಿರ್ಗಮಿಸಿದ ನಂತರ ಬಂದು ವಾಪಸ್ ತೆರಳುತ್ತಿದ್ದ ದೃಶ್ಯ ಕಂಡು ಬಂತು. ಕಾರ್ಯಕ್ರಮದಲ್ಲಿ ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು ಹೆಚ್ಚಿನ ದೂರು ದಾಖಲಾಗಿಲ್ಲವಾದ್ದರಿಂದ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಶಹಬಾಷ್ ಗಿರಿ ಕೊಟ್ಟಿದ್ದು ಹಾಸ್ಯಾಸ್ಪದವಾಗಿತ್ತು.

ಅಂಬೇಡ್ಕರ್ ಪ್ರತಿಮೆ ಸ್ಥಾಪನೆಗೆ ಶಾಸಕರಿಗೆ ಮನವಿ



ಹುಣಸೂರು, ಅ.6– ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಎದುರು ಅಂಬೇಡ್ಕರ್ ಪ್ರತಿಮೆ ಸ್ಥಾಪಿಸುವಂತೆ ಶಾಸಕ ಹೆಚ್.ಪಿ.ಮಂಜುನಾಥ್ ಅವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಹೋರಾಟ ಸಮಿತಿಯಿಂದ ಮನವಿ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಹೆಚ್.ಪಿ.ಮಂಜುನಾಥ್, ಹುಣಸೂರು ನಗರಸಭೆಯಿಂದ ಸೂಕ್ತ ಸ್ಥಳ ಗುರುತಿಸಿ ಸರ್ಕಾರದ ಮಟ್ಟದಲ್ಲಿ ಮಾತನಾಡಿ, ನಗರದ ಪ್ರಮುಖ ಸ್ಥಳದಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ಸಮಿತಿಯ ನಿಂಗರಾಜ್ ಮಲ್ಲಾಡಿ, ಆನಂದಸ್ವಾಮಿ, ಸಮಾಜ ಸೇವಕ ದೇವರಾಜ ಒಡೆಯರ್, ದಸಂಸ ಮುಖಂಡ ದೇವೇಂದ್ರ, ಗಜೇಂದ್ರ ಕೃಷ್ಣ ಸೇರಿದಂತೆ ಇನ್ನಿತರರಿದ್ದರು.



ತಿ.ನರಸೀಪುರ ತಾಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷ ಚೌಹಳ್ಳಿ ಜಿ.ರವಿಶಂಕರ್ ಅವರನ್ನು ಪಟ್ಟಣ ನ್ಯಾಯಾಲಯದ ಹಿರಿಯ ಶ್ರೇಣಿ ಅಪರ ಸರ್ಕಾರಿ ವಕೀಲರನ್ನಾಗಿ ಸರ್ಕಾರ ನೇಮಕ ಮಾಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದಿಂದ ಸನ್ಮಾನಿಸಲಾಯಿತು. ಈ ವೇಳೆ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಮಹಾವೀರ್ ಮ ಕರಣ್ಣನವರ್, ಪ್ರಧಾನ ಸಿವಿಲ್ ನ್ಯಾಯಾಧೀಶ ಚೇತನ್, ಅನ್ನದಾನಿ, ಮಂಜುನಾಥ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಕೆ.ಎನ್.ವೆಂಕಟೇಶ್, ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್, ವಕೀಲರ ಸಂಘದ ಅಧ್ಯಕ್ಷ ಕೆ.ಜಿ.ಪಾಲಾಕ್ಷ ಮೂರ್ತಿ, ಕಾರ್ಯದರ್ಶಿ ಸಿದ್ದರಾಜು, ವಕೀಲರಾದ ಕೆ.ಟಿ.ಸುಚಿತ್ರ, ಕೈಯಂಬಳ್ಳಿ ಎಂ.ಉಮೇಶ್ ಕುಮಾರ್, ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್ ಮತ್ತಿತರರಿದ್ದರು.

ವರ್ಷದೊಳಗೆ ನೂತನ ಕಟ್ಟಡ ನಿರ್ಮಾಣ

ಕಲ್ಪವೃಕ್ಷ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಪಿ.ಪ್ರಶಾಂತ್‌ಗೌಡ

ಪಿರಿಯಾಪಟ್ಟಣ, ಅ.6– ಷೇರುದಾರರ ಸಹಕಾರದಿಂದ ವರ್ಷದೊಳಗೆ ನೂತನ ಕಟ್ಟಡ ನಿರ್ಮಾಣವಾಗಲಿದೆ ಎಂದು ಕಲ್ಪವೃಕ್ಷ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಪಿ.ಪ್ರಶಾಂತ್‌ಗೌಡ ತಿಳಿಸಿದರು.

ಪಟ್ಟಣದಲ್ಲಿ ನಡೆದ ಸೊಸೈಟಿ ವಾರ್ಷಿಕ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದ ಕಟ್ಟಡ ನಿರ್ಮಾಣಕ್ಕೆ ಬೇಕಾದ ಭೂಮಿಯನ್ನು ಈಗಾಗಲೇ ಖರೀದಿಸಿ, ಭೂಮಿ ಪೂಜೆ ಮಾಡಲಾಗಿದೆ. ಆದರೆ ಅತಿಯಾದ ಮಳೆಯಿಂದಾಗಿ ಕಟ್ಟಡ ನಿರ್ಮಾಣ ಕಾರ್ಯ ಆರಂಭವಾಗಿಲ್ಲ. ವರ್ಷದೊಳಗೆ ನೂತನ ಕಟ್ಟಡ ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ ಎಂದರು.

ಸೊಸೈಟಿ ಲಾಭದತ್ತ ಸಾಗುತ್ತಿದೆ. ಆದಾಗಿಯೂ ಷೇರುದಾರರ ಸಲಹೆ ಸಹಕಾರವನ್ನು ಮುಕ್ತವಾಗಿ ಸ್ವೀಕರಿಸಿ ಅಗತ್ಯ ಬದಲಾವಣೆ ಮಾಡಿಕೊಳ್ಳಲು ಸಿದ್ಧವಿದ್ದೇವೆ. ನಮ್ಮ ಲೋಪದೋಷಗಳೇ ಇರಲಿ ಅಥವಾ ಬ್ಯಾಂಕ್ ಅಭಿವೃದ್ಧಿಗೆ ಅಗತ್ಯವಾಗಿ ಆಗಬೇಕಾದ ಬದಲಾವಣೆಗಳ ಬಗ್ಗೆ ಎಲ್ಲರೂ ನಮಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.



ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಷೇರುದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಉತ್ತಮ ವ್ಯವಹಾರ ನಡೆಸಿದ ಷೇರುದಾರರಿಗೆ ಉತ್ತಮ ಗ್ರಾಹಕ ಪ್ರಶಸ್ತಿ ನೀಡಲಾಯಿತು. ಮತ್ತು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯರನ್ನು ಸನ್ಮಾನಿಸಲಾಯಿತು.

ಬೀಳ್ಕೊಡುಗೆ: ಸೊಸೈಟಿಯಲ್ಲಿ 13 ವರ್ಷ ಸಿಇಓ ಆಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಜಿ.ಎಸ್.ನಳಿನಾ ಅವರನ್ನು ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಸನ್ಮಾನಿಸಿ ಬೀಳ್ಕೊಟ್ಟರು.

ಈ ವೇಳೆ ನಿರ್ದೇಶಕರಾದ ಬಿ.ಎ.ಪ್ರಕಾಶ್, ಸಿ.ಆರ್.ದೇವರಾಜ್, ಎಸ್.ಆರ್.ದಿನೇಶ್, ಕೆ.ಎಲ್.ಸುರೇಶ್, ಡಿ.ಆರ್.ಶಹಬಾಜ್, ಎ.ಪಿ.ದಿನೇಶ್‌ಕುಮಾರ್, ಕೆ.ಎನ್.ನಟೇಶ್, ಶೃತಿ, ಮಹೇಶ್ವರಿ, ಎಚ್.ಎಸ್.ಹರೀಶ್, ಬಿ.ಪಿ.ರಾಜೇಶ್, ಕೆ.ಆರ್. ಕೆಂಪಣ್ಣ, ಕೆ.ಎಚ್.ವಿಜಯಕುಮಾರ್, ಸಹ ಕಾರ್ಯ ನಿರ್ವಹಣಾಧಿಕಾರಿ ಆರ್.ಮಂಜುನಾಥ್, ಸಿಬ್ಬಂದಿಗಳಾದ ಆರ್.ಚಿತ್ರ, ಬಿ.ಆರ್.ಮನು, ಪಿ.ವಿ.ಮಹದೇವ್, ಎಚ್.ಆರ್.ಮನು, ಪಿ.ವಿ.ಮಹೇಂದ್ರ, ಪ್ರಿಯದರ್ಶಿನಿ, ಕುಮಾರಿ ಸೇರಿದಂತೆ ಮತ್ತಿತರರಿದ್ದರು.

ಫ್ರೀಡಂ ಪಾರ್ಕ್‌ನಲ್ಲಿ ವಾಲ್ಮೀಕಿ ಜಯಂತಿ ಆಚರಣೆ

ನಾಯಕರ ಸಂಘದ ಅಧ್ಯಕ್ಷ ಕೆ.ಎಸ್.ಅಣ್ಣಯ್ಯ ನಾಯಕ

ಹುಣಸೂರು, ಅ.6– ಈ ಬಾರಿ ವಾಲ್ಮೀಕಿ ಜಯಂತಿಯನ್ನು ಅ.9ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಆಚರಿಸಲಾಗುವುದು ಎಂದು ನಾಯಕರ ಸಂಘದ ಅಧ್ಯಕ್ಷ ಕೆ.ಎಸ್.ಅಣ್ಣಯ್ಯ ನಾಯಕ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿಗಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿರುವ ವಾಲ್ಮೀಕಿ ಪ್ರಸನ್ನಾನಂದ ಪುರಿಶ್ರೀಗಳ ಮನವಿಗೆ ಸರ್ಕಾರ ಸ್ಪಂದಿಸುತ್ತಿಲ್ಲ. ಅ.9ರಂದು ವಾಲ್ಮೀಕಿ ಜಯಂತಿ ಇರುವುದರಿಂದ ಜಯಂತಿಯನ್ನು ಬೆಂಗಳೂರಿನಲ್ಲಿ ಆಚರಿಸಲು ನಿರ್ಧರಿಸಲಾಗಿದೆ. ತಾಲೂಕಿನಲ್ಲಿರುವ ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದ ಅವರು, ಜಿಲ್ಲೆಯಿಂದ ಸುಮಾರು 5 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು. ಗೋಷ್ಠಿಯಲ್ಲಿ ಗೋವಿಂದನಾಯಕ, ಡಿ.ವೆಂಕಟೇಶ್, ತಗಡ ನಾಯಕ, ರಾಮಚಂದ್ರ, ಉಮೇಶ, ರವಿ, ಸ್ವಾಮಿ, ಗೋವಿಂದ, ಮರಿನಾಯಕ, ಮಂಚನಾಯಕ ಉಪಸ್ಥಿತರಿದ್ದರು.

ಕುರುಬ ಸಮಾಜವನ್ನು ನಿರ್ಲಕ್ಷಿಸಿಲ್ಲ: ಸಾರಾ

ಕೆ.ಆರ್.ನಗರ, ಅ.6– ನನ್ನ ಅಧಿಕಾರವಧಿಯಲ್ಲಿ ವಿಶೇಷ ಅನುದಾನ ನೀಡಿಲ್ಲವಾದರೂ ಮೂಲ ಸೌಕರ್ಯ ಒದಗಿಸುವಲ್ಲಿ ತಾರತಮ್ಯ ಮಾಡಿಲ್ಲ. ಆದ್ದರಿಂದ ಕುರುಬ ಸಮಾಜವನ್ನು ನಿರ್ಲಕ್ಷಿಸಿದ್ದಾರೆ ಎಂಬುದರಲ್ಲಿ ಅರ್ಥವಿಲ್ಲ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಜೆಡಿಎಸ್ ಪಕ್ಷದ ಕುರುಬ ಸಮಾಜದ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ನಾನು ರಾಜಕಾರಣಕ್ಕೆ ಬಂದಾಗಿನಿಂದ ಕುರುಬ ಸಮಾಜದವರು ಜೊತೆಯಲ್ಲಿದ್ದಾರೆ ಎಂದರು.

ಈ ಬಾರಿ ಹೆಚ್ಚು ಮಂದಿ ಕುರುಬ ಸಮಾಜದವರು ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದು, ನನ್ನ ಗೆಲುವಿಗೆ ಸಹಕರಿಸುತ್ತೇವೆ ಎಂದು ಭರವಸೆ ನೀಡಿದ್ದಾರೆ. ವೈಯಕ್ತಿಕವಾಗಿ ಸಹಕಾರ ನೀಡಲು ಸಾಧ್ಯವಾಗಿದ್ದರೂ, ಸಾರ್ವಜನಿಕವಾಗಿ ಅವರು ಹೇಳಿದ ಕೆಲಸ ಮಾಡಲು ಸಿದ್ಧನಿದ್ದೇನೆ ಎಂದರು.

ನಮ್ಮ ಕುಟುಂಬ 2 ಬಾರಿ ಸೋತಿದ್ದು, ಬಹಳ ಕಷ್ಟದಲ್ಲಿದ್ದೇವೆ. ನಮಗೆ ಸಹಾಯ ಮಾಡಿ ಎಂದು ಕೇಳುವ ಕಾಂಗ್ರೆಸ್ ಅಭ್ಯರ್ಥಿ ಗೆದ್ದ ಮೇಲೆ ಜನಸೇವೆ ಮಾಡುವರಾ ಅಥವಾ ತಮ್ಮ ಕಷ್ಟ ಬಗೆಹರಿಸಿಕೊಳ್ಳಲು ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರಾ ಎಂದು ನೀವೇ ಪ್ರಶ್ನೆ ಮಾಡಿ ಎಂದರು.

ರಾಜಕೀಯ ಜನಸೇವೆಗೆ ವಿನಹ ಜೀವನ ಸಾಗಿಸುವುದಕ್ಕಲ್ಲ. ಅದಕ್ಕಾದರೆ ಬೇರೆ ಉದ್ಯೋಗ ಹುಡುಕಿಕೊಳ್ಳಿ. ಈಗಾಗಲೇ ಸಾಲಗಾರರಾದ ನೀವು ಜನಸೇವೆ ಮಾಡಲು ಅರ್ಹರಲ್ಲ. ಅರ್ಹರಾದವರಿಗೆ ಜಾಗ ಕೊಡಿ ಜಾತಿ ಹೆಸರೇಳಿಕೊಂಡು ರಾಜಕಾರಣ ಮಾಡಬೇಡಿ. 3 ಬಾರಿ ಜಿಪಂ ಸದಸ್ಯರಾಗಿ ಮಾಡಿದ ಕೆಲಸವಾದರೂ ಏನು? ಎಂದು ಕಾಂಗ್ರೆಸ್ ಮುಖಂಡರಾದ ದೊಡ್ಡಸ್ವಾಮಿಗೌಡ ಮತ್ತು ಡಿ.ರವಿಶಂಕರ್ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.


ಜಿಪಂ ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್ ಮಾತನಾಡಿ, ಕುರುಬ ಸಮಾಜವನ್ನು ಕಾಂಗ್ರೆಸ್ ಪಕ್ಷ ಕೇವಲ ಮತ ಬ್ಯಾಂಕ್ ಮಾಡಿಕೊಂಡಿದ್ದು, ಅಧಿಕಾರ ನೀಡುವ ಸಂದರ್ಭ ತಾರತಮ್ಯ ಮಾಡುತ್ತಾರೆ. ಇದಕ್ಕೆ ಉದಾಹರಣೆ ಹೊಸೂರು ಜಿಪಂ ಕ್ಷೇತ್ರ 'ಎ' ವರ್ಗಕ್ಕೆ ಮೀಸಲಾದಾಗ ಕಾಂಗ್ರೆಸ್‌ನವರು ಈಡಿಗ ಸಮಾಜದವರಿಗೆ ಟಿಕೆಟ್ ನೀಡಿದ್ದರು. ಜೆಡಿಎಸ್‌ನವರು ನನಗೆ ಟಿಕೆಟ್ ನೀಡಿದಲ್ಲದೆ ನನ್ನ ಗೆಲುವಿಗೆ ಕಾರಣರಾಗಿದ್ದಾರೆ. ಇದನ್ನು ಸಮಾಜದ ಜನತೆ ಅರ್ಥ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು. ಜೆಡಿಎಸ್‌ನಲ್ಲಿ ಕುರುಬ ಸಮಾಜಕ್ಕೆ ಅಪಾರ ಅವಕಾಶಗಳಿದ್ದು, ಹಿಂದೆ 6 ಮಂದಿ ತಾಪಂ ಸದಸ್ಯರಾಗಿದ್ದಲ್ಲದೆ ತಂದ್ರೆ ರವಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಇದಕ್ಕೆ ಶಾಸಕ ಸಾ.ರಾ.ಮಹೇಶ್ ಅವರೇ ಕಾರಣ. ಆದ್ದರಿಂದ ಈ ಬಾರಿ ಅವರ ಗೆಲುವಿಗೆ ಸಮಾಜದ ಮುಖಂಡರು ದುಡಿಯಬೇಕು ಎಂದು ಕೋರಿದರು.



ತಾಪಂ ಮಾಜಿ ಅಧ್ಯಕ್ಷ ರವಿ, ನಾಗಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ. ನಾಗರಾಜು, ಕಾಂತರಾಜು, ಪ್ರಸನ್ನ ಸೇರಿದಂತೆ ಹಲವು ಮುಖಂಡರು ಮಾತನಾಡಿ ಶಾಸಕರ ಗೆಲುವಿಗೆ ದುಡಿಯುತ್ತೇವೆ ಎಂದು ಭರವಸೆ ನೀಡಿದಲ್ಲದೆ ಯಾವ ಒತ್ತಡಕ್ಕೂ ಮಣಿಯದೇ ಮರಳಿ ಕಾಂಗ್ರೆಸ್ ಸೇರುವ ಪ್ರಶ್ನೆಯೇ ಇಲ್ಲ ಎಂದು ಪ್ರತಿಪಾದಿಸಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಹೆಚ್.ಸಿ.ಕುಮಾರ್, ಮಾಜಿ ಅಧ್ಯಕ್ಷ ಚಂದ್ರಶೇಖರ್, ಕುರುಬ ಸಮಾಜದ ಮುಖಂಡರಾದ ಶಿವರಾಜು, ತಮ್ಮೇಗೌಡ, ರವಿ, ಮಂಜುನಾಥ್, ಈರಣ್ಣ, ಧನು, ಯಶ್ವಂತ್, ಬಸವರಾಜು, ಶಿವಣ್ಣ, ಹೇಮಂತ್, ರಮೇಶ್, ಸಿ.ಬಿ.ಧರ್ಮ, ಮಹದೇವ್, ನಾಗಣ್ಣ ಸೇರಿದಂತೆ ಇನ್ನಿತರರಿದ್ದರು.

ಶಿವಣ್ಣ ನಿಧನ



ಹುಣಸೂರು, ಅ.6– ಮಾಜಿ ಶಾಸಕ ದಿ.ಡಿ.ಕರಿಯಪ್ಪಗೌಡರ ಸಹೋದರ ಹಾಗೂ ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಕಿರಿಜಾಜಿ ಶಿವಣ್ಣ (85) ಬುಧವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚೆಲುವಯ್ಯ



ಹೆಚ್.ಡಿ.ಕೋಟೆ, ಅ.6– ತಾಲೂಕು ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ ಅವರ ತಂದೆ ಚೆಲುವಯ್ಯ (80) ಬುಧವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಪಟ್ಟಣದ ಬೆಳಗನಹಳ್ಳಿ ರಸ್ತೆ ಸಮೀಪದ ಮೃತರ ತೋಟದಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ನರಸಿಂಹಶೆಟ್ಟಿ



ಹುಣಸೂರು, ಅ.6– ತಾಲೂಕು ತೊಂಡಾಳು ಗ್ರಾಮದ ಗ್ರಾಪಂ ಸದಸ್ಯ ರುಕ್ಮಾಂಗದ ಅವರ ತಂದೆ ನರಸಿಂಹಶೆಟ್ಟಿ (75) ಗುರುವಾರ ಸಂಜೆ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆ ನಂ.ಗೂಡಿಗೆ ಶ್ರೀಮಹದೇಶ್ವರ ಜ್ಯೋತಿ ಯಾತ್ರೆ



ನಂಜನಗೂಡು, ಅ.6– ಶ್ರೀಮಹದೇಶ್ವರ ಜ್ಯೋತಿ ಯಾತ್ರೆ ಅ.8ರಂದು ಮಧ್ಯಾಹ್ನ 3 ಗಂಟೆಗೆ ಗುಂಡ್ಲುಪೇಟೆಯಿಂದ ತಾಲೂಕಿನ ಎಲಚಗೆರೆ ಬೋರೆಗೆ ಆಗಮಿಸಲಿದೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಮಹದೇಶ್ವರ ಬೆಟ್ಟದಲ್ಲಿ ಪ್ರಾಧಿಕಾರ ರಚಿಸುವಂತೆ ಒತ್ತಾಯಿಸಿ 2012ರಲ್ಲಿ ಮಹದೇಶ್ವರ ಜ್ಯೋತಿ ಯಾತ್ರೆ ಪ್ರಾರಂಭಿಸಲಾಯಿತು. ಅದರಂತೆ ಸರ್ಕಾರ ಮಹದೇಶ್ವರ ಬೆಟ್ಟ ಪ್ರಾಧಿಕಾರ ರಚಿಸಿ ಸ್ವಚ್ಛತೆ ಮತ್ತು ಕುಡಿಯುವ ನೀರಿನ ಸೌಕರ್ಯ ಒದಗಿಸಿದೆ. ಮಹದೇಶ್ವರರು ಸಂಚರಿಸಿದ ಕೆ.ಆರ್.ಪೇಟೆ, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ಭೀಮನಕೊಲ್ಲಿ, ನಂಜನಗೂಡು ಬೇಲದ ಕುಪ್ಪೆ ದೇವಾಲಯಗಳನ್ನು ಪ್ರಾಧಿಕಾರದ ಹಣದಲ್ಲಿ ಮೂಲ ಸೌಕರ್ಯ ಕಲ್ಪಿಸಿ ಅಭಿವೃದ್ಧಿಪಡಿಸುವಂತೆ ಮತ್ತು ಮಹದೇಶ್ವರ ಬೆಟ್ಟದಲ್ಲಿ ಸಂಶೋಧನಾ ಕೇಂದ್ರ ಸ್ಥಾಪನೆ, ವಿಶ್ವವಿದ್ಯಾನಿಲಯ ಹಾಗೂ ಸಾವಿರ ಜನರಿಗೆ ಡಾರ್ಮಿಟರಿ ನಿರ್ಮಿಸುವಂತೆ ಒತ್ತಾಯಿಸಿ ಸರ್ಕಾರಕ್ಕೆ ಮನವಿ ಸಲ್ಲಿಸುವ ಸಲುವಾಗಿ ಈ ಜ್ಯೋತಿ ಯಾತ್ರೆ ನಡೆಸಲಾಗುತ್ತಿದೆ ಎಂದರು.

ಮಹದೇಶ್ವರ ಜ್ಯೋತಿ ಯಾತ್ರೆ ಅಂದು ಗುಂಡ್ಲುಪೇಟೆ ಮೂಲಕ ತಾಲೂಕನ್ನು ಪ್ರವೇಶಿಸಲಿದ್ದು, ಈ ವೇಳೆ ಮಹದೇಶ್ವರ ಜಯಂತಿ ಮಹೋತ್ಸವ ಸಮಿತಿಯಿಂದ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅದ್ಧೂರಿಯಾಗಿ ಸ್ವಾಗತಿಸಲಾಗುವುದು. ಸಂಜೆ 5 ಗಂಟೆ ನಗರದ ಚಿಂತಾಮಣಿ ಗಣಪತಿ ದೇವಾಲಯ ತಲುಪುವ ಯಾತ್ರೆಯು ನಂತರ ನಗರದ ಆರ್.ಪಿ.ರಸ್ತೆ ಮೂಲಕ ಸಾಗಿ ಶಂಕರ ಮಠ ರಸ್ತೆಯ ಮೂಲಕ ಹಳ್ಳದಕೇರಿ, ಗೋಳೂರು, ಗೀಕಹಳ್ಳಿ ಆಲಂಬೂರು, ನಗರ್ಲೆ ಮೂಲಕ ಸುತ್ತೂರು ತಲುಪುವುದು. ಅ.9ರಂದು ಸುತ್ತೂರಿನಿಂದ ಹದಿನಾರು ಮಾರ್ಗವಾಗಿ ಸಂಚರಿಸಿ ಮೈಸೂರಿಗೆ ತೆರಳಲಿದೆ ಎಂದು ಮಾಹಿತಿ ನೀಡಿದರು. ಬುಲೆಟ್ ಮಹದೇವಪ್ಪ ಮಾತನಾಡಿದರು. ಗೋಷ್ಠಿಯಲ್ಲಿ ಶಂಕರಪ್ಪ, ಮಹದೇವಸ್ವಾಮಿ, ಮಂಜುನಾಥ್, ಶ್ರೀನಿವಾಸ್, ಅಜ್ಗರ್, ಮಹದೇವನಾಯಕ, ನಟರಾಜು ಸೇರಿದಂತೆ ಇತರರಿದ್ದರು.

ಮೈಸೂರು ರೇಸುಗಳು–2022



13ನೇ ದಿನ, ಶುಕ್ರವಾರ 7-10-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.00 ಗಂಟೆಗೆ)

I. ಯಾದವಗಿರಿ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.1.00ಕ್ಕೆ
1. ಅಡೇಲಾ 2. ಸದರನ್ ಅರಿಸ್ಟೋಕ್ರೆಟ್ 3. ಲೈಕ್ ಮೈ ಡ್ಯಾಡಿ

II. ಸುಂದರ್ ಬಾನ್ಸ್ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಸ್ಯಾಂಡ್ ಕ್ಯಾಸ್ಟೆಲ್ 2. ಎಮಿರಾಲ್ಡೊ 3. ಪೆಸ್ಟಿವ್ ಸ್ಟಾರ್

III. ಸ್ಪೆಕ್ಟ್ಯಾಕ್ಯುಲರ್ ಕ್ವೆಸ್ಟ್ ಪ್ಲೇಟ್ ಡಿ3–1200 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1 ಸ್ಟಾರ್ಸ್ ಅಬೌವ್ 2. ಮೇಗಾನ್ 3. ಪರ್‌ಫೆಕ್ಟ್ ಜಸ್ಟೀಸ್

IV. ಸ್ಪೆಕ್ಟ್ಯಾಕ್ಯುಲರ್ ಕ್ವೆಸ್ಟ್ ಪ್ಲೇಟ್ ಡಿ2–1200 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಆಲ್‌ಟೇರ್ 2. ಆರ್ಚ್‌ವೆ 3. ಯೂನಿಕ್ ಸ್ಟೈಲ್

V. MAJ ಸರ್‌ದಾರ್ ಮಹಾದೇವಯ್ಯ ಮೆಮೋರಿಯಲ್ ಟ್ರೋಫಿ –1600 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1. ಕ್ಯಾಪಬಲ್ 2. ಸದರನ್ ಪವರ್

VI. ಜಸ್ಟಿಸ್ ಪಿ.ಮೇದಪ್ಪ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 60 ರಿಂದ 85. ಮ.3.30ಕ್ಕೆ
1. ಕಾರಾಕಸ್ 2. ಪಿಯೋ 3. ಅಬೇರ್‌ಲೊರ್

VII. ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಮೈಸೂರ್ 2000 ಗಿನ್ನೀಸ್ 3 ವರ್ಷ (ಟರ್ಮ್ಸ್) ಸಂ.4.00ಕ್ಕೆ
1 ಸುಕ್ರೀ 2 ರಾವಿಶೀಂಗ್ ಫಾರಮ್

VIII. ಸ್ಪೆಕ್ಟ್ಯಾಕ್ಯುಲರ್ ಕ್ವೆಸ್ಟ್ ಪ್ಲೇಟ್ ಡಿ1–1200 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1 ಸ್ಟಾರ್ ಅಡ್ಮಿರಲ್ 2 ಇಂಡಿಯನ್ ಪ್ಯಾಟ್ರಿಯೆಟ್ 3. ಐ ದಿ ಮೈಂಡ್

VIII. ಹಸ್ತಿನಪುರ ಪ್ಲೇಟ್ –1100 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಅನ್ನೆ ಬೋಲಿನ್ 2 ಗೋಲ್ಡ್ ಗ್ರೇ 3. ರಾಯಲ್ ಕಮಾಂಡ್

ದಿನದ ಅತ್ಯುತ್ತಮ....................	: ಸುಕ್ರೀ
ಡಬ್ಬಲ್....................	: ಕ್ಯಾಪಬಲ್, ಸ್ಟಾರ್ ಅಡ್ಮಿರಲ್
ಜಾಕ್‌ಪಾಟ್....................	: 5, 6, 7, 8 ಮತ್ತು 9
I ಟ್ರಿಬಲ್....................	: 1, 2 ಮತ್ತು 3
II ಟ್ರಿಬಲ್....................	: 4, 5 ಮತ್ತು 6
ಎಕ್ಸ್‌ಆಕ್ಟ್....................	: 8 ಮತ್ತು 9

ಟಿಪ್‌ಸ್ಟರ್ ಪಿಜಿಸಿ

ದಸರಾ ನಾಡಕುಸ್ತಿಯಲ್ಲಿ ಭಾಗವಹಿಸಿದ ಪೈಲ್ವಾನರಿಗೆ ಗೌರವಧನ ಇನ್ನೂ ನಿರ್ಧಾರವಾಗಿಲ್ಲ



ಮೈಸೂರು, ಅ.6(ಎಂಕೆ)– ನಗರದ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ 6 ದಿನಗಳ ಕಾಲ ನಡೆದ ದಸರಾ ಕುಸ್ತಿ (ನಾಡ ಕುಸ್ತಿ ಹಾಗೂ ಪಾಯಿಂಟ್ ಕುಸ್ತಿ) ಹಾಗೂ ಪಂಜ ಕುಸ್ತಿ ಪಂದ್ಯಾವಳಿ ಯಶಸ್ವಿಯಾಗಿದ್ದು, ನಾಡಕುಸ್ತಿಯಲ್ಲಿ ಭಾಗವಹಿಸಿದ ಪೈಲ್ವಾನರಿಗೆ ನೀಡುವ ಗೌರವ ಧನ ಎಷ್ಟೆಂಬುದೇ ಇನ್ನೂ ನಿರ್ಧಾರವಾಗಿಲ್ಲ.

ನಾಡಕುಸ್ತಿಯಲ್ಲಿ ಸುಮಾರು 180 ಜೋಡಿ, ಪಂಜ ಕುಸ್ತಿಯಲ್ಲಿ 150 ಮಂದಿ ಹಾಗೂ ವಿವಿಧ ಪ್ರಶಸ್ತಿಗಳಿಗಾಗಿ ನಡೆದ ಪಾಯಿಂಟ್ ಕುಸ್ತಿಯಲ್ಲಿ 145 ಕ್ಕೂ ಹೆಚ್ಚು ಸೇರಿ ಸುಮಾರು 500ಕ್ಕೂ ಪೈಲ್ವಾನರು ಭಾಗವಹಿಸಿ ದಸರಾ ಕುಸ್ತಿ ಹಾಗೂ ಪಂಜ ಕುಸ್ತಿ ಪಂದ್ಯಾವಳಿಯನ್ನು ಯಶಸ್ವಿಗೊಳಿಸಿದ್ದಾರೆ.

ಪ್ರಶಸ್ತಿಗಳಿಗಾಗಿ ನಡೆದ ಪಾಯಿಂಟ್ ಕುಸ್ತಿ ವಿಜೇತರಿಗೆ ಪ್ರಶಸ್ತಿಗೆ ಅನುಗುಣವಾಗಿ ಬೆಳ್ಳಿ ಗದೆ, ಗ್ರೀಕೋ ರೋಮನ್ ಹಾಗೂ ಫ್ರೀ ಸ್ಟೈಲ್ ಕುಸ್ತಿಗಳಲ್ಲಿನ ವಿಜೇತರಿಗೆ ಪದಕಗಳನ್ನು ನೀಡಿ ಗೌರವಿಸಲಾಗಿದೆ. ಅದರಂತೆ ಪಂಜ ಕುಸ್ತಿಯಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೂ ಪದಕಗಳನ್ನು ನೀಡುವುದರ ಜೊತೆಗೆ ಊಟ, ವಸತಿ, ಪ್ರಯಾಣ ಭತ್ಯೆಯನ್ನು ನೀಡಲಾಗಿದೆ. ಆದರೆ ಪಾರಂಪರಿಕ ನಾಡಕುಸ್ತಿ ಪೈಲ್ವಾನರಿಗೆ ನೀಡುವ ಗೌರವ ಧನದ ಮೊತ್ತ ಇನ್ನೂ ನಿರ್ಧಾರವಾಗದಿರುವುದು ಪೈಲ್ವಾನರಿಗೆ ನಿರೀಕ್ಷೆಯ ಜೊತೆಗೆ ಬೇಸರ ತರಿಸಿದೆ.

ಬೇರೆ ಬೇರೆ ಕಡೆಯಿಂದ ಬರುವ ಅನುಭವಿ ಪೈಲ್ವಾನರಿಗೂ ಎರಡ್ಮೂರು ಸಾವಿರ ರೂ., ನೀಡಿದರೆ ಕುಸ್ತಿ ಕಲೆಯನ್ನು ಪ್ರೋತ್ಸಾಹಿಸಿದಂತಾಗುವುದಿಲ್ಲ.

ಪೈಲ್ವಾನರ ನಿತ್ಯದ ಆಹಾರದ ಖರ್ಚೆ ಜಾಸ್ತಿ ಇರುತ್ತದೆ. ಮೊದಲ ಬಾರೀ ಕುಸ್ತಿ ಮಾಡುವ ಪೈಲ್ವಾನರಿಗೆ(ಚಿಕ್ಕ ವಯಸ್ಸಿನ ಪೈಲ್ವಾನರಿಗೆ) ಮೊದಲಿನಿಂದಲೂ 500 ರೂ., 1000 ರೂ. ಗೌರವ ಧನ ನೀಡಲಾಗುತ್ತಿದೆ. ಆದರೆ ಕುಸ್ತಿಯಲ್ಲೇ ತೊಡಗಿರುವವರಿಗೆ, ಸಾಕಷ್ಟು ಕಡೆಗಳಲ್ಲಿ ಕುಸ್ತಿ ಮಾಡಿ ಗೆದ್ದವರಿಗೆ ಉತ್ತಮ ಮೊತ್ತ ನಿಗಧಿಪಡಿಸಬೇಕು ಎಂದು ಹಿರಿಯ ಪೈಲ್ವಾನರು ಒತ್ತಾಯಿಸಿದ್ದಾರೆ.

ನೇರವಾಗಿ ಖಾತೆಗೆ ಹಣ: ಮೊದಲು ನಾಡಕುಸ್ತಿ ಪಂದ್ಯ ಮುಗಿದ ಕೂಡಲೇ ಸ್ಥಳದಲ್ಲಿಯೇ ಗೌರವ ಧನ ನೀಡಲಾಗುತ್ತಿತ್ತು. ಈ ವರ್ಷ ನೇರವಾಗಿ ಪೈಲ್ವಾನರ ಖಾತೆಗೆ ಜಮಾ ಮಾಡುತ್ತೇವೆ ಎಂದು ಆಧಾರ್‌ಕಾರ್ಡ್ ಹಾಗೂ ಬ್ಯಾಂಕ್ ಮಾಹಿತಿ ನೀಡುವಂತೆ ತಿಳಿಸಿದ್ದಾರೆ. ಎಷ್ಟೋ ಮಂದಿ ಪೈಲ್ವಾನರು ತಮ್ಮ ಬ್ಯಾಂಕ್‌ಖಾತೆಗೆ ಆಧಾರ್ ಕಾರ್ಡ್ ನಂಬರ್ ಲಿಂಕ್ ಮಾಡಿರುವುದಿಲ್ಲ. ಸಣ್ಣ ವಯಸ್ಸಿನ ಪೈಲ್ವಾನರ ಬ್ಯಾಂಕ್ ಖಾತೆಯೇ ಇರುವುದಿಲ್ಲ. ದಾಖಲೆ ನೀಡದವರಿಗೆ ಹಾಗೂ ಬೇರೆ ಬೇರೆ ಕಡೆಯಿಂದ ಬಂದು ಕುಸ್ತಿ ಮಾಡಿ ದಾಖಲೆ ನೀಡದೆ ಹೋದವರಿಗೆ ಗೌರವ ಧನ ತಲುಪುವುದು ಅನುಮಾನ ಎನ್ನಲಾಗುತ್ತಿದೆ.

ಹಿರಿಯ ಪೈಲ್ವಾನರ ಬೇಸರ

ಪ್ರತ್ಯೇಕ ಬಜೆಟ್ ನಿಗದಿಪಡಿಸಲಾಗಿದೆ...

"ನಾಡಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿದ ಪೈಲ್ವಾನರ ಅನುಭವ, ಅರ್ಹತೆ ಹಾಗೂ ಪಂದ್ಯದ ಫಲಿತಾಂಶದ ಆಧಾರದ ಮೇಲೆ ಸದ್ಯದಲ್ಲಿಯೇ ಗೌರವ ಧನ ನಿಗಧಿಪಡಿಸಲಾಗುವುದು. ಗೌರವ ಧನ ನೀಡುವುದಕ್ಕಾಗಿಯೇ ಪ್ರತ್ಯೇಕ ಬಜೆಟ್(ಮೊತ್ತ) ನಿಗಧಿಯಾಗಿದೆ. ಈ ವರ್ಷ ಹೊಸದಾಗಿ ವಿಭಾಗ ಮಟ್ಟದಲ್ಲಿ 'ದಸರಾ ಕುಮಾರ್' ಪ್ರಶಸ್ತಿ ನೀಡಲಾಗಿದೆ. ಪಾಯಿಂಟ್ ಕುಸ್ತಿ ಹಾಗೂ ಪಂಜ ಕುಸ್ತಿಯಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಊಟ, ವಸತಿ, ಪ್ರಯಾಣ ಭತ್ಯೆಯನ್ನು ನೀಡಲಾಗಿತ್ತು. ನಾಡಕುಸ್ತಿಯಲ್ಲಿ ಭಾಗವಹಿಸುವ ಪೈಲ್ವಾನರಿಗೆ ಗೌರವ ಧನ ಹೆಚ್ಚಿಸುವುದು ಅಗತ್ಯವಾಗಿದ್ದು, ಸಮಿತಿ ಸಭೆ ಕರೆದು ಚರ್ಚಿಸಿ ನಿರ್ಧರಿಸಲಾಗುವುದು. **–ಡಾ.ಬಿ.ಎನ್.ನಂದಿನಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕಿ ಹಾಗೂ ದಸರಾ ಕುಸ್ತಿ ಉಪ ಸಮಿತಿಯ ಉಪ ವಿಶೇಷಾಧಿಕಾರಿ**

ಆಸ್ತಿಗಾಗಿ 88 ವರ್ಷದ ತಾಯಿ ಹತ್ಯೆಗೆ ಯತ್ನ: 65 ವರ್ಷದ ನಿವೃತ್ತ ಸೇನಾಧಿಕಾರಿ ಬಂಧನ

ಬೆಂಗಳೂರು: ಆಸ್ತಿ ವಿಚಾರವಾಗಿ 88 ವರ್ಷದ ತಾಯಿಯನ್ನು ಆಕೆಯ ಮನೆಯಲ್ಲಿಯೇ ಹತ್ಯೆ ಮಾಡಲು ಯತ್ನಿಸಿದ 65 ವರ್ಷದ ವ್ಯಕ್ತಿಯನ್ನು ಆರ್‌ಟಿ ನಗರ ಪೊಲೀಸರು ಬಂಧಿಸಿದ್ದಾರೆ. ಮಹಿಳೆ, ಕ್ಯಾಥರೀನ್ ಡಿ'ಕ್ರೂಜ್ ಅವರಿಗೆ ನಾಲ್ಕು ಮಕ್ಕಳು. ಅವರಲ್ಲಿ ಇಬ್ಬರು ವಿದೇಶದಲ್ಲಿ ನೆಲೆಸಿದ್ದಾರೆ, ಒಬ್ಬ ಅವಿವಾಹಿತ ಮಗಳು ಆಶ್ರಮದಲ್ಲಿ ವಾಸಿಸುತ್ತಿದ್ದಾರೆ. ಆರೋಪಿ ಜಾನ್ ಡಿಕ್ರೂಜ್ ಎಲ್ಲರಿಗೂ ಹಿರಿಯನಾಗಿದ್ದಾನೆ.

ಕೋಟ್ಯಂತರ ರೂ. ಮೌಲ್ಯದ ಆಸ್ತಿಯನ್ನು ಮಗನ ಹೆಸರಿಗೆ ಮಾಡಿ ಕೊಟ್ಟರೂ, ದಾಹ ತೀರದ ಮಗ ವಯಸ್ಸಾದ ತಾಯಿಯ ಉಸಿರು ನಿಲ್ಲಿಸಲು ಮುಂದಾಗಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಈ ಘಟನೆ ಆರ್‌ಟಿನಗರದ 2ನೇ ಬ್ಲಾಕ್‌ನಲ್ಲಿ ನಡೆದಿದೆ. ಮಗ ಜಾನ್ ಡಿ ಕ್ರೂಸ್ (65)ರನ್ನು ಆರ್.ಟಿ.ನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ. ಮೊದಲನೆಯವರಾದ ಜಾನ್ ಡಿ ಕ್ರೂಸ್ ಹೆಸರಿಗೆ ಆಸ್ತಿ ಬರೆದುಕೊಟ್ಟಿದ್ದರೂ ಸಹ ತಾಯಿಯೊಂದಿಗೆ ನಿತ್ಯ ಗಲಾಟೆ ಮಾಡುತ್ತಿದ್ದರು ಎನ್ನಲಾಗ್ತಿದೆ.

ನಾಲ್ಕು ವರ್ಷಗಳ ಹಿಂದೆಯೇ ಅನಾರೋಗ್ಯಕ್ಕೆ ತುತ್ತಾತ ಕ್ಯಾಥರಿನ್‌ಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಬಳಿಕ ಮನೆಗೆ ಬಂದಾಗ ಆಕೆಯ ನೋಡಿಕೊಳ್ಳಲು ಅಮೆರಿಕದಲ್ಲಿರುವ ಪುತ್ರ ಕೇರ್ ಟೇಕರ್‌ವೊಬ್ಬರನ್ನು ನೇಮಿಸಿದ್ದರು. ನಿತ್ಯ ಕೇರ್ ಟೇಕರ್ ಬಂದು ನೋಡಿಕೊಳ್ಳುತ್ತಿದ್ದರು. ಆದರೆ, ಆರೋಪಿ ತಾಯಿಗೆ ಅಳವಡಿಸಿದ್ದ ಕೃತಕ ಉಸಿರಾಟ ಆಕ್ಸಿಜನ್ ಮಾಸ್ಕ್ ತೆಗೆದು ಹತ್ಯೆಗೆ ಯತ್ನಿಸಿದ್ದಾನೆ. ಅದನ್ನು ಗಮನಿಸಿದ ಕೇರ್ ಟೇಕರ್ ಪ್ರಶ್ನಿಸಿದ್ದಾರೆ. ಆಗ ಆರೋಪಿ ಆಕೆ ಸಾಯಲಿ ಎಂದು ಆಕ್ಸಿಜನ್ ಮಾಸ್ಕ್ ತೆಗೆದರೆ, ನೀವು ಹಾಕುತ್ತಿದ್ದಿರಾ ಎಂದೆಲ್ಲ ಪ್ರಶ್ನಿಸಿದ್ದಾನೆ. ಹೀಗಾಗಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆದರಿಂದ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿ 2019 ಡಿಸೆಂಬರ್‌ನಲ್ಲಿಯೂ ಇದೇ ರೀತಿ ತಾಯಿಯ ಕೊಲೆಗೆ ಯತ್ನಿಸಿದ್ದ. ಕೂಡಲೇ ಎಚ್ಚೆತ್ತ ಕೇರ್ ಟೇಕರ್ ಪೊಲೀಸರಿಗೆ ಕರೆ ಮಾಡಿದ್ದರಂದ ಸ್ಥಳಕ್ಕೆ ಬಂದ ಆರ್‌ಟಿ ನಗರ ಪೊಲೀಸರು ವೃದ್ಧೆ ಕ್ಯಾಥರೀನ್‌ರನ್ನು ರಕ್ಷಿಸಿದ್ದಾರೆ. ಕೇರ್ ಟೇಕರ್ ದೂರಿನ ಮೇರೆಗೆ ಆರ್‌ಟಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತಾಯಿಯನ್ನೇ ಕೊಲೆ ಮಾಡಲು ಮುಂದಾಗಿದ್ದ ಮಗನನ್ನು ಬಂಧಿಸಿದ್ದಾರೆ. ಜಾನ್ ವಿರುದ್ಧ ಐಪಿಸಿ ಸೆಕ್ಷನ್ 307ರ ಅಡಿಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿದೆ.

ಮದರಸಾಗೆ ನುಗ್ಗಿ ಪೂಜೆ: 9 ಮಂದಿ ವಿರುದ್ಧ ಎಫ್‌ಐಆರ್

ಬೀದರ್: ದಸರಾ ಮೆರವಣಿಗೆ ವೇಳೆ ಹಿಂದೂ ಸಮುದಾಯದ ಗುಂಪೊಂದು ಮದರಸಾಗೆ ನುಗ್ಗಿ ಪೂಜೆ ಮಾಡಿರುವ ಘಟನೆ ಬೀದರ್ ನಗರದ ಓಲ್ಡ್ ಸಿಟಿಯಲ್ಲಿರುವ ಮೊಹಮ್ಮದ್ ಗವಾನ್ ಮದರಸಾದಲ್ಲಿ ನಡೆದಿದೆ.

ನವರಾತ್ರಿಯ ಮೆರವಣಿಗೆ ವೇಳೆ ಮೊಹಮ್ಮದ್ ಗವಾನ್ ಮದರಸಾದ ಹೊರಗಡೆ ಹಿಂದೂ ಸಮುದಾಯದವರು ದೇವಿಗೆ ಪೂಜೆ ಮಾಡುತ್ತಿದ್ದರು. ಆದರೆ ಈ ಬಾರಿ ನೇರವಾಗಿ ಮದರಸಾಕ್ಕೆ ನುಗ್ಗಿ, ಜೈ ಭವಾನಿ, ವಂದೇ ಮಾತರಂ, ಹಿಂದೂ ಧರ್ಮಕೀ ಜೈ ಎಂದು ಘೋಷಣೆ ಕೂಗಿ ಪೂಜೆ ಮಾಡಿದ್ದಾರೆ. ಘಟನೆ ಬಗ್ಗೆ ಮೊಹಮ್ಮದ್ ಶಫಿಯುದ್ದೀನ್ ನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಮದರಸಾದ ಬೀಗ ಮುರಿದು, ಸೆಕ್ಯೂರಿಟಿ ಮೇಲೆ ಹಲ್ಲೆಗೆ ಯತ್ನ ಮಾಡಿ ಸಮಾಜದಲ್ಲಿ ಶಾಂತಿ ಕದಡಲು ಯತ್ನಿಸಿದ್ದಾರೆ ಎಂದು ದೂರು ನೀಡಿದ್ದಾರೆ. ಪೊಲೀಸರು 9 ಜನರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಥಾಯ್ಲೆಂಡ್: 23 ಮಕ್ಕಳು ಸೇರಿ 35 ಮಂದಿಗೆ ಗುಂಡಿಕ್ಕಿ ಕೊಂದು, ಕುಟುಂಬವನ್ನೂ ಶೂಟ್ ಮಾಡಿ ಆತ್ಮಹತ್ಯೆಗೆ ಶರಣಾದ ಬಂದೂಕುಧಾರಿ



ಥಾಯ್ಲೆಂಡ್: ಥಾಯ್ಲೆಂಡ್‌ನ ಈಶಾನ್ಯ ಪ್ರಾಂತ್ಯದಲ್ಲಿ ಮಕ್ಕಳ ಡೇ–ಕೇರ್ ಸೆಂಟರ್‌ನಲ್ಲಿ ಗುರುವಾರ ನಡೆದ ಸಾಮೂಹಿಕ ಗುಂಡಿನ ದಾಳಿಯಲ್ಲಿ 23 ಮಕ್ಕಳು ಸೇರಿದಂತೆ ಸುಮಾರು 35 ಮಂದಿ ಸಾವನ್ನಪ್ಪಿದ್ದಾರೆ. ಲ್ಯಾಂಪು ಪಟ್ಟಣದ ಮಧ್ಯ ಭಾಗದಲ್ಲಿ ಬಂದೂಕುಧಾರಿಯು ಮಧ್ಯಾಹ್ನದ ವೇಳೆಗೆ ಗುಂಡಿನ ದಾಳಿ ನಡೆಸಿದ್ದಾನೆ. ಸಾವಿಗೀಡಾದವರಲ್ಲಿ ಮಕ್ಕಳು ಮತ್ತು ವಯಸ್ಕರು ಸೇರಿದ್ದಾರೆ. ಬಂದೂಕುಧಾರಿ ಮಾಜಿ ಪೊಲೀಸ್ ಅಧಿಕಾರಿಯಾಗಿದ್ದು, ಡೇ–ಕೇರ್ ಸೆಂಟರ್‌ನಲ್ಲಿ ಗುಂಡಿನ ದಾಳಿ ನಡೆಸಿದ ನಂತರ ತನ್ನ ಕುಟುಂಬವನ್ನು ಶೂಟ್ ಮಾಡಿ ಬಳಿಕ ತಾನೂ ಶೂಟ್ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬಂದೂಕು ಧಾರಿಯನ್ನು ಪನ್ಯಾ ಖಮ್ರಾಬ್ ಎಂದು ಗುರುತಿಸಲಾಗಿದ್ದು, ಅವರು ಕಳೆದ ವರ್ಷ ಮಾದಕ ವಸ್ತು ಸೇವನೆಗಾಗಿ ಸೇನಾಪಡೆಯಿಂದ ವಜಾಗೊಂಡಿದ್ದರು ಎಂದು ದಾಳಿ ನಡೆದ ಪ್ರಾಂತ್ಯದ ಪೊಲೀಸ್ ಕರ್ನಲ್ ಜಕ್ಕಪಟ್ ವಿಜಿತ್ರೈತಯಾ ಹೇಳಿದ್ದಾರೆ.



ಮೃತಪಟ್ಟವರಲ್ಲಿ ಎರಡರಿಂದ ಮೂರು ವರ್ಷ ವಯಸ್ಸಿನ 23 ಮಕ್ಕಳಿದ್ದಾರೆ. ದಾಳಿ ನಡೆದ ಸಮಯದಲ್ಲಿ ಹೆಚ್ಚಿನ ಮಕ್ಕಳು ಮಲಗಿದ್ದರೆನ್ನಲಾಗಿದ್ದು, ಪನ್ಯಾ ಖಮ್ರಾಬ್ ಅವರು ಡೇ–ಕೇರ್ ಸೆಂಟರ್‌ನಲ್ಲಿ ಗುಂಡಿನ ದಾಳಿ ನಡೆಸಿದ ನಂತರ ತನ್ನ ಹೆಂಡತಿ ಮತ್ತು ಮಗುವನ್ನು ಗುಂಡಿಕ್ಕಿ ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಮುಂಬೈ ವಿಮಾನ ನಿಲ್ದಾಣದಲ್ಲಿ 100 ಕೋಟಿ ಮೌಲ್ಯದ ಹೆರಾಯಿನ್ ಜಪ್ತಿ, ಇಬ್ಬರ ಬಂಧನ

ಮುಂಬೈ: ಛತ್ರಪತಿ ಶಿವಾಜಿ ಮಹಾರಾಜ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆದಾಯ ಗುಪ್ತಚರ ನಿರ್ದೇಶನಾಲಯ ಮುಂಬೈ ವಿಮಾನ ನಿಲ್ದಾಣದಲ್ಲಿ 100 ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ 16 ಕೆಜಿ ಹೆರಾಯಿನ್ ವಶಪಡಿಸಿಕೊಂಡಿದೆ ಮತ್ತು ಈ ಸಂಬಂಧ ಘಾನಾದ ಒಬ್ಬ ಪುರುಷ ಮತ್ತು ಮಹಿಳೆಯನ್ನು ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.




ಪ್ರಕರಣದಲ್ಲಿ ಡಿಆರ್‌ಐನ ಮುಂದಿನ ಕ್ರಮದ ಭಾಗವಾಗಿ ಘಾನಾದ ಮಹಿಳೆಯನ್ನು ದೆಹಲಿಯ ಹೋಟೆಲ್‌ನಿಂದ ಬಂಧಿಸಲಾಯಿತು ಎಂದು ಅವರು ತಿಳಿಸಿದ್ದಾರೆ. ಆಫ್ರಿಕನ್ ರಾಷ್ಟ್ರವಾದ ಮಲಾವಿಯಿಂದ ಕತಾರ್ ಮೂಲಕ ಮುಂಬೈಗೆ ಪ್ರಯಾಣಿಸುತ್ತಿದ್ದ ಪ್ರಯಾಣಿಕರೊಬ್ಬರು ಮಾದಕ ದ್ರವ್ಯಗಳನ್ನು ದೇಶಕ್ಕೆ ಕಳ್ಳಸಾಗಣೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬ ನಿರ್ದಿಷ್ಟ ಸುಳಿವಿನ ಮೇರೆಗೆ ಡಿಆರ್‌ಐ ಮುಂಬೈ ಘಟಕ ಮಂಗಳವಾರ ಛತ್ರಪತಿ ಶಿವಾಜಿ ಮಹಾರಾಜ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತೀವ್ರ ಶೋಧ ನಡೆಸಿತು ಹೇಳಿದ್ದಾರೆ.

ಡಿಆರ್‌ಐ ಅಧಿಕಾರಿಗಳ ಶೋಧದ ವೇಳೆ ಟ್ರಾಲಿ ಬ್ಯಾಗ್‌ಗಳಲ್ಲಿ ಬಚ್ಚಿಟ್ಟಿದ್ದ 16 ಕೆಜಿ ಹೆರಾಯಿನ್ ಪತ್ತೆಯಾಗಿದೆ. ವಶಪಡಿಸಿಕೊಳ್ಳಲಾದ ಹೆರಾಯಿನ್‌ನ ಮೌಲ್ಯವು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ 100 ಕೋಟಿ ರೂ.ಗೂ ಹೆಚ್ಚು ಎಂದು ಹೇಳಿದ್ದಾರೆ. ಹೆರಾಯಿನ್ ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಿದ್ದು, ಸ್ಥಳೀಯ ನ್ಯಾಯಾಲಯ ಡಿಆರ್‌ಐ ಕಸ್ಟಡಿಗೆ ನೀಡಿದೆ.

ಮುಕೇಶ್ ಅಂಬಾನಿ ಕುಟುಂಬಕ್ಕೆ ಬೆದರಿಕೆ: ಓರ್ವನ ಬಂಧನ

ಮುಂಬೈ: ಉದ್ಯಮಿ ಮುಕೇಶ್ ಅಂಬಾನಿ ಮತ್ತು ಅವರ ಕುಟುಂಬಕ್ಕೆ ಬೆದರಿಕೆ ಕರೆಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಮುಂಬೈ ಪೊಲೀಸರು ಬಿಹಾರದ ದರ್ಭಾಂಗದ ವ್ಯಕ್ತಿಯನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ರಾಕೇಶ್ ಮಿಶ್ರಾ ಎಂದು ಗುರುತಿಸಲಾಗಿದೆ. ಆರೋಪಿಯೊಂದಿಗೆ ಪೊಲೀಸ್ ತಂಡ ಮುಂಬೈಗೆ ಮರಳುತ್ತಿದೆ. ಮಿಶ್ರಾನನ್ನು ಐಪಿಸಿ ಸೆಕ್ಷನ್ 506 (2) ಮತ್ತು 507 ಅಡಿ ಬಂಧಿಸಲಾಗಿದೆ. ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಹೇಳಿದ್ದಾರೆ.



ಸುಪ್ರೀಮ್ ಮೋಟಾರ್ಸ್ ವತಿಯಿಂದ ಬಜಾಜ್ ಕಂಪನಿಯ ತ್ರಿಚಕ್ರ ವಾಹನ ಬಿಡಿಭಾಗದ ನೂತನ ಘಟಕವನ್ನು ಮೈಸೂರಿನ ಹುಣಸೂರು ರಸ್ತೆಯಲ್ಲಿ ಉದ್ಘಾಟಿಸಲಾಯಿತು.

In the Court of the Hon'ble Senior Civil Judge at Periyapatna
OS. No.89/2021
Plaintiff : Smt. Nanjamanni
V/s
Defendants : Smt. Nagarathnamma and others

PUBLIC NOTICE

Take notice that the Plaintiffs have preferred the present suit against the Defendants seeking for relief of Partition and Separate Possession of the suit Schedule Properties. This notice is caused to intimate the Defendant No.12 Sri. P.M.Raju S/o H.P.Mallaiah, residing at Channapattana Street, Periyapatna Town, Mysuru district and Defendant No.13 Sri. M.Adbul Razak S/o M.S. Mohammad, residing at No.4/1250, 4th Block, Khushalanagara, Kodagu District. That the above original Suit is posted for appearance of the Defendant No.12 and 13 before this Hon'ble Court on 27/10/2022 at 11.00 am. In the event of failure of the Defendant No.12 and 13 to appear on the said date, the matter will be proceeded ex-parte.

By Order of the Court,
Sd/-(Sheristedar)
Senior Civil Judge
Periyapattana

Advocate for Plaintiff
Sd/- Sri H.P.Rakshith
Advocate,
No.1143/1E, Chanakya Circle,
Geetha Road,
Chamarajapuram, Mysore-04

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು
ಮೈಸೂರು–ನಂಜನಗೂಡು ರಸ್ತೆ, ಬಂಡೀಪಾಳ್ಯ,ಮೈಸೂರು–570 025
E-Mail:apmcmysore@rediffmail.com
ದೂರವಾಣಿ:0821–2482389 apmcmys@gmail.com
ಸಂ. ಕೃಉಮಾಸ(ಮೈ)/1397/2022–23 ದಿನಾಂಕ: 06.10.2022

ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು ಇವರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ, ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣ ಮತ್ತು ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಸಗಟು ಹಣ್ಣುಗಳ ಮಾರುಕಟ್ಟೆ ಉಪ ಪ್ರಾಂಗಣಗಳಲ್ಲಿ ಸಿ.ಸಿ.ಟಿವಿ ಅಳವಡಿಸಲು ಅಗತ್ಯವಿರುವ ಪರಿಕರಗಳಿಗೆ ಮೂಲದರ ನಿಗಧಿಪಡಿಸಲು ಆಸಕ್ತಿಯುಳ್ಳ ಸೇವಾ ಸಂಸ್ಥೆಗಳಿಂದ ದರಗಳನ್ನು ಅಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತ ರೂ.00–00, ಇ.ಎಂ.ಡಿ. ರೂ.1–00 ಟೆಂಡರ್ ವೇಳಾಪಟ್ಟಿ: ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿ: 21.10.2022 ರಂದು ಸಂಜೆ 4.00 ಗಂಟೆ, ಟೆಂಡರ್‌ಗಳನ್ನು ತೆರೆಯುವ ದಿ: 25.10.2022 ರಂದು ಸಂಜೆ 5.00 ಗಂಟೆ. ಹೆಚ್ಚಿನ ಮಾಹಿತಿಗಾಗಿ: https://eproc.karnataka.gov.in/eportal/index.seam


ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೈಸೂರು
ಸಹಿ/– ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೈಸೂರು

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005
ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–3:292:2022–23 ದಿನಾಂಕ: 30–09–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಇಲವಾಲ ಗ್ರಾಮದ ಸರ್ವೆ ನಂ. 81/3ರ 01 ಎಕರೆ 18ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀಮತಿ ಭಾಗ್ಯಮ್ಮ ಬಿನ್ ಲೇಟ್ ರಾಮದಾಸೇಗೌಡ ಕೋಂ ಮರೀಗೌಡ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **" ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸಿರುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ"** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗೆ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570 005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಶ್ರದ್ಧಾಂಜಲಿ



ಶ್ರೀಮಾನ್ ಎಲ್. ಚಿನ್ನಪ್ಪನವರು
ನಿಧನ 02.10.2022 RB(i)L
ಸಂತಾಪ ಸೂಚಿಸುವವರು:
Reckitt Employees, Mysuru